ಸಾಹಿತ್ಯ ದಾಸೋಹ ೧೮೬

ಸಮನ್ವಯ ಸಮಿತಿ



ಕನ್ನಡವೇ ಸತ್ಯ


ನೋಡಿಯೋ ಸಾಹಿತ್ಯ ದಾಸೋಹ



ದಾಸೋಹದಲ್ಲಿ ಸದಸ್ಯರು ಪ್ರಸ್ತುತಿ ಪಡಿಸಿದ ಪ್ರಸ್ತುತಿಗಳ ಮುದ್ರಣ

ಶನಿವಾರ - ೯-೧-೨೦೨೧







ಸಾಹಿತ್ಯ ದಾಸೋಹ ೧೮೬

ಕಾರ್ಯಕ್ರಮದ ವರದಿ

ದಿನಾಂಕ ೦೯.೦೧.೨೦೨೧ ಶನಿವಾರ ಸಂಜೆ ನಾಲ್ಕು ಗಂಟೆಗೆ ಸರಿಯಾಗಿ ಕಾರ್ಯಕ್ರಮ ಆರಂಭವಾಯ್ತು.
ದಾಸೋಹದ ಸಂಚಾಲಕರಾದ ಶ್ರೀ ಕೆ.ಎನ್ ಮಹಾಬಲರವರು ಕಾರ್ಯಕ್ರಮವನ್ನು ನಿರ್ವಹಿಸಿದರು.

ಶ್ರೀಮತಿ ರೇಣುಕಾ ದೇಸಾಯಿಯವರು ಹೊಸವರ್ಷಕ್ಕೆ ಶುಭಕೋರಿ, ಎಲ್ಲರನ್ನೂ ವರ್ಷದ ಆರಂಭದ ೧೮೬ ನೇ ಸಾಹಿತ್ಯ ದಾಸೋಹಕ್ಕೆ ಸ್ವಾಗತಿಸಿ ಇಂದಿನ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಶ್ರೀಮತಿ ಟಿ.ಎಸ್.ಶ್ರವಣಕುಮಾರಿಯವರನ್ನು ಪರಿಚಯಿಸಿದರು.
ಭಾರತೀಯ ಸ್ಟೇಟ್ ಬ್ಯಾಂಕಿನಿಂದ ನಿವೃತ್ತರಾಗಿರುವ ಶ್ರವಣಕುಮಾರಿಯವರು, ಸಮನ್ವಯ ಸಮಿತಿ ಕನ್ನಡವೇ ಸತ್ಯ ವೇದಿಕೆಯ ಸಂಚಾಲಕರಲ್ಲಿ ಒಬ್ಬರಾಗಿದ್ದು ತಮ್ಮ ಕಥೆ ಕವನ ಲೇಖನಗಳಿಂದ ಎಲ್ಲರಿಗೂ ಪರಿಚಿತರಾಗಿದ್ದಾರೆ.
ಇವರ ಅಸ್ಪಷ್ಟ ತಲ್ಲಣಗಳು ಕೃತಿಗೆ ಮೈತ್ರಿ ಪುಸ್ತಕ ಬಹುಮಾನ ಬಂದಿದ್ದು, ಇವರ "ಬೊಗಸೆಯಲ್ಲಿ ಕಂಡ ಅಮೇರಿಕ" ಕೃತಿಯೂ ಜನಪ್ರಿಯವಾಗಿದೆ. ಇವರ ಪ್ರಬಂಧಗಳು ಗದ್ಯದ ಭಾವಗೀತೆಗಳೋ ಎಂಬಂತೆ ಭಾವಪೂರ್ಣವಾಗಿರುತ್ತವೆ ಎಂದರು.

೨೩ ಸದಸ್ಯರು ತಮ್ಮ ಲೇಖನಗಳನ್ನು ಮಂಡಿಸಿದರು.
ಕಥೆ, ಕವನ, ವೈಚಾರಿಕ, ಹಾಸ್ಯ ಲೇಖನಗಳು ಮಂಡಿತವಾದವು
ಕಾರ್ಯಕ್ರಮದಲ್ಲಿ ಸುಮಾರು ೪೫ ಜನ ಹಾಜರಿದ್ದರು

ಸಾಹಿತ್ಯ ದಾಸೋಹ ೧೮೫ ರ ಪಿ ಡಿ ಎಫ್ ಪ್ರತಿಯನ್ನು ಬಿಡುಗಡೆ ಮಾಡಿ ಮಾತನಾಡಿದ ಪ್ರಧಾನ ಸಂಚಾಲಕರಾದ ಶ್ರೀ ಬೆಂ ಶ್ರೀ ರವೀಂದ್ರರವರು, ಪಿಡಿಎಫ್ ಅವೃತ್ತಿಯ ಮುಖಪುಟದ ಅಂದವನ್ನು ಶ್ಲಾಘಿಸಿ, ಬಹಳ ಸುಂದರವಾಗಿ ಹೊರತಂದ

ಶ್ರೀ ಎಚ್ ಎಲ್ ಗುರುಪ್ರಸಾದ್ ರವರನ್ನು ಅಭಿನಂದಿಸಿದರು. ಈ ಆವೃತ್ತಿಯಲ್ಲಿ ಹುವಾ ಶ್ರೀಪ್ರಕಾಶ್ ರವರು ಬರೆದ ನೋಡಿಯೋ ದಾಸೋಹ ನಡೆಸಿದ ಮೂರು ವಿಶೇಷ ಕಾರ್ಯಕ್ರಮಗಳ ವರದಿಯೂ ಇದೆ. ಇದುವರೆಗೆ ಒಂಬತ್ತು ಪಿಡಿಎಫ್ ಪ್ರತಿಗಳು ಬಿಡುಗಡೆಯಾಗಿದ್ದು, ಆರು ದಾಸೋಹದ ಸಂಚಿಕೆಗಳನ್ನು ಯಾರಾದರೂ ಅಧ್ಯಯನ ಮಾಡಿ ಲೇಖನ ಬರೆದಲ್ಲಿ ಅದನ್ನು ದಾಖಲಿಸಲಾಗುವುದು ಎಂದರು.

ವೇದಿಕೆಯಲ್ಲಿ ಶಾಂತಾ ಗೋಪಾಲ್ ರವರು ಬರೆಯುತ್ತಿರುವ ಕುಮಾರವ್ಯಾಸ ಚಿತ್ರಿಸಿದ ರಸಘಟ್ಟಗಳು ಅನೇಕರ ಆಸಕ್ತಿ ಕೆರಳಿಸಿದೆ. ಇದರ ಬಗ್ಗೆ ಜನವರಿ ೨೬ ರಂದು ನೋಡಿಯೋ ಕಾರ್ಯಕ್ರಮ ಅವರು ನಡೆಸಿಕೊಡಲಿದ್ದಾರೆ ಎಂದು ಪ್ರಕಟಿಸಿದರು.

ವರ್ಷದ ಆರಂಭದಲ್ಲಿ ೧೮೬ ನೇ ಸಾಹಿತ್ಯದಾಸೋಹದ ಅಧ್ಯಕ್ಷತೆ ವಹಿಸುವ ಈ ಗೌರವ ಪ್ರಾಪ್ತವಾದದ್ದು ನನ್ನ ಸೌಭಾಗ್ಯ ಎಂದು ಮಾತು ಆರಂಭಿಸಿದ ಶ್ರವಣಕುಮಾರಿಯವರು, ಪ್ರಸ್ತುತಿಕಾರರೆಲ್ಲರ ಬಗ್ಗೆಯೂ ವಿಶೇಷವಾಗಿ ಎರಡು ಮಾತು ಹೇಳಿ ಪ್ರತಿಯೊಬ್ಬರ ಪ್ರಸ್ತುತಿಗಳನ್ನೂ ಮೆಚ್ಚಿ ಪ್ರೋತ್ಸಾಹಿಸಿದರು. ಕೊನೆಯಲ್ಲಿ ತಮ್ಮ ಒಂದು ಹಾಸ್ಯ ಲೇಖನ ಓದಿದರು.

ಶ್ರೀಮತಿ ಗೌರಾಂಬರವರು ಎಲ್ಲರಿಗೂ ವಂದನಾರ್ಪಣೆ ಸಲ್ಲಿಸಿದರು.

ಹೆಚ್ ವಿ ಶ್ರೀಪ್ರಕಾಶ್

ಪರಿವಿಡಿ

19	ಜಯಂತಿ ಮನೋಹರ್	ಅನ್ಯಗ್ರಹವಾಸಿಗಳ “ಮಹಾ ಸಂಪರ್ಕ”
20	ಗುರುರಾಜ ಶಾಸ್ತ್ರಿ	ಹಕ್ಕಿ ಹಬ್ಬ - 2021
21	ಅನ್ನಪೂರ್ಣ ಸೀತಾರಾಮು	ಒಂದು ನಿಮಿಷ ಬಂದೆ
22	ಎಂ ಜಿ ವೆಂಕಟೇಶಮೂರ್ತಿ	ಹರ್ಷೋದ್ಗಾರದ ವರ್ಷ
23	ಶ್ರೀಧರ ಬಾಣಾವರ	ಪುಟ್ಟ ಪುಟ್ಟಿಯ ಪರಿಸರ ಪಾಠಗಳು - ಪುಸ್ತಕ ಪರಿಚಯ
24	ಗುಹಾ	ಬೇಂದ್ರೆಯವರ ಮೇಲೆ ಶ್ರೀಮಾತಾ - ಶ್ರೀ ಅರವಿಂದರ ಪ್ರಭಾವ
25	ಮಹಾಬಲ	ಪರೀಕ್ಷೆ
26	ಶ್ರವಣಕುಮಾರಿ	ನಮ್ಮ ಕಾಮಾಕ್ಷಿಯ ಅಮಾಯಕತೆ

ಕವನ - ತಂತ್ರಕ್ಕೆ ತಂತ್ರ	ಬೆಂಶ್ರೀ ರವೀಂದ್ರ

ಧರಣಿ ಮಂಡಲ ಮಧ್ಯದಲ್ಲಿ
ಇರುವ ಸಿಂಧು ದೇಶದಲ್ಲಿ
ಇದ್ದನೊಬ್ಬ ಜಾಣ ಹುಡುಗನು
ಸಿರಿವಂತನಾಗ ಬಯಸಿದ
ತರತರದ ಚಿಂತೆಯ ಮಾಡಿದ

ಮೇಧಾವಿತನಕೆ ಮಗ್ಗಲಿಲ್ಲ
ಸಿರಿಯ ತೇರಿಗೆ ಜಾತಿಯೆಲ್ಲ
ಎನುತ ಹಿಡಿದು ತುಂಡು ಗುತ್ತಿಗೆ
ಜಾತಿ ಬಾಂಧವನ ನೆರಳಿನಲ್ಲಿ
ಸಿರಿಯ ಸೋಪಾನವೇರಿದ

ನಾಕು ರಸ್ತೆಯು ಕೂಡುವಲ್ಲಿ
ದೊಡ್ಡ ಬಂಗಲೆ ಕಟ್ಟಿಸಲ್ಲಿ
ಬುದ್ದ ಬಸವ ಅಂಬೇಡ್ಕರಗೆ
ಚೌತಿ ನವಮಿ ಮೊಹರಮ್ಮಿಗೆ
ಸಹಾಯ ಹಸ್ತವ ಚಾಚಿದ

ಮನೆಯಲೀಗ ಸಾಲು ಜನರು
ಜನಸೇವೆ ಮಂತ್ರಿ ಮಾಗಧರು
ಶಾಲೆ ದೇವಸ್ಥಾನ ದೇಣಿಗೆ
ಸಜಾತೀಯರ ಸ್ಥಾನ ಮಾನ
ಅನುತನಾದ ಜನಪ್ರಿಯನು

ವಿಜಾತಿಯ ಸಭಾಸದನಿಳಿಸಿ
ತನ್ನವನೊಬ್ಬನ ಅಲ್ಲಿ ಕೂಡಿಸಿ
ಥೈಲಿ ತೋಳು ಬಲವ ಬೆಳಸಿ

ಸಜಾತಿಯರಿಗೆ ಮುಖ್ಯನಾಗಿ
ಮೆರೆಯಲವನು ಎಣಿಸಿದ

ಊರನಡುವಿನ ಚೌಕಿಯಲ್ಲಿ
ತನ್ನ ಅಪ್ಪನ ವಿಗ್ರಹವನಿರಿಸಿ
ಮಂತ್ರಿವರ್ಯರ ತಾನು ಕರೆಸಿ
ಸಜಾತಿ ನಾಯಕನಲ್ಲಿ ತರಿಸಿ
ಚುನಾವಣೆ ಗೆಲ್ಲಲು ಹೂಡಿದ

ಓಹೋ..ಹೋ ಏನು ಆಯ್ತು
ರಾತೋರಾತ್ರಿ ಚೌಕಿಯಲ್ಲಿ
ನಾಡುನುಡಿಗೆ ದುಡಿದನೆಂದು
ತುತ್ತೂರಿಯನಾರೊ ಊದಲು
ಎದ್ದಿತೊಂದು ಸಾಹಿತಿ ವಿಗ್ರಹ,

ಮೇಲೆ ಎದ್ದರು ಸಜಾತಿ ಜನರು
ಭುಗಿಲು ಭುಗಿಲು ಊರಲೆಲ್ಲ
ಎಂತು ಸಾಹಿತಿಯ ವಿಗ್ರಹ
ತೆರವು ಹೆಸರು ಕೆಸರಾಗದೆ
ಸಜಾತಿ ನಾಯಕ ಕುದಿದನು

ಮತ್ತೊಂದು ದಿನ ರಾತ್ರಿಯಲ್ಲಿ
ವೋ..ವಿಗ್ರಹವಾಯ್ತು ಭಂಗ
ಪೇಪರ್ ಟಿವಿ ಬಿತ್ತರದಲಿ
ಎಂಥ ಸಾಹಿತಿಗೆಂತ ಭಂಗ
ಲಂಡ ಲಫಂಗರ ರಾಜ್ಯವೇ

ಕಾನೂನು ಕಟ್ಟಳೆ ಮುರಿದುಬಿತ್ತೆ
ಊರಲಾಯಿತೆ ಶಾಂತಿಭಂಗ
ಹಾಗಾಗದ್ದಿದು ಆಶ್ಚರ್ಯವೆ!
ಶಾಂತಿ ಸಮಿತಿ ಸಭೆಯ ಕರೆದು
ಸಭಾಸದ ನಿರ್ಣಯ ಮಾಡಿದ

ಶ್ರೀಮಂತನಪ್ಪನು ದೊಡ್ಡ ಮನುಜ
ಅವನ ಜನರ ನಡುವಿನಲ್ಲಿ
ಕಂಗೊಳಿಸಲವನ ವಿಗ್ರಹ
ಸಾಹಿತಿ ಬದುಕಿಹನು ಬರಹದಿಂದ
ಬೇರೆಲ್ಲೊ ಇರಲವನ ವಿಗ್ರಹ

ಕಳೆದು ಗೊಂದಲ ಚೌಕಿಯಲ್ಲಿ
ಶ್ರೀಮಂತನಪ್ಪನ ವಿಗ್ರಹವೆದ್ದು
ಸಾಹಿತಿ ವಿಗ್ರಹ ಗೋಡೌನ ಸೇರಿ
ಸಜಾತಿ ವಿಜಾತಿ ಜನರು ಕೂಡಿ
ಸಭಾಸದಗೆ ಜೈ ಜೈ..ಅಂದರು

ಸಜಾತಿ ನಾಯಕ ಕುದಿಯುತಿದ್ದ
ವಿಜಾತಿ ಸಭಾಸದ ನಗುಲಿದ್ದ
ವಿಗ್ರಹವನಿಟ್ಟ, ವಿಗ್ರಹನೊಡೆದ
ಶ್ರೀಮಂತನಪ್ಪನ ವಿಗ್ರಹಕೆ ಸಮ್ಮಾನ
ಸಜಾತಿ ವಿಜಾತಿ ಮತವವನ ಪಾಲು

ಒಳಸುಳಿಯ ಜಾಡು ಹಿಡಿದು
ತಂತ್ರಕೆ ತಂತ್ರ ಹೂಡಿದ್ದ ಸಭಾಸದ
ಮುಂದಿನ ಚುನಾವಣೆಯಲಿ
ಸಜಾತೀಯ ನಾಯಕನ ಪಾಡು
ಆಗುವುದೆ ಮತ್ತೆ ಕಾಡುಪಾಲು.

ಕವನ - ರಜಾ-ಸಜಾ.	ಶ್ರೀಮತಿ ಗೌರಿ ಭಟ್ಟ

ರವಿವಾರದೊಂದು ದಿನ ರಜಾ ಮಜದಲ್ಲಿದ್ದೆ
ಕೆಲಸಕ್ಕೆಲ್ಲಾ ಸಜಾ ಹಾಕಿ ಹಾಯಾಗಿದ್ದೆ
ಯಜಮಾನರೂ ಊರಲಿಲ್ಲ ಆರಾಮವಾಗಿದ್ದೆ.

ನಿನ್ನೆಯ ಮಿಕ್ಕಿ ದ ಅನ್ನವ ನೆನೆದು ಆಲಸ್ಯದಿಂದೆದ್ದೆ.
ಅದೇ ನೆನಪಿನಲಿ ಖುಷಿ ಯಿಂದ ತಡವಾಗಿ ಎದ್ದೆ
ತಲೆಗೆ ಎಣ್ಣೆ ಮೆತ್ತಿಕೊಂಡು ಅಭ್ಯಂಜನಕ್ಕೆ ತಯಾರಾಗಿದ್ದೆ.

ಸರಿಯಾಗಿ ಆ ಸಮಯ ನನ್ನ ಫೋನು ರಿಂಗಾಣಿಸಿತು
ಬೇಡವಾದ ಮನಸಿನಿಂದಲೇ ಕೈ ರಿಸೀವರ್ ಎತ್ತಿತು
ಆ ಕಡೆಯ ಸಂಬಂಧಿಯ ಧ್ವನಿಯೇಕೋ ಕಂಗೆಡಿಸಿತು.

ಕುಟುಂಬ ದವರೊಡಗೂಡಿ ಬರುತ್ತಿದ್ದಾರೆ ನಮ್ಮ ಮನೆಗೆ
ಬಿಸಿ ವಾರ್ತೆ ಕೇಳಿ ಗರ ಬಡಿದಂತಾಯ್ತು ನನ್ನ ಮನಸಿಗೆ
ಗಡಬಡಿಸಿ ಎದ್ದು ಓಡಿದೆ ಅವಕಾಶ ಕೊಡದೇ ಮರುಮಾತಿಗೆ.

ತಲೆಗೆ ಎಣ್ಣೆ ಮೆತ್ತುಕೊಂಡಿದ್ದಾಗಿದೆ,ಸ್ನಾನ ಮಾಡಬೇಕು
ಕುಳ್ಳಿರಿಸಲು ಸೋಫಾ, ಖುರ್ಚಿ ಖಾಲಿ ಮಾಡಬೇಕು
ಬೇಕಾಬಿಟ್ಟಿಯಾಗಿದ್ದ ವಸ್ತುಗಳನು ಒಪ್ಪವಾಗಿಡಬೇಕು.

ತಿನ್ನಲು ಅವಲಕ್ಕಿ ಯಾದರೂ ಮಾಡಲೇಬೇಕು.
ಮೇಲಾಗಿ ಜೊತೆಯಲ್ಲಿ ಚುಡುವಾ ಇಡಬೇಕು
ಕುಡಿಯಲು ಖಡಕ್ ಬಿಸೀ ಚಹಾ ಆಗಲೇ ಬೇಕು.

ತಲೆಗೆ ಮೆತ್ತಿದ ಎಣ್ಣೆ ಮುಖಕ್ಕೆ ಇಳಿತಾ ಇದೆ
ಮಾಡಲಿರುವ …ಕೆಲಸಗಳ ಪಟ್ಟಿ ಬೆಳೀತಾ ಇದೆ
ಬಿಸಿ ಉಸಿರು ಜೋರಾಗಿ ,ಬೆವತು ಹೋದೆ.

ಖುರ್ಚಿಯನು ತುಂಬಿವೆ, ಆಫೀಸ್ ಚೀಲಗಳು
ಸೋಫಾದಲ್ಲಿ ಇಸ್ತ್ರಿಗಾಗೆ ಕಾಯುತಿರುವ ಬಟ್ಟೆಗಳು
ತೊಳೆದು ಮಡಿಚಿಡಬೇಕಾದ ಸೀರೆ, ಚೂಡಿದಾರಗಳು.

ಸಾಗಿಸಿದೆ ಹರಡಿದ ಬಟ್ಟೆಗಳ ರಹಸ್ಯ ಕೋಣೆಗೆ
ಸರಿದಾರಿ ಕಾಣಿಸಿದೆ ಸೀರೆ,ಚೂಡಿದಾರಗಳಿಗೆ
ಜಾಡಿಸಿದೆ ಪೊರಕೆಯ ಮೂಲೆ ಮೂಲೆಗೆ.

ಸೋಫಾ, ಖುರ್ಚಿ ಗಳಾದವು ಫಳ,ಫಳ
ಮನೆಯ ಹಾಲ್ ಗೆ ರಂಗೇರಿತು ಥಳ,ಥಳ
ಮುಗಿಸಿದೆ ಬೇಗ ಸ್ನಾನವ ಝುಳ,ಝುಳ.

ಕೇಳಿತು ಕಾರಿನ ಹಾರ್ನ್ ಗೇಟಿನ ಬಳಿಯಲಿ
ಕುದಿಯಿತು ನೀರು ಡಿಕಾಕ್ಷನ್ನಿಗೆ ಅವಸರದಲಿ
ತಯಾರಾಯಿತು ಅವಲಕ್ಕಿ ಅಡಿಗೆ ಕೋಣೆಯಲಿ.

ಬಡಿಯಿತು ಮೂಗಿಗೆ ಚಹಾದ ಆರೋಮ
ಕನಸಾಯಿತು ಬಯಸಿದ ರಜಾದಿನದ ಆರಾಮ
ಹಾಕಿದೆ ಅಂದಿನ ಆಲಸ್ಯಕ್ಕೆ ಪೂರ್ಣ ವಿರಾಮ..

ಕವನ - ಜಲಪಾತ	ಶಂಕರ ರಾವ್ ಎನ್

ಪ್ರಕೃತಿಯ ಮಡಿಲಲಿ ಮನೋಹರ ದೃಶ್ಯ
ಸುಕೃತದಿ ಧುಮುಕುವ ಜಲಪಾತ ಲಕ್ಷ್ಯ/
ಏರು ತಗ್ಗುಗಳಲಿ ನರ್ತಿಸಿ ನೀರೆ
ಭರದಿ ಬೆಟ್ಟದಿಂ ಇಳಿದ ಶ್ವೇತ ಸುಂದರಿ//.

ನದಿಯ ನೀರು ರಚಿಸಿ ಪಥವ
ಬಿದ್ದು ರಭಸದಿ ಧುಮ್ಮಿಕ್ಕುವ ಜಲಧಾರೆ/
ಮುದದಿ ಹಾಲ್ನೊರೆಯಂದದಿ ಶ್ವೇತ ವರ್ಣ
ಸದ್ದಿನ ಹನಿಗಳ ಗಂಭೀರ
ಸಿಂಚನ//.

ಹಲವಾರು ಹನಿಗಳು ಧುಮ್ಮಿಕ್ಕಿ
ಒಲವಿನೊಂದಾಗಿ ಕಂಗೊಳಿಸುವ ನಿತ್ಯೋತ್ಸವ/
ಚೆಲುವಿನ ನಿಶ್ಯಬ್ದ ವಾತಾವರಣದಿ
ಮೆಲ್ಲ ಮೆಲ್ಲನೆ ಹರಿವ ಲಹರಿ//.

ಸುತ್ತ ಹಸುರಿನ ಗಿರಿಗಳು
ಇತ್ತು ಶುಭ್ರ ತಿಳಿನೀರ ತೊರೆಗಳ/
ಮತ್ತ ಜಲಪಾತದ ಸೊಬಗಿನ ಇಂಪು
ಎತ್ತ ನೋಡಿದರತ್ತ ತಣಿಸುವ ತಂಪು//.

ನದಿಯ ನೀರಿನ ಉಪಯುಕ್ತತೆ
ತಂದಿದೆ ನಿಸರ್ಗದ ಸಫಲತೆ/
ಸುಂದರ ಜನನ ಸಂಗಮ ಪಯಣ
ಇಂದು ಅಡಿ ಇಟ್ಟ ನೆಲವದು ಪಾವನ//.

ಶಿವ ಸ್ತುತಿ - ಶಂಭೋ ಮಹಾದೇವ - ರಾಗ ಹಿಂದೋಳ	**ಶ್ರೀಮತಿ ಮಂಗಳಾ ನಾಡಿಗ್**

ಶಂಭೋ ಮಹಾದೇವ ಶಂಭೋ ಮಹಾದೇವ ಶಂಭೋ ಮಹಾದೇವ...
ಗಂಗ ಜಟಾಧರ ಗೌರಿ ಮನೋಹರ ಶಂಭೋ ಮಹಾದೇವ...||ಪಲ್ಲವಿ|

ನಟನ ಮನೋಹರ ನಾಟ್ಯ ವಿಲೋಲ ಶಂಭೋಮಹಾದೇವ...
ನಾಗಾಭರಣ ನಂದಿ ವಾಹನ ಶಂಭೋ ಮಹಾದೇವ ||೧||

ಪಾರ್ವತಿ ರಮಣ ಚಂದ್ರಾಭರಣ ಶಂಭೋ ಮಹಾದೇವ...
ನೀಲಕಂಠ ಫಾಲನೇತ್ರ ಶಂಭೋ ಮಹಾದೇವ||೨||

ಕೈಲಾಸ ವಾಸ ಹೇ ಜಗದೀಶ ಶಂಭೋ ಮಹಾದೇವ...
ಭಸ್ಮವಿಭೂಶಿತ ಸ್ಮಶಾನವಾಸ ಶಂಭೋ ಮಹಾದೇವ||೩||

ಶಂಭೋ ಮಹಾದೇವ ಶಂಭೋ ಮಹಾದೇವ ಶಂಭೋ ಮಹಾದೇವ...

ಪುಸ್ತಕ ಪರಿಚಯ - ನೆನಪಿನ ಚಿತ್ತಾರ - ವೈ.ಎನ್. ಗುಂಡೂರಾವ್	ಪ್ರಾಣೇಶ್ ರಾವ್ ಡಿ.ಬಿ

ಸಾಹಿತ್ಯಾಸಕ್ತರಿಗೆ,ವಿಶೇಷವಾಗಿ ಹಾಸ್ಯಪ್ರಿಯರಿಗೆ,ವೈ ಎನ್ .ಗುಂಡೂರಾಯರು ಅಪರಿಚಿತರಲ್ಲ.ಅವರ ಇದುವರೆಗೆ

೪ ಹಾಸ್ಯ ಸಂಕಲನಗಳು

೨ಕಥಾಸಂಕಲನಗಳು

೩ಪುರಾಣ ಕಥಾಸಂಗ್ರಹಗಳು

೬ಜೀವನಚರಿತ್ರೆಗಳು,ಕೆಲವು ವ್ಯಕ್ತಿ ಚಿತ್ರಗಳು,ವಾರ್ಷಿಕ ವಿಶೇಷಾಂಕಗಳಲ್ಲಿ ಹಲವಾರು ಲೇಖನಗಳನ್ನು ರಚಿಸಿರುವರು.ಅಲ್ಲದೆ,ಹಾಸ್ಯ ಬ್ರಹ್ಮ ಟ್ರಸ್ಟ್ ನವರ ಮೂಲಕ ಪ್ರಕಟಿಸಿರುವ ೯ ಹಾಸ್ಯ ಸಂಕಲನಗಳಲ್ಲಿ ಭಾಗಿಯಾಗಿದಾರೆ.ಸಹ ಸಂಪಾದಕರಾಗಿಯೂ ಮೂರು ಕೃತಿಗಳಲ್ಲಿ ಭಾಗಿಯಾಗಿರುವರು.

ಪ್ರಸ್ತುತ ನೆನಪಿನ ಚಿತ್ತಾರ ಅವರ ೭೫ ನೇ ಹುಟ್ಟು ಹಬ್ಬದ ನೆನಪಿಗಾಗಿ ರಚಿಸಿರುವ ಕೃತಿ .ಈ ಮುಂಚೆ ತಮ್ಮ ೭೦ನೇ ಹುಟ್ಟಿದ ಹಬ್ಬದ ನೆನಪಿನಲ್ಲಿ ಅವರ ಹೆಂಡತಿ ಯನ್ನು ಕುರಿತ ನಮ್ಮ ಮನೆಯ ಬೆಳಕುರಚಿಸಿದ್ದು ಅದನ್ನು ನಮ್ಮ ದಾಸೋಹದಲ್ಲಿ ಪರಿಚಯಸಿದ್ದರು.

ಈ ಎರಡೂ ಕೃತಿ ಗಳು ,ಅವರ ಆತ್ಮಕಥನ ಎಂದು ಹೇಳಿಕೊಂಡಿರುವರು.ನಮ್ಮ ಮನೆಯ ಬೆಳಕು ಕಿರುಕಾದಂಬರಿಯ ರೂಪದಲ್ಲಿದೆ.*ನೆನಪಿನ ಚಿತ್ತಾರ * ದಲ್ಲಿ೭೫ ಬಿಡಿ ಬರಹಗಳಿವೆ .

ಅತ್ಮಕಥನ ,ಆತ್ಮಾವಲೋಕನವೂ ಆಗಿದೆ.ನೆನಪುಗಳು ಅನುಕ್ರಮವಾಗಿ ಬರದೆ,ಆಗಾಗ ನೆನಪಾದ ಪ್ರಸಂಗ ಗಳು, ಚಿತ್ರಿತವಾಗಿವೆ .

ಯಳಂದೂರಿನಲ್ಲಿ ಬಾಲ್ಯವಿದ್ಯಾಭ್ಯಾಸ,ಜತೆಯ ಹುಡುಗ ರೊಡನೆ ನಡೆದ ಸಿಹಿ-ಕಹಿ ಅನುಭವದ ಪ್ರಸಂಗಗಳು, ಕಡುಬಡತನದ ಹಳ್ಳಿಯ ಬದುಕು,ಕರಣಾಮಯಿ,ಸಹನಶೀಲೆ,ಶಾಂತ ಸ್ವಭಾವ,ಮಮತಾಮಯಿ,ತಾಯಿಯ ಮತ್ತು ಇತರ ತಾಯಂದಿರ,ಕುರಿತ ಹಲವಾರು ಪ್ರಸಂಗಗಳು,ಉಗ್ರ ಕೋಪಿ,ಹಠಮಾರಿ ತಂದೆಯ ಕುರಿತ ಹಲವಾರು ಪ್ರಕರಣಗಳು ಮನ ಮಿಡಿಯುವಂತೆ ನಿರೂಪಿಸಿದಾರೆ.

ಹೈಸ್ಕೂಲಿನ ನಂತರ ಬೆಂಗಳೂರಿನಲ್ಲಿ ಪೀಯೂಸಿ ವಿದ್ಯಾಭ್ಯಾಸದ ನಂತರ, ಐಟಿಐ ಕಾರ್ಖಾನೆಯ

ಉದ್ಯೋಗದ ಜತೆಜತೆಗೇ ಆಚಾರ್ಯ ಪಾಠಶಾಲೆಯ ಸಂಜೆ ಕಾಲೇಜಿನಲ್ಲಿ ಬಿ.ಕಾಂ .ವ್ಯಾಸಂಗ ಮಾಡುವಾಗ,ಕನ್ನಡ ಸಾಹಿತಿಗಳ ಒಡನಾಟದಿಂದ,ಸಾಹಿತ್ಯ ಆಸಕ್ತಿ, ನಾಟಕ, ಪ್ರವಾಸದ ಅನುಭವಗಳು ಸ್ವಾರಸ್ಯವಾಗಿವೆ.

ಪದವಿಯ ನಂತರ ,ಮದುವೆ,ಸಂಸಾರ ಹೂಡಿದ ಮೇಲೆ,ಹಳ್ಳಿಯಲ್ಲಿ ದ್ದ ತಂದೆ ತಾಯಿಯ ರನ್ನು ಬೆಂಗಳೂರಿಗೆ ಕರೆತಂದು ಸುಮಾರು ೩೦-೩೫ ವರ್ಷಗಳಕಾಲ ಶ್ರದ್ಧಾಭಕ್ತಿಯಿಂದ ಸೇವೆ ಮಾಡಿದುದು,ಕಳೆದ ೬೦ -೭೦ ವರ್ಷಗಳ ಲ್ಲಿ ಬೆಂಗಳೂರಿನಲ್ಲಿ ಮಾರ್ಪಾಡಾದ ಜನಜೀವನವನ್ನು ಬಿಂಬಿಸುವ ಸಾಮಾಜಿಕ ಕಳ ಕಳಿ ಕುರಿತ ಬರಹಗಳೆಲ್ಲವೂ ನವರಸಭರಿತವಾಗಿವೆ.

ಹಳ್ಳಿಯಲ್ಲಿದ್ದ ಹುಂಬ ಬಾಲಕ ನಗರಕ್ಕೆ ಬಂದು ಪ್ರೌಢ ನಾಗರೀಕ ಪ್ರಜೆಯಾಗಿ,ಸಮಾಜದಲ್ಲಿ ಗೌರವ ಪ್ರತಿ ಷ್ಠೆ ಗಳಿಸಿ ಸಂತೃಪ್ತ ಜೀವನ ನಡೆಸಿದ ಬದುಕಿನ ಪ್ರಾಮಾಣಿಕ ಚಿತ್ರಣವಿದೆ.

[7:58 PM, 1/16/2021] Pranesha Rao DB: ಸೀನಿ,ಕೇಶವ,ಇಬ್ಬರೂ, ಇವರ ಸೋದರಮಾವಂದಿರ ಮದುವೆ.ಒಬ್ಬ ರಿಗೆ ಬೀಡಿಸೇದುವ ಚಟ.ಇನ್ನೊಬ್ಬರಿಗೆ ಶ್ಯದ ಚಟ.ಚಿಕ್ಕ ವರಾದ ಇವರ ಸುಪರ್ದಿಗೆ ,ಬೀಡಿಕಟ್ಟು,ನಶ್ಯದ ಡಬ್ಬಿ ಕೊಟ್ಟು ಅವರು ಕೇಳಿದಾಗಲೆಲ್ಲಾ ಕೊಡುವಂತೆ ಹೇಳಿ,ಗಾಳಿಪಟಬಣ್ಣದ ಬುಗುರಿ ಕೊಡಿಸುವ ಆಸೆ ತೋರಿಸಿದ್ದರು.ಇವರು ಪಾಪ ನಾಲ್ಕು ದಿನ ಅವರ ಚಟ ತೀರಿಸಿಕೊಳ್ಳಲು ಸಹಾಯಮಾಡಿದ್ದರು.ಆದರೆ ,ಪಾಪ ಕೊನೆಯ ದಿನ ಮುಂಗೋಪಿ ತಂದೆಯ ಕೈಲಿ ಸಿಕ್ಕಿಬಿದ್ದು ಅಂಡು ಉರಿಯುವಂತೆ ಬಾರಿಸಿಕೊಂಡು ಉಜ್ಜಿಕೊಳ್ಳುತ್ತಿದುದನ್ನು ನೋಡಿ ಕೇಶವನೇ ಬಂದು ಬಿಡಿಸುವ ಪ್ರಸಂಗ ನಗುವಿನ ಜತೆ ಅನುಕಂಪವೂ ಮೂಡುತ್ತದೆ.

ದಂಪತಿಗಳು ಚಿಕ್ಕ ಮಗುವಿನೊಂದಿಗೆ ಸಿನಿಮಾಗೆ ಹೋಗಿದ್ದಾಗ ಅಳುವ ಮಗುವನ್ನು ಗಂಡ ,ಹೆಂಡತಿ ಇಬ್ಬರೂ ಸರದಿಯ ಮೇಲೆ ಕತ್ತಲಲ್ಲೇ ಬಾಗಿಲ ಹತ್ತಿರ, ನಿಂತು ಸಂತೈಸುತ್ತಿದ್ದಾಗ ಇವರು ಮಗುವನ್ನು ಪಡೆದು ಬೆನ್ನು ತಟ್ಟುತ್ತಿದ್ದರೂ ಸುಮ್ಮನಾಗದೆ ಅಳು ಜೋರಾಗಿ ಹೊರಗೆ ಬಂದಾಗ ಇವರ ಹೆಂಡತಿ ಯೇ ಎದುರಾಗಿ ಇವರ ಮಗುವನ್ನು ಎತ್ತಿಕೊಂಡಿರುವುದು ಕಾಣುತ್ತದೆ.ಅಷ್ಟ ರಲ್ಲಿ ಇನ್ನೊಬ್ಬ ದಂಪತಿಗಳು ಎದುರಾಗಿ ಇವರ ಕೈನಲ್ಲಿ ಅವರ ಮಗುವನ್ನು ಕಂಡು ಪರಿಸ್ಥಿತಿ ಅರ್ಥವಾಗಿ ಸಮಾಧಾನದಿಂದ , ನಗುವ ಸನ್ನಿವೇಶ ಓದುಗರಿಗೂ ನಗೆ ತರಿಸದೇ ಇದ್ದೀತೇ !!

[7:58 PM, 1/16/2021] Pranesha Rao DB: ಕನ್ನಡ ಸಾಹಿತ್ಯ ಪರಿಷತ್ತಿನಲ್ಲಿ ಮೈಸೂರು ವಿಶ್ವವಿದ್ಯಾಲಯದ ಪ್ರಸಾರಾಂಗ ಚಿನ್ನದ ಹಬ್ಬದ ಸಲುವಾಗಿ ರಿಯಾಯಿತಿ. ದರದಲ್ಲಿ ಪ್ರಕಟಣೆಗಳ ಮಾರಾಟ .ಇವರು ಹೆಂಡತಿಯ ಜತೆ ಹೋಗಿ ಅಪರೂಪದ ಗ್ರಂಥಗಳನ್ನು ಆರಿಸುವಾಗ ,ಬಹಳ ಅಪರೂಪದ ಪುಸ್ತಕ ಒಂದು ಕಾಣಿಸಿ ಅದೂ

ಒಂದೇ ಒಂದು ಪ್ರತಿ. ಅದನ್ನು ಹೆಂಡತಿಯ ಕೈಗೆ ಕೊಟ್ಟು ಕ್ಯಾಷಿಯರ ಬಳಿ ಬಿಲ್ ಹಾಕಿಸುವಾಗ ಆ ಪುಸ್ತಕ ನಾಪತ್ತೆಯಾಗುವುದೇ!!? ದಂಪತಿಗಳ ಲ್ಲಿ ವಾಗ್ಯುದ್ಧವಾಗಿ,ಬೇಸರದಿಂದ ಹೊರಗೆ ಬರುವಾಗ ಆ ಪುಸ್ತಕ ಮತ್ತೊಬ್ಬ ಮಹಿಳೆ ಕೈಯಲ್ಲಿ ಕಂಡು ಬೇಜಾರು ಮಾಡಿ ಕೊಳ್ಳುವಷ್ಟರಲ್ಲಿ ,ಆಕೆಯೇ ನಗುತ್ತ ಮುಂದೆ ಬಂದು ಪುಸ್ತಕವನ್ನು ಇವರ ಕೈಯಲ್ಲಿ ಇಡುತ್ತಾ," ನೀವು ಅವಸರದಲ್ಲಿ ನಿಮ್ಮ ಆಕೆಯ ಬದಲು ನನ್ನ ಕೈಗೆ ಕೊಟ್ಟಿರಿ. ನಾನು ತಮಾಷೆ ನೋಡೋಣ ಅಂತ ಸುಮ್ಮನೆ ಇದ್ದೆ"ಎಂದು ಹೇಳಿ ಪುಸ್ತಕದ ಬೆಲೆ ಯನ್ನೂ ಅವರೇ ಕೊಟ್ಟಿರುವುದಾಗಿ ಹೇಳಿದಾಗ ಇವರು ನಾಚಿ ತಲೆ ತಗ್ಗಿಸಲು,ಇಬ್ಬರೂ ಮಹಿಳೆಯರು ಇವರ ಕಡೆ ನೋಡುತ್ತಾ ಮುಸಿಮುಸಿ ನಗುತ್ತಿದ್ದರಂತೆ.

[7:58 PM, 1/16/2021] Pranesha Rao DB: ಲೇಖಕರಿಗೆಸುಳ್ಳು ಹೇಳ ಬಾರದುಎನ್ನುವುದು ಸಂಕಲ್ಪ, ವ್ರತ.ಒಂದು ರೀತಿಯಲ್ಲಿ ಮಹಾತ್ಮ ಗಾಂಧಿ ಯವರ ನೀತಿ

ಪಾಲಿಸುವ ಧ್ಯೇಯ.ಆದರೆ ಈ ವ್ರತ ಭಂಗವಾದ ಕೆಲವು ಪ್ರಸಂಗಗಳಿವೆ.ಪಕ್ಕದ ಮನೆಯವರು ಯಾವುದೋ ಮದುವೆಗೆ ಹೋಗಿದ್ದರು.ಅಜ್ಜಿ ಒಂದೇ ಇದೆ,ಸ್ವಲ್ಪ ನಿಗಾ ಇರಲಿ ಎಂದು ಇವರಿಗೆ ಹೇಳಿದ್ದರು.ರಾತ್ರಿ ಅವರ ಮನೆಯಲ್ಲೇ ಮಲಗಿದ್ದರು.ಅಜ್ಜಿ ತಟ್ಟೇಲಿಟ್ಟಿದ್ದ ಮಾವಿನ ಹಣ್ಣಿನ ಹೋಳುಗಳನ್ನು ತಿನ್ನಲು ಹೇಳಿದರು. ಆದರೆ ಅದಕ್ಕೆ ಇರುವೆಗಳು ಮುತ್ತಿದ್ದವು,ಇವರು ಬಿಸಾಡಲು ಹೊರಟರು.ಅಜ್ಜಿ ಅಲ್ಲೇ ಕುಳಿತು ತಿನ್ನಲು ಹೇಳಿ ತಟ್ಟೆಯನ್ನು ತೊಳೆಯಲು ಕೊಡಲು ಹೇಳಿದರು. ಅಜ್ಜಿಗೆ ಕಣ್ಣು ಸರಿಯಾಗಿ ಕಾಣಿಸುತ್ತಿರಲಿಲ್ಲ ಇವರು ತಿನ್ನುವ ನಾಟಕ ಮಾಡುತ್ತ ಬಿಸಾಟು ,ತಾವೇತಟ್ಟೆ ತೊಳೆದಿರುವುದಾಗಿ ಹೇಳಿದರು.ಅಜ್ಜಿ ನಿದ್ದೆ ಮಾಡಿದರು .ಇವರಿಗೆ ನಿದ್ದೆ ಬರಲಿಲ್ಲ. ಅಜ್ಜಿಗೆ ಸುಳ್ಳು ಹೇಳಿ ಮೋಸ ಮಾಡಿದ ಅಪರಾಧ ಪ್ರಜ್ಞೆ ಈಗಲೂ ಕಾಡುತ್ತಿರುವುದಾಗಿ ಪಶ್ಚಾತ್ತಾಪ ವ್ಯಕ್ತ ಪಡಿಸಿದಾರೆ.

ಇನ್ನೊಂದು ಪ್ರಕರಣದಲ್ಲಿ ಸಿಲ್ಕ್ ಚಂದ್ರಶೇಖರನ ಹೆಗಲಿನ ಮೇಲೆ ಸ್ನೇಹದಿಂದ ಕೈಯಿಡುವಾಗ ಅವನ ಷರಟು ಹರಿದಿರುತ್ತೆ.ಇನ್ನೊಬ್ಬ ಹುಡುಗನ ಜಾಮಿಟ್ರಿಬಾಕ್ಸ್ ನಿಂದ ಆಗಿರುತ್ತೆ.ಇವರು ತೋರಿಸಲು,ಅವನು ಇವರೇ ಹರಿದರೆಂದು ಅವರ ತಂದೆಗೆ ಸುಳ್ಳು ದೂರು ಹೇಳಲು,ಇವರಿಗೆ ಬೈಯ್ಯುವರು. ಇವರು ತಾವು ಹರಿಯಲಿಲ್ಲ ವೆಂದು ದಬಾಯಿಸುತ್ತಾರೆ.ವಿಚಾರ ತಿಳಿದ ಒಬ್ಬ ಹಿರಿಯರು *ಅವರಿಗೆ ದಬಾಯಿಸಿದೆಯಾ?
ಅವರು ಉನ್ನತ ಅಧಿಕಾರಿಗಳು ,ಮನಸ್ಸು ಮಾಡಿದ್ದರೆ ನಿನ್ನನ್ನು ಕಾಲೇಜಿನಿಂದ ಹೊರಹಾಕ ಬಹುದಿತ್ತು *ಎಂದು ಹೇಳಿದಾಗ
*ಅವರಿಗೆ ಹೇಳಿದ್ದೇ ನಿಮಗೂ ಹೇಳುವೆ,ನನ್ನ ದಲ್ಲದ ತಪ್ಪಿಗೆ ಹೇಗೆ ಶಿಕ್ಷೆ ವಿಧಿಸಲು ಸಾಧ್ಯ * ಎಂದು ಸಮರ್ಥಿಸಿಕೊಂಡರೂ,ದೊಡ್ಡವರ ಜೊತೆ ಮಾತಾಡುವಾಗ ತಪ್ಪು ನಮ್ಮ ದಲ್ಲದಿದ್ದರೂ ದುಡುಕಬಾರದು ಎನ್ನುವ ಪಾಠ ಕಲಿತದ್ದು ಒಪ್ಪಿ ದಾರೆ.
[7:58 PM, 1/16/2021] Pranesha Rao DB: ಮಧ್ಯಾನ್ಹ ಎರಡೂಕಾಲು ಗಂಟೆಗೆ ಫ್ಯಾಕ್ಟರಿ ಶಿಫ್ಟ್ ಮುಗಿದು ನೌಕರರು ಹೊರಗೆ ಬಂದು, ಫ್ಯಾಕ್ಟರಿ ಬಸ್ಸುಗಳಲ್ಲಿ ಅವರವರ ಸ್ಥಳಗಳಿಗೆ ವಾಪಸು ಹೋಗಲು ಅವಸರದಲ್ಲಿ ಆಯಾಸ್ಥಳದಲ್ಲಿ ನಿಲ್ಲುತ್ತಿದ್ದರು.ಆ ಸಮಯದಲ್ಲಿ ತರಕಾರಿ ಮಾರುವರ ವ್ಯಾಪಾರ ಭರಾಟೆ,ಹತ್ತೇ ನಿಮಿಷಗಳಲ್ಲಿ ಮುಗಿಯುವುದು ಸಾಮಾನ್ಯ. ಸೊಪ್ಪು ಮಾರುವ ಸತ್ಯವ್ವಳ ಬಳಿ ಸೊಪ್ಪು ಕೊಳ್ಳುವ ಆತುರದಲ್ಲಿ ದಿನವೂ ಮೋಸ ಮಾಡುತ್ತಿದ್ದುದು,ಅವಳ ಪೇಚಾಟ ,ನೋಡಿ ಇವರಿಗೆ ಕನಿಕರ.ಏನಾದರೂ ಮಾಡಿ ,ಅವಳಿಗೆ ಸಹಾಯ ಮಾಡುವ ಯೋಚನೆ.ಫ್ಯಾಕ್ಟರಿ ಬಾಗಿಲಲ್ಲಿ ಇರುತ್ತಿದ್ದ ಸೆಕ್ಯೂರಿಟಿಯನ್ನು ಸೊಪ್ಪು ಮಾರುವ ಸತ್ಯವ್ವಳ ನಿಲ್ಲಿಸುವ ಉಪಾಯದಿಂದ ಅವಳಿಗಾಗುತ್ತಿದ್ದ ನಷ್ಟವನ್ನು ತಪ್ಪಿಸಿದ ಮನಸ್ಸಿಗೆ ನಿರಾಳವಾಯಿತು.ಪ್ರಾಮಾಣಿಕವಾಗಿ ದುಡಿದು ತಿನ್ನುವವರಿಗೂ ಮೋಸ ಮಾಡುವವರಿಗೆ ಹೇಗೆ ಮನಸ್ಸಾಗುತ್ತದೆ ಎಂದು ಮೋಸಗಾರರನ್ನು ಖಂಡಿಸುವ ಚಿಂತನೆಯ ಇನ್ನೂ ಕೆಲವು ಬರಹಗಳಿವೆ .

ಬಚ್ಚಲಮನೆಯಲ್ಲಿ,ಹಾವು ಕಾಣಿಸಿ ಕೊಂಡದ್ದು,ಬಾವಿಗೆ ಕರು ಬಿದ್ದ ಪ್ರಸಂಗಗಳಲ್ಲಿ,,ಭಯ,ಆತಂಕ ಉಂಟಾಗಿ ನಿವಾರಿಸುವ,ಪ್ರಯತ್ನಗಳಲ್ಲಿ, ಸಾಹಸ,ಹಾಸ್ಯವೂ ಇದೆ

ಸ್ನೇಹಿತರೊಂದಿಗೆ ಮಂತ್ರಾಲಯಕ್ಕೆ ಹೋದಾಗ ಸಂಜೆ ಕಳೆದು ಕತ್ತಲಲ್ಲಿ ನದೀ ಸ್ನಾನಕ್ಕೆ ಹೋದಾಗ ಒಬ್ಬ ಗೆಳೆಯ ಕಾಲು ಜಾರಿ ಮುಳುಗಿ ಅಪಾಯದಲ್ಲಿದ್ದಾಗ

ಆಪದ್ಬಾಂಧವರಂತೆ ಬಂದವರೊಬ್ಬರು ಕಾಪಾಡಿ ಜೀವವಿಮೆಯ ಮಹತ್ವ ತಿಳಿಸಿದರಲ್ಲದೆ ಗುರುಕೃಪೆಯಿಂದ ಪಾರಾಗಿದ್ದು ಹೇಳಿದಾಗ ದುಡುಕುತನಕ್ಕೆ ನಾಚಿ ಪಶ್ಚಾತ್ತಾಪ ಪಡುವ ಮತ್ತೊಂದು ಸನ್ನಿವೇಶ.

[7:58 PM, 1/16/2021] Pranesha Rao DB: ಬಿಳಿಗಿರಿರಂಗನ ಬೆಟ್ಟದ ಬಳಿ ಇರುವ ವಡಗೆರೆಯಲ್ಲಿ ಮಲಗಿರುವ ಆಂಜನೇಯನ ಗುಡಿಯಿದೆಯಂತೆ.ಇವರ ಹಿರಿಯರು ಬಹಳ ಹಿಂದಿನಿಂದಲೂ ರಥೋತ್ಸವ ಸಮಯದಲ್ಲಿ ,ಅರವಟ್ಟಿಗೆ,ಅನ್ನಸಂತರ್ಪಣೆ ಸೇವೆ ಮಾಡುವರಂತೆ .ಬಾಲ್ಯದ ದಿನಗಳನ್ನು ನೆನಪಿಸಿಕೊಂಡು, ನಂಜ ಎಂಬ ಹಳೆಯ ಸ್ನೇಹಿತ ಮತ್ತು ಇತರ ನಾಲ್ಕೈದು ಮಿತ್ರರ ಜತೆ ಕಾಡಿನಲ್ಲಿ ನಡೆದು ಹೋಗುವ ಸಾಹಸ.ಆಗ ಎರಡು ಆನೆಗಳು ಮರಿಯಾನೆಯ ಜೊತೆಗೆ ಎದುರಾಗಿ ಭಯದಿಂದ ಕಳೆದ ಒಂದೆರಡು ಗಂಟೆಗಳ ಸನ್ನಿವೇಶ ಮೈ ನವಿರೇಳಿಸುವಂತಿದೆ.

[7:58 PM, 1/16/2021] Pranesha Rao DB: ತಾಯಿಯ ಮೇಲೆ ಅಪಾರ ಪ್ರೀತಿ, ಅವರು ತಮ್ಮ ಮಕ್ಕಳ ಮೇಲೂ,ತೋರುತ್ತಿದ್ದ ಕರುಣೆ,ಕನಿಕರ,ವಾತ್ಸಲ್ಯ, ಇತರ ತಾಯಂದಿರೂ ಅವರವರ ಮಕ್ಕಳ ಬಗ್ಗೆ ವಹಿಸುತ್ತಿದ್ದ ವಿಶೇಷ ಎಚ್ಚರಿಕೆ ಯ ಹಲವು ಪ್ರಸಂಗಗಳು ಮನಸ್ಸಿನಲ್ಲಿ ಅಚ್ಚಳಿಯದೆ ಉಳಿಯುತ್ತವೆ

ಮನೆಯಲ್ಲಿ ಸಾಕಿದ್ದ ಕರುವನ್ನು ಚಿರತೆ ಎತ್ತಿಕೊಂಡು ಹೋದಾಗ, ತಾಯಿಹಸು ಮತ್ತು ಇವರ ತಾಯಿಯ ಸಂಕಟ ಮನಕಲಕುವಂತಿದೆ. ಬೆಂಗಳೂರಿಗೆ ಬಂದ ಮೇಲೆ ದಂಪತಿಗಳು ಕೆಲಸಕ್ಕೆ ಹೋಗಿದ್ದಾಗ ಮೊಮ್ಮಗ ಕಂಬಕ್ಕೆ ಹಣೆ ತಾಗಿಸಿಕೊಂಡು ರಕ್ತ ಸೋರಿ ,ದಿಕ್ಕು ತೋಚದೆ ಮಗ ವಾಪಸು ಬರುವವರೆಗೆ ಸುಮ್ಮನೆ ಕುಳಿತ ತಾಯಿ .ಮಗ ಸಿಟ್ಟಿನಿಂದ ಬುದ್ಧಿ ಇದೆಯಾಎಂದು ಗದರಿದ್ದು .ಅವರು ನೊಂದುಕೊಂಡರೆಂದು ಹೆಂಡತಿಯಿಂದ ತಿಳಿದು ಪಶ್ಚಾತ್ತಾಪ ದಿಂದ ಕ್ಷಮೆ ಕೋರಿದಾಗ,ತಾಯಿ ನಿಷ್ಕಲ್ಮಷ ಹೃದಯದಿಂದ ಸಮಾಧಾನ ಹೇಳಿದ ಪ್ರಸಂಗವೂ ಓದುಗರ ಮನಕಲಕುವಂತಿ
ದೆ.

ತಾಯಿಯ ಅಗಲಿಕೆಯನ್ನು ಸ್ನೇಹಿತ ಚಂದ್ರಚಾರನಿಗೆ ತಿಳಿಸಿ ದುಃಖಪಟ್ಟಾಗ,ಅವನು ತನ್ನ ತಾಯಿ ತೀರಿಕೊಂಡ ಸಮಾಚಾರ ಟೆಲಿಗ್ರಾಮಿನಲ್ಲಿ,ಸ್ಥಳದ ವಿವರ ದೊರೆಯದೆ ,ಗೆಳೆಯನ ಸಹಾಯದಿಂದ ಮೈಸೂರಿನಿಂದ ಯಾವುದೋ ಬಸ್ಸು ಹತ್ತಿ,ಮತ್ತೊಂದಿಗೆ ಬದಲಾಯಿಸಿ ಬಸ್ಸಿನಲ್ಲಿ ಅಕ್ಕನೂರಿಗೆ ಹೋದಾಗ ಎಲ್ಲಾ ವಿಧಿಗಳು ಮುಗಿದಿದ್ದನ್ನು ತಿಳಿಸುವ ಪ್ರಸಂಗ ಹೃದಯ ಸ್ಪರ್ಶಿಯಾಗಿದೆ.

[7:58 PM, 1/16/2021] Pranesha Rao DB: ಮನೆಯ ಮುಂದೆ ಓಡಾಡುತ್ತಿದ್ದ ಒಬ್ಬ ಮನೆಕೆಲಸ ಮಾಡುವ ಅಜ್ಜಿ ,ತಾಯಿಯನ್ನೇ ಹೋಲುತ್ತಿದ್ದುದನ್ನು ನೋಡಿ ,ಆ ಅಜ್ಜಿ ಹಣ ಸಹಾಯ ಮಾಡಲು,ಅಜ್ಜಿ ಸ್ವಾಭಿಮಾನದಿಂದ ಆ ಬೀದಿಯಲ್ಲಿ ಓಡಾಡುವುದನ್ನೇ ನಿಲ್ಲಿಸಿದಾಗ ಪರಿತಪಿಸಿ ಬೇಸರ ಪಟ್ಟ ಹೃದಯವಂತಿಕೆ ಕಾಣಬಹುದು.

ಮುಂಗೋಪಿ ತಂದೆಯ ,ಹಠಮಾರಿತನ,ಕಠೋರ ಶಿಕ್ಷೆ ನೀಡುವ ಭಯಾನಕ ಪ್ರಸಂಗಗಳಲ್ಲದೆ ,ಮಕ್ಕಳು, ಸೊಸೆ,ಮೊಮ್ಮಕ್ಕಳ ಬಗ್ಗೆ ಅವರು ತೋರಿಸುತ್ತಿದ್ದ ,ಪ್ರೀತಿ,ವಾತ್ಸಲ್ಯ , ವಿಶ್ವಾಸ,ಮಮತೆಯ,ಕಕ್ಕುಲತೆ ,ಆತಂಕ ಸೂಚಿಸುವ ಹಲವು ಪ್ರಸಂಗಗಳು ಅವರ ಬಚ್ಚಿಟ್ಟ ಹೃದಯದಲ್ಲಿ ಎಂದು ಬಿಂಬಿಸುವ ಪ್ರಾಮಾಣಿಕ ಪ್ರಯತ್ನವಿದೆ.

ಈಗ ೬೦ -೭೦ ವರ್ಷಗಳ ಹಿಂದಿನ ತಲೆಮಾರಿನ ಹಿರಿಯರೆಲ್ಲರಿಗೂ ಇಂತಹ ಪ್ರಸಂಗಗಳು ತಮ್ಮ ಜೀವನದಲ್ಲೂ ನಡೆದಿರುವ ನೆನಪಾಗುವುದು ಸಹಜ.ಅಂತಹವರಲ್ಲಿ ಕೆಲವರಿಗೆ ತಮ್ಮ ನೆನಪುಗಳನ್ನೂ ಹೀಗೇ ದಾಖಲಿಸಲು ಈ ಪುಸ್ತಕ ಓದಿದನಂತರ ಪ್ರೇರಣೆಯಾದರೆ ಅಚ್ಚರಿಯಲ್ಲ.

ಮುಗಿಸುವ ಮುನ್ನ ನನಗೆ ನೆನಪಾಗುವುದು

ನಗುವೊಂದು ಪಾಕ,ಅಳುವೊಂದುಪಾಕ
ನಗುವಾತ್ಮ ಪರಿಮಳವ ಪಸರಿಸುವ ಕುಸುಮ
ದುಗುಡಾತ್ಮವಕಡಿದು ಸತ್ವವೆತ್ತುವ ಮಂತು
ಬಗೆದೆರಡನುಂ ಭುಜಿಸು ಮಂಕುತಿಮ್ಮ

ಎಂಬ ಡಿ ವಿ ಜಿ ಯವರ ಕಗ್ಗದ ಸಾಲುಗಳು.

ನೆನಪಿನ ಚಿತ್ತಾರಗಳು
ಲೇ .ವೈ ಎನ್ ಗುಂಡೂರಾವ್
ತೇಜು ಪಬ್ಲಿಕೇಷನ್ಸ್
ನಂ ,1014,24ನೇಮುಖ್ಯರಸ್ತೆ
16ನೇ ಕ್ರಾಸ್
ಬಿ ಎಸ್ ಕೆ 2ನೇ ಹಂತ
ಬೆಂಗಳೂರು 560070
ಬೆಲೆ ರೂ 200/

ಕವನ - ಸೌಹಾರ್ದ-ಸಮಾನ ಹಳಿಯ ಬದುಕು	ಶ್ರೀಮತಿ ರಾಧಿಕಾ ವಿ ಗುಜ್ಜರ್

ನಿಧಾನ ಜರುಗುತ್ತಾ ಹೊರಟ ರೈಲಿನ ವೇಗಕ್ಕೆ,
ಕಣ್ಣೆದುರು ಚಲಿಸುತ್ತಿವೆ ಒಂದೊಂದೇ ಕಿಟಕಿ,
ಧೋ..ಸದ್ದು..ಶಿಸ್ತಿನ ವಿಧೇಯ ಪಥಚಲನೆಗೆ,
ನೋಡು ನೋಡುತ್ತಾ ಹೊರಟೇ ಹೋದವು ಸಾಲು ಸಾಲು ಬೋಗಿ..

ಟಿಕೇಟು ಕೊಂಡರೆ, ನಿಗದಿತ ಸಂಖ್ಯೆಗೆ ನಾವೇ ದೊರೆ,
ಸಾಧಾರಣರಾದರೂ, ಹವಾ ನಿಯಂತ್ರಣದಿಂದಾಗಿ ಮೇಲ್ದರ್ಜೆ,
ಜೀವಮಾನದ ಏಕಾಂಗಿಗೂ, ಗೆಳೆಯರ ಕಂತೆ,
ಅಧಿನಾಯಕನೂ.. ಎಲ್ಲರೊಳಗೊಬ್ಬ ಯಾತ್ರೆಗೆ..

ಮಡಿ-ಮೈಲಿಗೆ ಇಲ್ಲ, ಎಲ್ಲರೊಂದೇ ಸಾಲಿಗೆ,
ಗಂಡು-ಹೆಣ್ಣು ಸಮಾನರು, ಇಲ್ಲ ಯಾವುದೇ ಪರದೆ,
ಬಡವ-ಬಲ್ಲಿದ ಎಲ್ಲರೂ, ಒಂದೊಂದು ಆಸನಕ್ಕೆ ಒಬ್ಬರೇ,
ಕೋವಿದ, ಕುಶಲ, ಕಾರ್ಮಿಕ..ಎಲ್ಲರೂ ಪಯಣಿಗರೇ..

ರೈಲು ಪಯಣ ನೀಡುವುದು, ಭಾರತದ ಕಿರುಚಿತ್ರಣ,
ಗುರಿಗೆ ಧಾವಿಸುವ ಅನಿವಾರ್ಯತೆಯಿಂದ ಉದಯವೀ ಜತನ,
ಒಂದೇ ಮನೆಯ ಕುಡಿಗಳೂ, ಚದುರುವರು ಗಮ್ಯಕೆ ನೈಜ,
ವಿರುದ್ಧ ಬಣದ ಹೋರಾಟಗಾರರೂ, ಜೊತೆಯಿಹರು ಸಹಜ..

ಅಗಣಿತ ಸಮಾನ ಕಿಟಕಿಯ ಚೌಕಗಳು,
ಅಪ್ರತಿಮ ಜೀವನ ಪಾಠದ ಚೌಕಟ್ಟುಗಳು,
ಅರಿವಿದ್ದೂ, ಸ್ವತಂತ್ರ ಪಶುಗಳಾದ ನಮ್ಮನ್ನು,
ಅಲ್ಪ ಸಮಯ, ಸಹಜೀವನಕ್ಕೆ ಬಂಧಿಸುವವು..

ಲೇಖನ - ಕಥಾ ಪ್ರಪಂಚ	**ವಿಠಲ್ ಇಜೇರಿ**

ಕಳೆದ ತಿಂಗಳ ದಾಸೋಹದಲ್ಲಿ ಕತೆ ಹೇಳುವ ಪರಂಪರೆ ಎಲ್ಲ ಜನಾಂಗಗಳಲ್ಲಿ ಇತ್ತು. ಕತೆಗಳು ಪ್ರಭಾವಿ ಸಾಹಿತ್ಯ ಹಾಗೂ ಸಂಸ್ಕೃತಿಯ ಪ್ರತೀಕ. ಈ ಪರಂಪರೆ ಎಲ್ಲ ಜನಾಂಗಗಳಲ್ಲಿ ಉಂಟು ಎಂದು ಬರೆದು, ಒಂದು ಚಿಕ್ಕ ಅಫಘಾನಿಸ್ತಾನದ ಕತೆ ಪ್ರಸ್ತುತ ಪಡಿಸಿದ್ದೆ.

ಇಂದಿನ ಲೇಖನದಲ್ಲಿ ಕತೆಗಳನ್ನು ಹೇಗೆ ಸಾರ್ವಜನಿಕರಿಗೆ ಪ್ರಚುರ ಪಡಿಸುತ್ತಿದ್ದರು ಮತ್ತು ಈಗಲೂ ಕತೆ ಒಂದು ತಲೆಮಾರಿನಿಂದ ಇನ್ನೊಂದು ತಲೆಮಾರಿಗೆ, ಒಬ್ಬರಿಂದ ಹಲವರಿಗೆ ತಲುಪಿಸಲಾಗುತ್ತಿದೆ ಎಂಬ ಬಗ್ಗೆ ನೋಡೋಣ.

ಪ್ರಾಚೀನ ನಾಟಕಗಳಲ್ಲಿ "ಸೂತ್ರಧಾರ" ಬಂದು ಕತೆಯ ಹಿನ್ನೆಲೆ ತಿಳಿಸಿದ ನಂತರ, ಮುಂದಿನ ಕತೆ ವೇದಿಕೆಯ ಮೇಲೆ ಪ್ರಸ್ತುತ ಪಡಿಸುತ್ತಿದ್ದರು. ಮಧ್ಯೆ ಮಧ್ಯೆ ಅವಶ್ಯಕತೆ ಇದ್ದಲ್ಲಿ ಸೂತ್ರಧಾರ ಪ್ರತ್ಯಕ್ಷವಾಗುತ್ತಿದ್ದ. ಈಗಲೂ ಕೆಲವು ನಾಟಕಗಳಲ್ಲಿ ಹೀಗೆ ಸೂತ್ರಧಾರನನ್ನು ಕಥೆಗೆ ಅನುಗುಣವಾಗಿ ವೇದಿಕೆಗೆ ತರುತ್ತಾರೆ. ಹಿಂದೆ ರಾಜರ ಆಸ್ಥಾನದಲ್ಲಿ ಮನರಂಜನೆ, ಜನರಂಜನೆಗೆ ವಿದೂಷಕರು ಇರುತ್ತಿದ್ದರು. ಅವರು ಕತೆಗಳನ್ನು ಸಹ ಹೇಳಿ ರಂಜಿಸುತ್ತಲಿದ್ದರು. ಸಂಸ್ಕೃತ ನಾಟಕಗಳಲ್ಲಿ ವಿದೂಷಕರ ಪಾತ್ರ ಮಹತ್ವದ್ದಾಗಿತ್ತು. ಹಿಂದಿನಿಂದಲೂ ಕತೆ ಹೇಳುವವರನ್ನೂ ಹಾಗೂ ಅವರು ಹೇಳುವ ಕತೆಗಳನ್ನೂ ಗೌರವಿಸಲಾಗುತ್ತದೆ. ಅವರು ವಿಶ್ವದ ಸಂಸ್ಕೃತಿಯ ತಿಳುವಳಿಕೆ ನೀಡುತ್ತಾರೆ, ನಮಗೆ ಬೆಳೆಯಲು ಸಹಾಯ ಮಾಡುತ್ತಾರೆ ಎಂಬ ನಂಬಿಕೆ ಬಲವಾಗಿದೆ.

ಪುರಾತನ ಆಯರ್ಲಂಡನಲ್ಲಿ

"ಒಲ್ಲವ್" ಎಂದು ಕರೆಯಲ್ಪಡುವ ವ್ಯಕ್ತಿ, ಅವನು ಪರಿಣಿತ ಕವಿ, ಕತೆಗಾರ ರಾಜನ ಪಕ್ಕದಲ್ಲಿ ಕುಳಿತಿರುತ್ತಿದ್ದ. ರಾಜ, ರಾಣಿ ಮತ್ತು ಒಲ್ಲವ್ ಅವರು ಮಾತ್ರ ಸಭೆಯಲ್ಲಿ ಆರು ವರ್ಣದ ಬಟ್ಟೆ ಧರಿಸಬಹುದಾಗಿತ್ತು. ಕತೆ ಹೇಳುವ "ಒಲ್ಲವ್" ಗೆ ನ್ಯಾಯಧೀಶನ ಮತ್ತು ಋಷಿಗಳ ಸ್ಥಾನ ಮಾನ ನೀಡಲಾಗುತ್ತಿತ್ತು. ಟರ್ಕಿಯಲ್ಲಿ "ಆಶಿಕ್ಸ" ಎಂದು ಕರೆಯಲ್ಪಡುವ ಜನ, ಹಾಡಿನ ಮೂಲಕ ಕತೆ ಹೇಳುತ್ತಿದ್ದರು. ಅರೇಬಿಕ್ ಭಾಷೆಯಲ್ಲಿ ಆಶಿಕ್ಸ ಅಂದರೆ "ಪ್ರೇಮಿ" ಎಂಬ ಅರ್ಥವಿದೆ. ಗಿನಿಯಾ, ಜಾಂಬಿಯಾದಲ್ಲಿ ಜಾಲೀಸ್ ಅಥವಾ ಗ್ರಿಯೇಟ್ಸ್ ಎಂಬ ಸಮುದಾಯದವರು ಹಳ್ಳಿಗಳಲ್ಲಿ ತಿರುಗಿ ಕತೆಗಳ ಮೂಲಕ ಅವರ ಮನಸ್ಸು ಸೆಳೆಯುತ್ತಿದ್ದರು.
ಭಾರತದಲ್ಲಿ ಅನೇಕ ಕತೆ ಹೇಳುವ ಪರಂಪರೆಗಳಿವೆ. ಪಾಂಡ್ವಾನಿ, ಹರಿಕತೆ, ವಿಳ್ಳು ಪಾಟ್ಟು, ಬುರ್ರ್ ಕಥಾ, ಪಾವಡಾ, ಬಾವುಲ್ ಮತ್ತು ರತ್ನ...ಹೀಗೆ. ಲಾವಣಿ ಇತ್ಯಾದಿ ನಮಗೆ ತಿಳಿಯದ ಹಲವಾರು ಸಮುದಾಯಗಳಿವೆ. ಈ ಪರಂಪರೆ ಹೀಗೆಯೇ ಮುಂದುವರಿಯಲಿ ಎಂದು ಆಶಿಸುತ್ತಾ, ಈಗೊಂದು ಭಾರತದ ಚಿಕ್ಕ ಜಾನಪದ ಕತೆ "ಅವಿವೇಕಿಗಳು" ಎಂಬ ಕತೆ ನೋಡೋಣ, ಮೂಲ ಯಾರದು ತಿಳಿಯದು. ಮನರಂಜನೆ ಹಾಗೂ ಪಾಠವಂತೂ ಇದೆ.

ಒಂದು ಊರಲ್ಲಿ ಅವಿವೇಕಿ ಗಂಡ-ಹೆಂಡತಿ ಇದ್ದರು. ಅವರಿಬ್ಬರೂ ದಿನಾಲೂ ಜಗಳವಾಡಿಕೊಂಡಿದ್ದರು. ಒಬ್ಬ ಬುದ್ಧಿವಂತ ಇವರಿಬ್ಬರೂ ಒಂದೆಡೆ ಇದ್ದರೆ ಹೀಗೆಯೇ ಜಗಳವಾಡಿಕೊಂಡಿರುತ್ತಾರೆ ಎಂದು ಗಂಡನಿಗೆ "ಯಾಕಯ್ಯ
ಹೀಗೆ ದಿನಾಲೂ ಹೊಡೆದಾಡಿ ಕೊಂಡಿರುವಿರಿ ಹೊರಗೆ ಜಗತ್ತು ನೋಡಿ ಬಾ, ಎಷ್ಟೊಂದು ನೋಡಲಿಕ್ಕಿದೆ " ಅಂದ. ಗಂಡ ಜಗತ್ತು ಸುತ್ತು ಹಾಕಲು ಹೊರಟ. ದೂರದ ಒಂದು ಊರಿಗೆ ಹೋದ. ಆ ಊರಲ್ಲಿ ಎಲ್ಲರೂ ಮೂರ್ಖರೇ ಇದ್ದರು. ಬೆಳಿಗ್ಗೆ ಸೂರ್ಯೋದಯದ ಸಮಯಕ್ಕೆ ದಾರಿಯಲ್ಲಿ, ಕಟ್ಟೆಗಳ ಮೇಲೆ, ಊರ ಹೊರಗೆ ಎಲ್ಲರೂ ಬುಟ್ಟಿ, ದೊಡ್ಡ ದೊಡ್ಡ ಪಾತ್ರೆ-ಪಡಗಗಳೊಡನೆ ಸೂರ್ಯನ ಬರವಿಗಾಗಿ ಕಾಯ್ದುಕೊಂಡಿದ್ದರು. ಅವಿವೇಕಿಗೆ ಆಶ್ಚರ್ಯ!!!, "ಏನ್ರಯ್ಯ, ಇದೆಲ್ಲ? ಹೀಗೇಕೆ ಪಾತ್ರೆ, ಬುಟ್ಟಿ... ಹೀಗೆ ಕೈಗೆ ಸಿಕ್ಕಿದುದನೆಲ್ಲ ಹಿಡಿದು ಕುಳಿತಿರುವಿರಿ?" ಅಂದ. ಅವರೆಲ್ಲ, "ನಮ್ಮ ಮನೆಗಳಲ್ಲಿ ಬಿಸಿಲು ಬರುವದಿಲ್ಲ. ಅದಕ್ಕಾಗಿ ಬಿಸಿಲು ಹಿಡಿದುಕೊಂಡು ಹೋಗಲು ಕಾಯ್ತಾ ಇದ್ದೇವೆ" ಎಂದು ಹೇಳಿದರು. ಅವಿವೇಕಿ ಅವರ ಮನೆಗಳನ್ನು ನೋಡಿದ. ಬಾಗಿಲು, ಕಿಟಕಿ, ಎಲ್ಲ ಮುಚ್ಚಿದ್ದರು. ಬೆಳಕಿಗೆ ಒಳ ಹೋಗಲು ಒಂದು ಸೂಜಿ ಮೊನೆಯಷ್ಟೂ ಕಿಂಡಿ ಇರಲಿಲ್ಲ. ಅವಿವೇಕಿ, "ಬನ್ರಯ್ಯ ಇಲ್ಲಿ ನಿಮ್ಮ ಮನೆಗೇ ಸೂರ್ಯ ಬರ್ತಾನೆ" ಎಂದು ಎಲ್ಲರ ಮನೆ ಬಾಗಿಲು, ಕಿಟಕಿ ತೆಗೆಸಿದ. ಕಿಟಕಿ ಇಲ್ಲದಿರುವಲ್ಲಿ ಗೋಡೆ ಒಡೆದು ಕಿಂಡಿ ಮಾಡಿದ. ಅಷ್ಟರಲ್ಲಿ ಸೂರ್ಯೋದಯವಾಯಿತು ಎಲ್ಲರ ಮನೆಯಲ್ಲೂ ಬಿಸಿಲು ಬಂದಿತ್ತು. ಊರವರಿಗೆ ತಮ್ಮ ಊರಿಗೊಬ್ಬ ಜಾಣ ಬಂದ ಎಂದು ಸಂತೋಷವಾಯಿತು.

ಅಂದು ಅವಿವೇಕಿ ಇನ್ನೊಂದು ಘಟನೆ ನೋಡಿದ. ಒಂದು ಮನೆಯ ಮೇಲಿದ್ದ ಮಣ್ಣಿನಲ್ಲಿ, ಹುಲ್ಲು ಬೆಳೆದಿತ್ತು, ಆ ಮನೆಯ ಹೆಂಗಸು ತನ್ನ ಎಮ್ಮೆಗೆ ಮೆಟ್ಟಿಲು ಏರಿ ಹುಲ್ಲು ತಿನ್ನಲು ಅದನ್ನು ಹೊಡೆದು ಸತಾಯಿಸುತ್ತಲಿದ್ದಳು. ಅವಿವೇಕಿ, ಎಂಥ ಮೂರ್ಖರಪ್ಪ ಈ ಊರಿನ ಜನ ಎಂದು, ಆ ಹೆಂಗಸಿಗೆ "ಅಮ್ಮ, ಎಮ್ಮೆಗೆ ಹೊಡಿಯಬೇಡಿ ಇರಿ" ಎಂದು ಹೇಳಿ, ಮೆಟ್ಟಿಲು ಹತ್ತಿ ಮಾಳಿಗೆ

ಮೇಲಿನ ಹುಲ್ಲು ಕಿತ್ತು ತಂದು ಎಮ್ಮೆ ಎದುರು ಮೇಯಲು ಹಾಕಿದ. ಎಮ್ಮೆ ನಿಶ್ಚಿಂತೆಯಿಂದ ಹುಲ್ಲು ತಿನ್ನತೊಡಗಿತು.
ಮರುದಿನ ಒಂದು ಮನೆಯ ಮುಂದೆ ಜನಸಂದಣಿ ಕಂಡು ಅಲ್ಲಿಗೆ ಹೋದ. ಅಲ್ಲಿ ಒಂದು ಮರದ ದಿಮ್ಮಿಯನ್ನು ಮನೆಯೊಳಗೆ ಸಾಗಿಸಲು ಹಲವಾರು ಯುವಕರು ಯತ್ನಿಸುತ್ತಿದ್ದರು. ಬಾಗಿಲು ಚಿಕ್ಕದು, ಮರದ ದಿಮ್ಮಿ ದೊಡ್ಡದು. ಎಷ್ಟೇ ಜನ ಸೇರಿದರೂ ದಿಮ್ಮಿ ಒಳ ಹೋಗುತ್ತಲಿಲ್ಲ. ಅವಿವೇಕಿ ಬಂದಿದ್ದನ್ನು ಗಮನಿಸಿ ಎಲ್ಲರೂ "ಜಾಣ ಬಂದ, ಜಾಣ ಬಂದ" ಅಂದರು. ಅವಿವೇಕಿ, ಯುವಕ ರಿಂದ ಮರದ ದಿಮ್ಮಿಯನ್ನು ತುಂಡು ತುಂಡು ಮಾಡಿಸಿ ಮನೆಯೊಳಗೆ ಸಾಗಿಸಿದ.

ಕೆಲ ದಿನಗಳಲ್ಲಿ ಆ ಊರ ಜನ ಸಾಮಾನ್ಯರಂತೆ ಇರಲಾರಂಭಿಸಿದರು. ಜಾಣನಿಗೆ ಊರಲ್ಲಿ ಒಳ್ಳೆ ಮರ್ಯಾದೆ ಇತ್ತು. ಅವನ ಅವಿವೇಕಿತನಕ್ಕೆ ಅವನಿಗೇ ಬೇಸರವಾಗಿತ್ತು. ಮರಳಿ ಊರಿಗೆ ಬಂದು ಹೆಂಡತಿಯೊಡನೆ ಸುಖವಾಗಿದ್ದ.

ಇದು ಯಾರು ಹೇಳಿದ ಕತೆಯೋ, ಮನರಂಜನೆಯೊಂದಿಗೆ ನಮಗಿಂತ ಬುದ್ಧಿವಂತರೊಡನೆ ಇರುವುದಕ್ಕಿಂತ, ನಾವು ಬುದ್ಧಿವಂತರಾಗಿ ಇರುವಲ್ಲಿ ನೆಮ್ಮದಿ ಇದೆ, ಎಂಬ ಪಾಠವೂ ಇದೆ.

## ಲೇಖನ - ಎನಿ ಮೂನ್	**ಗೋಪಿನಾಥ ಎಚ್ ವಿ**

ಜ್ಞಾನೇಶನ ಅಜ್ಜಿಗೆ ಮದುವೆಯಾದ ಮೊಮ್ಮಗನ
ಹೆಂಡತಿ ಚಂಪಕಳನ್ನ ನೋಡಿ ಕರುಳು ಚುರ್
ಎನಿಸುತ್ತಿತ್ತು..ಮೊಮ್ಮಗ ಮದುವೆಯಾದರು
ಹೆಂಡಿರನ್ನ ಕರಕೊಂಡು ಎಲ್ಲಿಗೂ ಹೋಗಲ್ಲಿಲ್ಲವೇಕೆಂತ ? ಮಗಳು ಬಸಮ್ಮನ್ನ ಕೇಳಿದಳು..
'ಎಲ್ಲಗವ್ವ ಹೋಗೋದು ಇಟೊಂದು ಕೆಲಸ
ಮಡಿಕ್ಕೊಂಡು ಎಲ್ಲಿಗಾ ಹೋಗೋದು..
'ಅದೇ ಕಾಣ್ ಬಸ್ಸೀ ಅದೇನೋ ಈಗಿನ ಕಾಲಾದಾಗ ಮದುವೆಯಾದ ಮಾರನೆ ದಿನಾನೇಯಾ ಏನಿ ಮೂನು..ಏನಿ ಮೂನುಂತ ಹೋಯಿತ್ತಾರಲ್ಲ ಅಂಗಂದ್ರೇನು ..ಇವನ್ಯಾಕೆ ಹೋಗಿಲ್ಲ ನಿನ್ನ ಮಗ..?' ಅಂದಾಗೆ ನೀನು ಹೋಗಿದ್ದೆಯೇ ಅಲ್ಲವೇ ? ಏನಿ ಮೂನುಂತ ಆ ಕಾಲದಾಗೇನೆ…ನೀ ಬಡು ಬಲು ಐನಾತಿ ಇದ್ದೀಯಾ..ಎಲ್ ಬಿಟ್ಟೆಯಾ ಕರಕೊಂಡ ಹೋಗಿರತ್ತೀಯೇ..ಗಂಡನ್ನ !
'ಅವ್ವ ಅದೇನ್ ಹೇಳಕಾಹತ್ತೀಯಾ ನೀನು..ಏನಿ
ಮೂನು..ಏನಿ ಮೂನುಂತ ಅದರ ಜಪನೇ ಆತು…
ಓ ಅರ್ಥವಾತು ಬಿಡು..'ಹನಿ ಮೂನ್ '
'ಅಂಗಂದ್ರೇನು…? ನೀನು ಓಗಿದ್ದೀಯೇ..

'ಆ ಚಪಲ ನೋಡು ಮುದುಕಿಗೆ ವಯಸ್ಸಬತ್ತಾಯಿದೆ..ಅದಯ್ಯಾಕಾ ಗೆಪ್ತಿಬಂತೀಗ ನಿನಗೆ.
'ಅಲ್ಲ ಕೇಳಿದ ಪ್ರಶ್ನೆಗೆ ಉತ್ತರ ಹೇಳಮ್ಮಿ..ನೀ ಹೋಗಿದ್ದೇಯೇ..
'ಓಗಿದ್ದೋ ನಿನ್ನ ಅಳಿಯ ಪ್ಯಾಟೆಯಾಗೆ ಓದ್ದೋನು
ಕರಕೊಂಡುಹೋಯಿತ್ತೀನಿಂತ ಪ್ಯಾಟೆಯಾಗೆ
ಸಿನಿಮಾ ತೋರಸಿ 'ನೋಡು ಈದೇಯಾ ಕಾಶ್ಮೀರ, ಇದು ಜೋಗು, ಇದು ಕಮ್ಮಣ್ಣಗುಂಡಿಂತ ಡಾ. ರಾಜಕುಮಾರ್ ಪಿಚ್ಚರ್ ತೋರಿಸಿ ಗೋಲಿ ಸೋಡ
ಕ್ರಷ್ ಕೊಡಸಿ ಎರಡು ಮೋಳ ಮಲ್ಲಿಗೆ ಹೂವು ಕೊಡಿಸಿ, ಹೋಟೆಲ್ನಾಗೆ ಮಸಾಲೆ ದೋಸೆ ಕೊಡಿಸಿ
ನಡಿ ಓಗಾವಾಂತ ಕರಕೊಂಡ ಬಂದ.
ಕೇಳಿದ್ದಕ್ಕೆ..ಬೇರೆಲ್ಲಿಗೆ ಹೋದರು ಇದೆಯಾ ಮಾಡೋದುಂತ ಹೇಳಿ ಮನಿಗೆ ಕರಕೊಂಡ ಬಂದ ನಿನ್ನ ಅಳಿಯ.
'ಮತ್ತೆ ಮದುವೆಯಾದ ಹೊಸದರಲ್ಲೇ ಅವ್ವ ನನ್ನೂ
ಕಳಿಸು ಏನಿ ಮೂನ್ಗೆಂತ ಕೇಳಕ್ಕಿಲ್ವಾ ಮತ್ತೆ ನನ್ನ.
'ಹೋಗಲಿ ಬಿಡವ್ವ ಅದೆಲ್ಲ ಈಗ್ಯಾಕೆ ಗೆಪ್ತಿ ಮಾಡಿಯೇ ನಂಗೆ ಬಾರಿ ವ್ಯಸನ ಅಯಿತದೆ. ಮಗನ್ನಾದರು ಕಳಿಸೋವಾಂದ್ರೆ...ಮುದೇವಿ ಏನಂದ ಗೊತ್ತೆ ?' ನಿನ್ನ ಮೊಮ್ಮಗ ಆ ಅಪ್ಪನ ಮಗನಲ್ಲವೇ ಇವನು.
'ಅವ್ವ ನಿಂಗೇನು ಬುದ್ದಿ ಐತಾ..ನಾನು ಈಗಲೇ
ಕೋಳಿ ಫಾರಂ ಬಿಟ್ಟಿಯಾಗಿ ಮಾಡಕೊಂಡೀನಿ
ದುಡ್ಡು ಖರ್ಚು ಮಾಡತ್ತೀನಾ..ದುಡ್ಡಿನ ಬಾಬ್ತು ಮಾತ್ರ ಹೇಳ ಬೇಡ ಕಾಣವ್ವ ಹನಿ ಮೂನ್ಗೆ ಹೋದರೆ ಸಾವಿರಾರು ರೂಪಾಯಿ ಖರ್ಚುಂದ.
'ಹೌದ ಅಂಗಂದನಾ..ಥು ಅವನ ಮುಖಕ್ಕಿಷ್ಟು... ಹೋಗಲಿ, ಬಸ್ಸೀ ಆ ಮಗಿಗೆ ಚಂಪಕಳಿಗೆ ಆಸೆಯಿರತ್ತದೆ ನೋಡು..ಏನಿ ಮೂನ್ಗೆ ಹೋಗಿಲ್ಲಾಂತ, ನೀನೂ ಹೋಗಿಲಿಲ್ಲ..ನನಗೆ ಅದೇನಂತ ಗೊತ್ತಾಗಲೇ ಇಲ್ಲ
ವಯಸ್ಸಿದ್ದಾಗ...ನನ್ನ ಗಂಡನೋ ಸತ್ತು ಪಟ
ಸೇರಕೊಂಡಬುಟ್ಟ..ಒಂದ್ ಕೆಲಸ ಮಾಡುವಾ..
ಅವನಿಗೆ ಸಾವಿರ ರೂಪಾಯಿ ಕೊಡತ್ತೀನಿ ಹೆಂಡಿರ
ಕರಕೊಂಡು ಏನಿ ಮೂನ್ಗೆ ..ಅಲ್ಲ ಹನಿ ಮೂನ್ಗೆ
ಮೈಸೂರಿಗೆ ಕರಕೊಂಡ ಹೋಗನ್ನು..
ಪಟದಾಗಿದ್ದ ಅಪ್ಪಯ್ಯನಿಗೆ 'ನೀ ಇನ್ನೂ ಬದುಕಿದ್ದರೆ
ನಿನ್ನ ಏನೇನು ಅಡಿಸ್ತಿದ್ದಳೋ' ನಮ್ಮವ್ವಂದಳು ಬಸಮ್ಮ.

ಹಾಸ್ಯ ಲೇಖನ -ಧರೆಗಿಳಿದ ದೇವಿಯರು	**ಶ್ರೀಮತಿ ನಾಗರತ್ನಾ ಚಂದ್ರಶೇಖರ**

ಎಂದಿನಂತೆ 2020ರಲ್ಲಿ ತ್ರಿಮೂರ್ತಿಗಳ ಸತಿಯರು ತಮ್ಮ ವಾರ್ಷಿಕ ಭೂಲೋಕ ಸಂಚಾರ ಮುಗಿಸಿಕೊಂಡು ತ್ರಿಲೋಕ ಭವನದಲ್ಲಿ ತ್ರಿಬಲ ಕುಶಲೋಪರಿ ಸಮಾಚಾರ ವಿನಿಮಯಕ್ಕಾಗಿ ಸಂತೋಷ ಕೂಟ ಏರ್ಪಡಿಸಿಕೊಂಡಿದ್ದರು.

ಮೊದಲಿಗೆ ಮಾತು ಪ್ರಾರಂಭಿಸಿದ ಶ್ರೀಲಕ್ಷ್ಮಿ ಪಾರ್ವತಿಯ ಕಡೆ ನೋಡುತ್ತಾ ಅಕ್ಕ , ಎಲ್ಲರಿಗಿಂತ ನೀವು ತಾನೇ ಮೊದಲು ಭೂಲೋಕಕ್ಕೆ ಹೋಗಿದ್ದು; ಆದ್ದರಿಂದ ನಿಮ್ಮ ಈ ಸಾರಿಯ ಅನುಭವವನ್ನು ಮೊದಲು ನೀವೇ ಪ್ರಾರಂಭಿಸಿ ಎಂದಳು.
ಪಾರ್ವತಿ ಮುಗುಳು ನಗೆಯೊಡನೆ “ಹೌದು, ಈ ಸಾರಿ ಭೂಲೋಖ ಸಂಚಾರ ಅಷ್ಟೇನೂ ಹಿತವಾಗಿರಲಿಲ್ಲ ನಮ್ಮೆಲ್ಲರಿಗೂ ಅಲ್ಲವೆ? ಕರೋನ ಎಂಬ ರಾಕ್ಷಸನ ಹಾವಳಿಯಿಂದಾಗಿ ಅಲ್ಲಿನ ಜನ ಜೀವನವೆಲ್ಲಾ ಅಸ್ತವ್ಯಸ್ಥವಾಗೇ ಇದೆಯಲ್ಲವೆ? ಸಾವು, ನೋವುಗಳಿಂದ ಜನ ಒದ್ದಾಡುತ್ತಿರುವಾಗ ಹಬ್ಬ ಹರಿದಿನಗಳನ್ನು ಆಚರಿಸುವ ಉತ್ಸಾಹವೇ ಕಾಣಲಿಲ್ಲ. ಮದುವೆಗಳನ್ನು ಮುಂದೂಡುತ್ತಿದ್ದಾರೆ, ಪೂಜೆ, ವ್ರತ, ಪುನಸ್ಕಾರಗಳೇ ಇಲ್ಲ. ಗೌರಿ ಬಾಗಿನದ

ಸುಳಿವೇ ಇಲ್ಲ. ಯಾರನ್ನು ಮುಟ್ಟಲೂ, ಯಾವುದನ್ನು ತಿನ್ನಲೂ ಜನ ಹೆದರುತ್ತಿದ್ದರು. ಅದಿರಲಿ, ದೇವಸ್ಥಾನಗಳಲ್ಲಿ ದೇವರನ್ನೇ ಒಳಗೆ ಕೂಡಿ ಬೀಗ ಹಾಕಿದ್ದಾರಲ್ಲ!
ಆದರೆ ಈ ಸಾರಿ ಮಹಿಳೆಯರು ಮೈ ಬಗ್ಗಿಸಿ ಮನೆಯಲ್ಲೇ ಶುಚಿಯಾಗಿ, ರುಚಿಯಾಗಿ ಹೋಳಿಗೆ, ಕಡಬು ಎಲ್ಲಾ ತಯಾರಿಸಿದ್ದು ತುಂಬಾ ಖುಷಿಯಾಯಿತು. ಅದೇನೋ ನಮ್ಮ ಮೈಗೆಲ್ಲಾ ಸ್ಯಾನಿಟೈಸರ್‌ಅಂತೆ ಹಾಕಿ ತೊಳೆದ ವಾಸನೆಯಂತೂ ಇನ್ನೂ ಹೋಗೇ ಇಲ್ಲ ಅಂತ ಅನಿಸುತ್ತಿದೆ".

ಪಾಪ, ಗಣೇಶನಿಗಂತೂ ಹಾಡು, ಕುಣಿತ, ಮೆರವಣಿಗೆ ಯಾವುದೇ ಸಂಭ್ರಮ ಕಾಣಿಸದೆ ತುಂಬಾ ನಿರಾಶೆಯಾಯಿತು. ಸದ್ಯ ನಮ್ಮನ್ನೆಲ್ಲಾದರೂ ಕ್ಯಾರೆಂಟೈನ್ ಮಾಡಿದ್ದರೆ ಗತಿಯೇನು ಅಂತ ಓಡಿ ಬರುವಷ್ಟರಲ್ಲಿ ಸಾಕಾಯಿತು.

ಪಾರ್ವತಿಯ ಮಾತಿಗೆ ಲಕ್ಷ್ಮಿ, ಸರಸ್ವತಿ ಮನಸಾರೆ ನಕ್ಕರು. "ಅಯ್ಯೋ, ನಿಮಗಾದ ಅನುಭವವೇ ನಮಗೂ ಆಗಿದೆಯಲ್ಲವೆ ಅಕ್ಕ" ಎನ್ನುತ್ತಾ ಸರಸ್ವತಿ ಮಾತಿಗೆ ತೊಡಗಿಕೊಂಡಳು. ನನಗಂತೂ ಅಲ್ಲಿ ಯಾರ ಗುರುತೂ ಹಿಡಿಯಲು ಕಷ್ಟವಾಗುತ್ತಿತ್ತು. ಮೂಗು, ಬಾಯಿ ಮುಚ್ಚಿಕೊಂಡು ಓಡಾಡೋದೇನು? ಪದೇ ಪದೇ ಕೈ ತೊಳೆದೂ ತೊಳೆದೂ ಸುಸ್ತಾಗುತ್ತಿದ್ದರು. ಅಂತೂ ಆ ಜನರು ಬಾಯಿಗೆ ಬ್ರೇಕ್ ಹಾಕಲು ಕರೋನಾ ರಾಕ್ಷಸನೇ ಬರಬೇಕಾಯಿತೆ, ಪಾಪ ಅನಿಸಿತು.

ಇನ್ನು ಮಕ್ಕಳ ವಿದ್ಯೆ ನೈವೇದ್ಯವಾಗಿದೆ. ಇಷ್ಟು ವರ್ಷ ಪುಸ್ತಕಗಳ ಮೂಟೆ ಹೊತ್ತು ಶಾಲೆಗೆ ಹೋಗುತ್ತಿದ್ದವರಿಗೆ ಮುಕ್ತಿ ಸಿಕ್ಕಿದೆ. ಆದರೆ ಅದೆಂತದೋ ಜಾಲ ಅಂತರ್ಜಾಲವಂತೆ, ವೆಬಿನಾರ್‌ಅಂತೆ, ಗೂಗಲ್ ಅಂತ ಎಲ್ಲಕ್ಕೂ ಅದೇ,
ಮಕ್ಕಳ ಸ್ಕೂಲು ಮನೇಲೇ ಆಗಿದೆ. ಪರೀಕ್ಷೆಗಳೇ ಇಲ್ಲದೆ ಪಾಸಾಗುತ್ತಿದ್ದಾರೆ. ಈಗ ನನ್ನ ದಯೆಗಾಗಿ ಭಕ್ತಿಯಿಂದ ವರ ಕೇಳುವವರೇ ಇಲ್ಲ. ಮದುವೆ, ಮುಂಜಿ, ಕಡೆಗೆ ವೈಕುಂಠ ಸಮಾರಾಧನೆ ಕೂಡ ದೂರಸಂಪರ್ಕದಿಂದಲೇ..
ಮಸ್ತಕವೇ ಪುಸ್ತಕವಾದ ಮೇಲೆ ನಾನೂ ಕೂಡ ಕಂಪ್ಯೂಟರ್ ಜ್ಞಾನ ಕಲಿತೇ ಬಂದೆ", ಮತ್ತೊಮ್ಮೆ ಎಲ್ಲರೂ ಮನಸಾರೆ ನಕ್ಕರು

ಈಗ ಲಕ್ಷ್ಮಿಯ ಸರದಿ. " ನಾನಂತೂ ಆ ಭೂಲೋಕದ ತುಪ್ಪದ ಕಜ್ಜಾಯಕ್ಕಾಗೇ ಕಾಯುತ್ತಾ ಹೋದವಳು, ದುರಾದೃಷ್ಟ, ಕಜ್ಜಾಯ ಮಾಡುತ್ತಿದ್ದ ಅಜ್ಜಿಯರ ಸಂಖ್ಯೆಯೇ ಕರೋನಾ ರಾಕ್ಷಸನಿಂದಾಗಿ ಕಡಿಮೆಯಾಗಿತ್ತು. ಈಗಿನ ಪೀಳಿಗೆಯವರು ಪಿಜ್ಜಾ ಬೇಕಾದರೆ ಸಲೀಸಾಗಿ ಮಾಡುತ್ತಾರಂತೆ, ಕಜ್ಜಾಯ ಅಂದರೆ ಹೌಹಾರುತ್ತಾರೆ."

ಲಕ್ಷ್ಮಿ ಕಟಾಕ್ಷ ಎಲ್ಲರಿಗೂ ಬೇಕು, ಆದರೆ ರಸ್ತೆಗಳಲ್ಲಿ ಹೆಣ ಬೀಳುವಾಗ ಹಣದ ಚಿಂತೆ ಮರೆಸುವಷ್ಟು ನೋವಿತ್ತು ಅಲ್ಲಿ.
ಹಾಗಾಗಿ ನನ್ನನ್ನು ಸ್ವಾಗತಿಸಲು, ಸಂಭ್ರಮಿಸಲು ಬೆಳಕಿಗಿಂತ ಕತ್ತಲೇ ತುಂಬಿತ್ತು. ಕಳೆದ ಸರಿ ಹೋದಾಗ ಬ್ಯೂಟಿ ಪಾರ್ಲರ್ಗೆ ಹೋಗಿದ್ದೆ ಅಂತ ಹೇಳಿದ್ದೆ ಅಲ್ಲವೆ? ಆದರೆ ಈ ಸಾರಿ ಅವೆಲ್ಲಾ ಕದ ಮುಚ್ಚಿ ಕೂತಿದ್ದವು. ನನ್ನ ಸುಣ್ಣ ಬಣ್ಣ

ಮಾಡಿಸ್ಕೊಳ್ಳೊ ಆಸೆಗೆ ಕಲ್ಲು ಬಿತ್ತು. ಅಲ್ಲಿನ ಹೆಂಗಸರು ಒಡವೆ, ಸೀರೆ ಅಂತ ಶಾಪಿಂಗ್ ಮಾಡದೆ ಮನೆಯಲ್ಲೇ ಇದ್ದರಲ್ಲ,
ನೈಟಿ ಹಾಕ್ಕೊಂಡೇ ನನ್ನ ಪೂಜೆ ಮಾಡೋದು ನೋಡಿ ನನಗೆ ಅಳುವೇ ಬಂತಮ್ಮ. ಕರೋನ ಹೀಗೇ ಇದ್ದರೆ ಮುಂದಿನ ಸಾರಿ ನನಗೂ ನೈಟಿ ಹಾಕಿ ಬಿಡುತ್ತಾರೇನೋ ಅನ್ನೋ ಭಯ!

ಲಕ್ಷ್ಮಿಯ ಮಾತಿಗೆ ಮತ್ತೆ ಎಲ್ಲರೂ ಮನಸಾರೆ ನಕ್ಕರು. ವೇದಿಕೆಯ ಮೇಲಿನ ನಾಟಕದ ಮೊದಲನೇ ಶೋಗೇ ಜನ ಫಿದಾ ಆಗಿದ್ದರು. ಚಪ್ಪಾಳೆಯ ಸುರಿಮಳೆ. ನಾನು ಬರೆದ ನಾಟಕ "ಧರೆಗಿಳಿದ ದೇವಿಯರು" ತುಂಬಾ ಯಶಸ್ವಿಯಾಯಿತು ಅಂದುಕೊಳ್ಳಲೆ? ನೋಡಿದ ಕೇಳಿದ ನಿಮಗೆಲ್ಲಾ ಧನ್ಯವಾದಗಳು.

ಹಾ....ಮರೆತ ಮಾತು, ಹೊರಗೆ ಪಟಾಕಿ ಹೊಡೆಯುತ್ತಿದ್ದಾರೆ, ಆದರೆ ಅವು ಚೀನಾದಂತೆ, ಎಲ್ಲವೂ ಟುಸ್ ಪಟಾಕಿಗಳೇ, ಬ್ರಹ್ಮಾಸ್ತ್ರ ಕಳಿಸುವೆ ಕರೋನಾ ರಾಕ್ಷಸನನ್ನು ಕೊಲ್ಲಲು ಅಂತ ಸರಸ್ವತಿಯಮ್ಮ ಹೇಳಿ ಹೋಗಿದ್ದಾರೆ,
ಆ ಬ್ರಹ್ಮದೇವ ಅವರ ಮಾತು ಕೇಳಲೇಬೇಕಲ್ಲವೆ?

ನಾಗರತ್ನ ಚಂದ್ರಶೇಖರ

ಹಾಸ್ಯ ಲೇಖನ - ಯಮನಿಗೂ ಸಮಸ್ಯೆಯೇ?	**ಶ್ರೀಮತಿ ನಿರ್ಮಲಾ ಜಿ.ವಿ**

ಅಂದು ಬೆಳಗ್ಗೆ ಚಿತ್ರಗುಪ್ತ ಬಹಳ ಬೇಗ ತನ್ನ ಕಛೇರಿಗೆ ಬಂದು ತಲುಪಿದ. ಯಮಧರ್ಮರಾಯ ಹಿಂದಿನ ದಿನ ಓವರ್ ಟೈಂ ಮಾಡಿ ಸುಸ್ತಾಗಿದ್ದರೂ ಅಂದೂ ಸಮಯಕ್ಕೆ ಸರಿಯಾಗಿ ಬಂದಿದ್ದ. ಎಷ್ಟಾದರೂ ಕಾಲನಲ್ಲವೇ? ಅವನು ಸದಾ ಕಾಲ ಸಮಯಕ್ಕೆ ಕಟ್ಟುಬೀಳಲೇ ಬೇಕು. ಆದರೆ ಹಿಂದಿನ ದಿನದ ಆಯಾಸ ಅವನ ಮುಖದಲ್ಲಿ ಕಾಣುತ್ತಿತ್ತು.
'ಬುದ್ದೀ..ಎಂದ ಚಿತ್ರಗುಪ್ತ ತಲೆ ಕೆರೆಯುತ್ತಾ ಮಾತನ್ನು ಅರ್ಧದಲ್ಲಿಯೇ ನಿಲ್ಲಿಸಿದ.
'ಏನಪ್ಪಾ ಮಹರಾಯಾ ಬೇಳಗಾಗುತ್ತಿರುವ ಹಾಗೇ ನಿನ್ನ ಸಮಸ್ಯೆ?' ಯಮ ವಿಚಾರಿಸಿದ
'ಬುದ್ದೀ, ನಂಗೆ ಏನೂ ಗೊತ್ತಾಗ್ತಾ ಇಲ್ಲ'
'ನಿಂಗೆ ಗೊತ್ತಾಗೋದು ಏನಿದೆ? ನಿಂಗೆ ಬೇರೆ ಬೇರೆ ಕೆಲಸಗಳೇನೂ ಇಲ್ವಲ್ಲಾ. ನಾ ಕೊಟ್ಟ ಹೆಸರುಗಳ್ನ ಸರ್‍ರ್ಯಾಗಿ ಓದ್ಕೋ. ಸಮಯಕ್ಕೆ ರ್‍ಯಾಗಿ ಹೋಗಿ ಕುಣಿಕೆ ಹಾಕು. ಎಳ್ಕೊಂಡು ಬಾ. ಇದ್ರಲ್ಲಿ ನೀನು ಯೋಚ್ಸೋದೇನಿದೆ?' ಎಂದು ಸ್ವಲ್ಪ ಗದರಿಕೆಯ ಧ್ವನಿಯಲ್ಲೇ ಗುಡುಗಿದ ಯಮ.
"ಬುದ್ದಿ, ಅಲ್ಲೇ ಎಡವಟ್ಟಾಗ್ತಾ ಇರೋದು"
"ಎಡವಟ್ಟಾ? ಅದೇನು? ನೀನು ಎಡವಿದ್ರೆ ಮಾತ್ರ ಎಡವಟ್ಟು ಆಗೋದು ನಿಜ"

“ಅದೇ ಬುದ್ದಿ, ಈಗ ಅದೇನೋ ಮಹಾಮಾರಿ ರೋಗ ಕೋವಿಡ್ ಅಂತ ಭೂಲೋಕಕ್ಕೆಲ್ಲಾ ಬಂದಿದ್ಯಾಲ್ಲಾ...'

‘ಅದು ನಂಗೂ ಗೊತ್ತು. ಅದ್ರಿಂದ ನಮ್ಮ ಕೆಲ್ಸ ಸಿಕ್ಕಾಪಟ್ಟೆ ಆಗಿ, ನಮ್ಮ ಲೋಕಕ್ಕೆ ಬಂದವ್ರನ್ನ ಎಲ್ಲೆಲ್ಲಿ ಕಳ್ಸಬೇಕು, ಏನೇನು ಶಿಕ್ಷೆ ಕೊಡ್ಬೇಕೂ ಅಂತ ಗೊಂದಲವಾಗಿ ತಲೆಬಿಸಿಯಾಗಿದೆ. ಅದು ನಿಂಗೂ ಗೊತ್ತಲ್ಲ. ನನ್ನ ಕಷ್ಟ ನಂಗೆ. ನಿಂದೇನು ಕಷ್ಟ?'

‘ಅದೇ ಬುದ್ದಿ, ನೀವು ಕೊಟ್ಟ ಅಡ್ರೆಸ್ನಲ್ಲಿ ಜನ ಇರೋದೇ ಇಲ್ಲ. ಎಲ್ಲಿದ್ದೋರು ಎಲ್ಲೋ ಹೊರಟ್ಹೋಗಿರ್‍ತಾರೆ. ಒಬ್ಬೊಬ್ಬರನ್ನೂ ಹುಡುಕೋದೇ ಕಷ್ಟವಾಗಿದೆ.'

‘ಅದ್ಯಾಕೆ? ಒಬ್ಬಿಬ್ರದ್ದು ಅಡ್ರೆಸ್ ತಪ್ಪಾಗತ್ತೆ. ಎಲ್ರದ್ದೂ ಹೇಗೆ ತಪ್ಪಾಗತ್ತೆ? ಬೇಕಾದ್ರೆ ಆಧಾರ್ ಕಾರ್ಡು ನೋಡಿ, ನಂತರ ಕುಣಿಕೆ ಹಾಕು'

‘ನೋಡಿದ್ರಾ? ನಿಮ್ಗೆ ಸರ್‍ಯಾಗಿ ಏನೂ ಗೊತ್ತೇ ಇಲ್ಲ. ಜನ ಕೆಲ್ಸ ಕಳ್ಕೊಂಡು ಪಟ್ಟಣದಿಂದ ಹಳ್ಳೀಗೆ ನೂರಾರು ಮೈಲಿ ಹೊರಟ್ಹೋಗಿರ್‍ತಾರೆ. ನೀವು ಕೊಟ್ಟ ಅಡ್ರೆಸ್ನಲ್ಲಿ ಇರೋದೇ ಇಲ್ಲ. ಹೇಗೆ ಹುಡುಕ್ಲಿ? ಅಷ್ಟೇ ಏಕೆ ಒಂದು ದೇಶದಿಂದ ಮತ್ತೊಂದು ದೇಶಕ್ಕೆ ಹೋಗ್ತಾ ಇದ್ದಾರೆ. ಬಂದವ್ರು ಹೋಗಿ ತಲೆಮರೆಸಿಕೊಂಡು ಬಚ್ಚಿಟ್ಟುಕೊಳ್ತಾರೆ.'

‘ನೀನೇನು ಬಸ್, ರೈಲು ಹಿಡ್ಕೊಂಡು ಹೋಗ್ಬೇಕಾ? ಗಾಳಿಯಲ್ಲಿ ಕ್ಷಣ ಮಾತ್ರದಲ್ಲಿ ಹೋಗ್ಬೋಹ್ದಲ್ವಾ?'

‘ಹೌದು. ಅವ್ರು ನಡ್ಕೊಂಡು ಹೋಗೋವಾಗ, ನಾನು ಗಾಳಿಯಲ್ಲಿ ಹೋದ್ರೆ ಅವರ ಸ್ಪೀಡ್‌ಗೂ ನನ್ನ ಸ್ಪೀಡ್‌ಗೂ ಹೊಂದಾಣ್ಕೆ ಆಗ್ದೇ ನಾನು ಇತ್ತಂದತ್ತ, ಆತ್ತಂದಿತ್ತ ಸೊಂಯ್.., ಸೊಂಯ್ ಅಂತ ತೂರಾಡಿ ತಲೆ ತಿರುಗು ಬಿದ್ಹೋಗೋ ಹಾಗೆ ಆಗಿದೆ. ಬುದ್ದೀ. ನೀವೇ ನನ್ನ ಕಾಪಾಡ್ಬೇಕು'

‘ಅದ್ಯಾಕೆ ಅವರು ನಡ್ಕೊಂಡು ಹೋಗ್ತಾರೆ? ಭೂಲೋಕದಲ್ಲಿ ವಾಹನಗಳಿಗೂ ರೋಗ ಬಡದಿದ್ಯಾ?'

‘ಅಯ್ಯೋ ಬುದ್ದಿ, ಆ ರೋಗ ಒಬ್ರಿಂದ ಒಬ್ರಿಗೆ ಎಲ್ರಿಗೂ ಹರಡತ್ತೆ. ಅದ್ಕೆ ಎಲ್ಲಾ ಇದ್ದಲ್ಲೇ ಇರಿ ಅಂತ ಬಸ್ಸು, ರೈಲು ಯಾವ್ದೂ ಓಡಬರ್‍ದು ಅಂತ ನಿಲ್ಸಿದ್ದಾರೆ. ಅಷ್ಟೇ ಏಕೆ ಹಿರಿಯರು, ಮಕ್ಕಳು ಮನೆ ಬಿಟ್ಟು ಆಚೆ ಬರ್‍ಬೇಡಿ ಅಂತ ಕಟ್ಟುನಿಟ್ಟಾಗಿ ಹೇಳಿದ್ದಾರೆ. ರಸ್ತೇಲಿ ಯಾವ ವಾಹನಾನೂ ಓಡೋ ಹಾಗೇ ಇಲ್ಲ. ಕೊನೆಗೆ ವಿಮಾನ ಕೂಡ ಹಾರಕ್ಕೆ ಬಿಟ್ಟಿಲ್ಲ.'

‘ಓಹೋ, ಇಷ್ಟೆಲ್ಲಾ ಅನಾಹುತ ಆಗ್ತಾ ಇದ್ಯಾ?'

‘ಅಯ್ಯೋ ಇನ್ನೂ ಏನೇನೋ ಆಗ್ತಾ ಇದೆ ಬುದ್ದಿ. ಜನ ಎಲ್ಲಾ ಮುಖಕ್ಕೆ ಬಟ್ಟೆ ಸುತ್ಕೊಂಡೇ ಓಡಾಡ್ತಾರೆ. ಅದೇನೋ ಮಾಸ್ಕ್ ಅಂತೆ. ಅವು ತರತರಾವರಿ ಇವೆ. ಅದಲ್ದೆ ಬಡವ್ರು ಮುಖಕ್ಕೆ ಬಟ್ಟೆ ಸುತ್ತಿದ್ರೂ ಸುತ್ತಿದ್ರೇ. ಒಬ್ನಂತೂ ಹಸು ಬಾಯಿಗೆ ಚೀಲ ಕಟ್ಟೋ ಹಾಗೆ ಚೀಲಾನೇ ಮುಖಕ್ಕೆ ತಗಲಿಸ್ಕೊಂಡಿದ್ದ. ನಂಗೆ ಯಾರ್‍ದೂ ಗುರ್‍ತೇ ಸಿಗ್ತಿಲ್ಲ.'

‘ಅಯ್ಯೋ, ಹಾಗಾದ್ರೆ ನೀವೆಲ್ಲಾ ತಪ್ಪು ಜನ್ರನ್ನೇ ತರ್‍ತೀದೀರಾ? ಏನು ಕತೆ?'

‘ನನ್ನನ್ನೇನೂ ಕೇಳ್ಬೇಡಿ ಬುದ್ದಿ. ಗೊತ್ತಾಗ್ದೇ ಇದ್ರೆ ಬಾಚ್ಕೊಂಡು ಒಂದಷ್ಟು ಹೆಚ್ಚು ಜನರನ್ನೇ ತಂದಬಿಟ್ಟಿದ್ದೀನಿ. ಅದಕ್ಕೆ ಇಲ್ಲಿ ರಶ್.'

‘ಅಪ್ಪಾ, ಮಹರಾಯ. ಹಾಗೆಲ್ಲಾ ನಮ್ಮ ಕೆಲ್ಸದಲ್ಲಿ ತಪ್ಪು ಮಾಡೋ ಹಾಗಿಲ್ಲ. ಈಗ ತಪ್ಪಾಗಿ ಎಳ್ಕೊಂಡು ಬಂದವ್ರನ್ನ ವಾಪಸ್ಸು ಕಳ್ಸಕ್ಕಾಗತ್ತಾ?'

‘ಅಯ್ಯೋ, ಬುದ್ಧಿ. ಸಾಯೋ ರೋಗಿಗೂ, ಸತ್ತ ಹೆಣಕ್ಕೂ ಮುಖ ಇರ್ಲಿ, ಒಂದಿಂಚು ದೇಹನೂ ಕಾಣಿಸ್ದೇ ಇರೋ ಹಾಗೆ ಇಡೀ ದೇಹಕ್ಕೆ ಗೌನ್ ಹಾಕಿದ್ರೆ ನಾನೇನು ಮಾಡ್ಲಿ?’

‘ಹುಂ, ನೀನು ಹೇಳೋದು ಸರಿ. ಮನೇವ್ರಿಗೂ ಗೊತ್ತಾಗೋದು ಬೇಡ್ವಾ?’

‘ಹೌದು. ಮನೇವ್ರಿಗೂ ಗೊತ್ತಾಗ್ದೇ ಯರ್ದ್ದೋ ಹೆಣ ನೋಡಿ ತಮ್ಮವ್ರದ್ದು ಅಂತ ಅತ್ಕೊಂಡು ಬರ್ತ್ತಾರೆ. ಹೊತ್ಕೊಂಡು ಹೋಗ್ತಾರೆ. ಭೂಲೋಕವೆಲ್ಲಾ ಅಯೋಮಯವಾಗಿದೆ ಬುದ್ದಿ, ನೋಡಕ್ಕಾಗಲ್ಲ’

‘ಅದ್ಸರಿ, ಇಷ್ಟೆಲ್ಲಾ ಆದ್ರೂ, ಸರ್ಕಾರದವ್ರು ಜನಗಳ ರೋಗ ವಾಸಿ ಮಾಡೋಕ್ಕೆ ಏನೂ ಮಾಡ್ಲಿಲ್ವಾ?’

‘ಮಾಡ್ದೇ ಏನು? ಆದ್ರೆ, ಅದಕ್ಕೆ ಏನೂ ಔಷಧ ಇಲ್ವಂತೆ. ಎಲ್ಲಾ ದೇಶ್ದವ್ರೂ ಔಷಧ ಹುಡುಕ್ತಾ ಇದ್ದಾರೆ. ಭಾರತದಲ್ಲಿ ಆಯುರ್ವೇದದಿಂದ ಹಿಡಿದು ಅಲೋಪತಿವರೆಗೂ ಏನೇನೋ ಔಷಧ ಮಾಡ್ತಾ ಇದ್ದಾರೆ. ರೋಗ ಬರ್ದೇ ಇರ್ಲಿ ಅಂತ ಕಷಾಯ, ಬಿಸಿ ನೀರು ಕುಡೀತಾ ಇದಾರೆ. ಜೊತೆಗೆ ಮೂಗಿನಿಂದ ಔಷಧ ಹಾಕಿದ ಹಬೆ ತೊಗೋತಾ ಇದ್ದಾರೆ. ಒಂದೇ ಎರಡೇ. ಇವತ್ತು ಹೀಗೆ ಮಾಡಿ ಅಂತಾರೆ. ನಾಳೆ ಬೇರೇನೋ ಹೇಳ್ತಾರೆ.’

‘ಓಹೋ ಹಾಗಾ ಸಮಾಚಾರ? ಜನಗಳಿಗೂ ಗೊಂದಲ ಆಗಿ ಹೋಗಿದೆ ಅಂತ ಅನ್ಸತ್ತೆ.’

‘ಓ ಗೊಂದಲವೋ, ಗದ್ದಲವೋ? ಕೋಲಾಹಲವೇ ಆಗಿದೆ. ದೊಡ್ಡವ್ರು ಮನೇ ಇಂದಾನೇ ಕೆಲ್ಸವಂತೆ. ಮಕ್ಕಳು ಶಾಲೆಗೆ ಹೋಗ್ದೆ ಮನೆಯಲ್ಲೇ ಕೂತಿವೆ. ಜೀವ ಮುಖ್ಯ. ಜೀವ ಇದ್ದರೆ ಜೀವನ ಅಂತ ಎಲ್ಲಾ ಹೇಳ್ತಾ ಇದ್ದಾರೆ.’

‘ಓ ಹಾಗಾದ್ರೆ ಮಕ್ಳು ಪಾಠ ಕಲಿಯೋದು ಹೇಗೆ?”

‘ಅದೇನೂ ನಿಂತಿಲ್ಲ. ಎಲ್ಲಾ ಮಕ್ಳು ಮೊಬೈಲ್ ಫೋನ್‌ನಲ್ಲಿ, ಕಂಪ್ಯೂರ್ನಲ್ಲೇ ಮನೆಯಿಂದಲೇ ಪಾಠ ಕಲೀತಾರಂತೆ.”

‘ಛೆ, ಛೇ. ಪಾಠ ಏನೋ ಕಲೀಬೋದು. ಮಕ್ಕಳು ಆಟ ಆಡೋದು ಬೇಡ್ವಾ?”

“ನೀವು ಮಕ್ಕಳ ಆಟಕ್ಕೆ ಹೋದ್ರಿ. ಸದಾ ಕಾಲ ಗಂಡ ಮಕ್ಳು ಮನೇಲಿದ್ದು ಮನೆ ಹೆಂಗಸಿನ ಪಾಡು ಹೇಳೊದೇ ಬೇಡ. ರಂಪಾಟ ಆಗ್ತಾ ಇದೆ. ಇದೇ ವಿಷ್ಯಕ್ಕೆ ಗಂಡ ಹೆಂಡತೀರ ಮಧ್ಯೆ ಜಗಳ ಆಗಿ ಡೈವೋರ್ಸ್ ತಂಕ ಮುಟ್ಟಿದೆಯಂತೆ”

“ಹಾಗಾದ್ರೆ ಈ ಸಂಕಟಕ್ಕೆಲ್ಲಾ ತ್ರಿಮೂರ್ತಿಗಳೇ ಪರಿಹಾರ ಕೊಡ್ಬೇಕು. ಭೂಲೋಕದ ಜನ ಎಲ್ಲಾ ಒಟ್ಗೆ ಮೊರೆ ಇಟ್ರೆ ಏನಾದ್ರೂ ಆಗ್ಬೋಹ್ದು”

“ಹೌದು ಹಂಗಾದ್ರೆ ನಂಗೂ ಸ್ವಲ್ಪ ತಲೆ ಬಿಸಿ ಕಡ್ಮೆ ಆಗತ್ತೆ.”

“ನಿಂಗೊಬ್ನಿಗೇ ಏನು? ನಂಗೂ ಸ್ವಲ್ಪ ಆರಾಮ ಸಿಗತ್ತೆ ಚಿತ್ರ”

“ಹೌದಲ್ವಾ, ಬುದ್ದಿ. ಭೂಲೋಕದ ಜನ್ರು ಆಗ್ಲೇ ದೇವರಿಗೆ ಮೊರೆ ಹೋಗರ್ತಾರೆ. ನಾವಿಬ್ರೂ ಸೀದಾ ಹೋಗಿ, ನೇರವಾಗಿ ಆ ದೇವರಗಳ್ನೇ ಭೇಟಿ ಮಾಡಿ ಬೇಡಿಕೊಂಡ್ರೆ ಹೆಂಗೆ?’

“ಅಬ್ಬಾ! ಏನು ಕಾಲ ಬಂತು. ಯಮನೇ ಹೋಗಿ ಸಾವು ಸಾಕು ಅಂತ ತ್ರಿಮೂರ್ತಿಗಳನ್ನ ಬೇಡಿಕೊಳ್ಳೋದು ಅಂದ್ರೆ, ಲೋಕ ವ್ಯವಹಾರ ಸಂಪೂರ್ಣ ತಲೆಕೆಳಗಾದಂತೆ. ಹುಂ ಆದ್ರೂ ಪರ್ವಾಗಿಲ್ಲ ಬಾ ಹೋಗೋಣ. ಕಾಲಾಯ ತಸ್ಮೈ ನಮಃ”

ಕವನ - ಸಂಕ್ರಾಂತಿ ಸಡಗರ - ಆಗ - ಈಗ	ವೆಂಕಟೇಶ್ ಕೆ.ಆರ್ (ಮನು)

ಇದೋ ಬಂತು ವರ್ಷದ ಮೊದಲ ಪರ್ವ ಸಂಕ್ರಾಂತಿ
ವಾಸರಾಧಿಪತಿ ತನ್ನ ರಥದ ಪಥ ಬದಲಿಸುವ ಸಂಕ್ರಾಂತಿ
ಹೊಲ ಗದ್ದೆ ತೋಟಗಳಲ್ಲಿ ಮೂಡಿದೆ ಹಸಿರು ಕ್ರಾಂತಿ
ಇನ್ನಿಲ್ಲ ಸಮಯ ಜನರಿಗೆ ಪಡೆಯಲು ವಿಶ್ರಾಂತಿ

ಹೀಗಿತ್ತು ಒಂದು ಕಾಲ ಸಂಭ್ರಮ ಸಡಗರದ ಕಾಲ
ಕಬ್ಬು ಕಿತ್ತಳೆ ಎಳಚಿ ಬಾಳೆ ತುಂಬಿರುತ್ತಿತ್ತು ಚೀಲದಲ್ಲೆಲ್ಲಾ
ಮನೆಯಲ್ಲಿಯೇ ತಯಾರಾಗುತ್ತಿತ್ತು ವಿವಿಧ ಬಣ್ಣಗಳ ಸಕ್ಕರೆ ಅಚ್ಚು
ಅಬ್ಬಾ! ಆ ಪ್ರಾಣಿ ಪಕ್ಷಿಗಳ ಆಕಾರಗಳು ಅದೆಷ್ಟು ಅಚ್ಚು ಮೆಚ್ಚು

ಮನೆಗಳಿಂದ ಹೊರಸೂಸುತ್ತಿತ್ತು ಖಾರಾ ಸಿಹಿ ಪೊಂಗಲ್ ಗಳ ಘಮಘಮ
ಮಧ್ಯಾಹ್ನವೇ ಶುರುವಾಗುತ್ತಿತ್ತು ಎಳ್ಳು ಬೀರುವ ಸಂಭ್ರಮ
ಬಣ್ಣಬಣ್ಣದ ಡಬ್ಬಿಗಳಿಗೆ ಎಳ್ಳು ಬೆಲ್ಲ ಸಕ್ಕರೆ ಹಾಕುವ ತಯಾರಿ
ಹೊಸ ಉಡುಪು ಧರಿಸಿ ಚೀಲ ಹಿಡಿದು ಹೊರಡುತ್ತಿತ್ತು ಸವಾರಿ

ಆದರೆ ಹಿಂದಿನಂತಿಲ್ಲ ಈಗ ಆ ಸಂಭ್ರಮ ಸಡಗರ
ಎಳ್ಳು ಬೆಲ್ಲ ಸಕ್ಕರೆ ಅಚ್ಚು ಎಲ್ಲದಕ್ಕೂ ಅಂಗಡಿಗಳೇ ಆಧಾರ
ಕ್ಷೀಣಿಸುತ್ತಿದೆ ಜನರ ಉತ್ಸಾಹ, ಮನೆ ಮನೆಗಳ ಭೇಟಿ
ಬದಲಾಗುತ್ತಿವೆ ಜನರು ಹಬ್ಬ ಆಚರಿಸುವ ಧಾಟಿ

ಲೇಖನ - ಆ ಕ್ಷಣವನ್ನು ದಾಟಿಸಬೇಕಿತ್ತು	ಶ್ರೀಮತಿ ರತ್ನಾ ಮೂರ್ತಿ

ಅಂದು ಶಾಲೆಯಲ್ಲಿ ಬೆಳಗಿನ ಕಿರು ವಿರಾಮ ಮುಗಿಸಿ ಗಂಟೆ ಹೊಡೆದ ತಕ್ಷಣ ಮುಂದಿನ ತರಗತಿಗೆ ಹೋದೆ.

ಹಿಂದಿನಿಂದಲೇ ಮಕ್ಕಳು ಕಲರವದೊಂದಿಗೆ ಒಳಪ್ರವೇಶಿಸಿ ತಮ್ಮ ತಮ್ಮ ಜಾಗ ಸೇರಿ ಒಕ್ಕೊರಲಿನಿಂದ ನಮಸ್ಕಾರ ಹೇಳಿ ಕುಳಿತರು.
ಮಕ್ಕಳ ಹಾಜರಿ ತೆಗೆದುಕೊಂಡು ಕುರ್ಚಿಯಿಂದೆದ್ದು ಬೋರ್ಡಿನ ಬಳಿಗೆ ಹೋಗುವಷ್ಟರಲ್ಲಿ. ಅಯ್ಯೋ ತಡೀಲಾರೆ ಎಂದು ಇಡೀ ತರಗತಿಯೇ ಬೆಚ್ಚಿ, ಪ್ರತಿಧ್ವನಿಸುವಂತೆ ಯಾರೋ ಅತ್ಯಂತ ವಿಕಾರವಾಗಿ, ಕೇಳಿದವರ ರಕ್ತ ಭೀತಿಯಿಂದ ಹೆಪ್ಪುಗಟ್ಟುವಂತೆ ಕಿಟ್ಟನೆ ಕಿರುಚಿದರು.

ಮಕ್ಕಳೂ ಕೆಲವರು ಏನೆಂದು ಅರಿಯದೆ ತಟ್ಟನೆ Reflex action ಎನ್ನವಂತೆ ತಾವೂ ಚೀರತೊಡಗಿದರು. ಒಂದು ಕ್ಷಣ ನನ್ನೆದೆಯೂ ದಿಗಿಲಿನಿಂದ ನಡುಗಿಬಿಟ್ಟದ್ದು ನಿಜ.
ಯಾರೆಂದು ಕಣ್ಣಾಡಿಸಿದರೆ ದೀಪ್ತಿ ಹೊಟ್ಟೆ ಹಿಡಿದುಕೊಂಡು ಅಳುತ್ತಾ ಚೀರುತ್ತಾ ವಿಲವಿಲನೆ ಒದ್ದಾಡತೊಡಗಿದ್ದಳು. ತಟ್ಟನೆ ಅವಳ ಬಳಿಗೆ ಧಾವಿಸಿ, ಯಾಕೆ ಪುಟ್ಟಿ ಏನಾಗ್ತಿದೆ ಗಾಬರಿಯಿಂದಲೇ ಕೇಳಿದೆ.
ಹೊಟ್ಟೆ ನೋವು ಟೀಚರ್. ತಡ್ಕಳೋಕ್ಕಾಗ್ತಾಯಿಲ್ಲ. ಏನಾದ್ರೂ ಮಾಡಿ ಟೀಚರ್ ಎಂದು ಬೇಡಿಕೊಳ್ಳ ತೊಡಗಿದಳು.

ಎಂಟು ಹತ್ತುದಿನಗಳಿಂದ ದೀಪ್ತಿ ಶಾಲೆಗೆ ಬಂದಿರಲಿಲ್ಲ ಎಂಬುದು ಅರಿವಿಗೆ ಬಂದಿತು

ತಕ್ಷಣ ಅವಳನ್ನು ಅಲ್ಲೇ ಬೆಂಚಿನ ಮೇಲೆ ಮಲಗಿಸಿ ಮೃದುವಾಗಿ ಕೇಳಿದೆ,
ಯಾಕೆ ಪುಟ್ಟಿ? ಏನಾಯ್ತು? ಎಂಟ್ಹತ್ತು ದಿನದಿಂದ ಸ್ಕೂಲ್ಗೂ ಬಂದಿಲ್ವಲ್ಲಾ

ತುಂಬಾ ಹೊಟ್ಟೆ ನೋವಾಗಿ ಆಸ್ಪತ್ರೆಗೆ ಅಡ್ಮಿಟ್ ಆಗಿದ್ದೆ ಟೀಚರ್. ನಿನ್ನೆ ಸಂಜೆ ಡಿಸ್ಚಾರ್ಜ್ ಆಗಿ ಮನೆಗೆ ಬಂದೆ ಎಂದಳು

ಏನು!? ನಿನ್ನೆ ಸಂಜೆ ಡಿಸ್ಚಾರ್ಜ್ ಆಗಿ, ಇವತ್ತು ಬೆಳಿಗ್ಗೆನೇ ಸ್ಕೂಲಿಗೆ ಬಂದಿದೀಯ ದೀಪ್ತಿ?!! ಮನೆಲೇ ನಾಲ್ಕುದಿನ ಇದ್ದು ರೆಸ್ಟ್ ತಗೊಳ್ಬಾರ್ದಾಗಿತ್ತಾ? ಪೋರ್ಷನ್ ಎಲ್ಲ ಮುಗಿದಿದೆ ಬರೀ ರಿವಿಷನ್ ಅಲ್ವಾ? ಸ್ವಲ್ಪ ಸಿಟ್ಟಿನಿಂದಲೇ ಪ್ರಶ್ನಿಸಿದೆ.

ನಂಗೆ ಇನ್ನೂ ತುಂಬಾ ಸುಸ್ತಿದೆ ಅಮ್ಮಾ.. ಸ್ಕೂಲ್ಗೆ ಹೋಗೋಕಾಗುಲ್ಲ ಅಂತ ಎಷ್ಟು ಬೇಡಿಕೊಂಡ್ರೂ ನಮ್ಮಮ್ಮ ಬೈದು ಬಲವಂತವಾಗಿ ಕಳಿಸಿದ್ರು ಮಿಸ್. ನಂಗೆ ಇನ್ನೂ ಹೊಟ್ಟೆ ನೋಯ್ತಾನೇ ಇದೆ ಎಂದು ಮತ್ತೂ ಜೋರಾಗಿ ಅಳತೊಡಗಿದಳು.

ನನಗೂ ಒಂದು ಕ್ಷಣ ದಿಕ್ಕು ತೋಚದಾಯ್ತು. ಅವಳಮ್ಮನ ಮೇಲೆ ಅಸಾಧ್ಯ ಕೋಪವೂ ಬಂದಿತು.

ನಾನು ಕೆಲಸ ಮಾಡುತ್ತಿದ್ದುದು ಬಹಳ ಪ್ರಖ್ಯಾತವಾದ ಪ್ರತಿಷ್ಠಿತ ಶಾಲೆಯಲ್ಲಿ.
ಸಾಕಷ್ಟು ಸಂಖ್ಯೆಯ ಹಲವು ಕೋಟ್ಯಾಧಿಪತಿಗಳ ಮಕ್ಕಳಲ್ಲದೆ ಕೆಲವು ಸಿನಿಮಾ ತಾರೆಯರ ಮಕ್ಕಳು, ರಾಜಕೀಯ ನೇತಾರರ, ಮಂತ್ರಿಗಳ ಮಕ್ಕಳು, ಒಬ್ಬ ರಾಜ್ಯಪಾಲರ ಮೊಮ್ಮಗಳು, ಐ ಎ ಎಸ್, ಐಪಿಎಸ್ ಅಧಿಕಾರಿಗಳ ಮಕ್ಕಳು, ಪೂರ್ವೋತ್ತರ ರಾಜ್ಯಗಳ ಮಂತ್ರಿಗಳ, ರಾಜ್ಯಪಾಲ ಮಕ್ಕಳೂ ಬರುತ್ತಿದ್ದ ಶಾಲೆ. ಇಂಥಹ ಪ್ರತಿಷ್ಠಿತರ ಮಕ್ಕಳಿಗಾಗಿಯೇ ಒಂದು ಸುಸಜ್ಜಿತ ಐಷಾರಾಮೀ ಬೋರ್ಡಿಂಗ್ ಇದ್ದು ಪಕ್ಕದಲ್ಲಿಯೇ ೨೪ ಗಂಟೆಯೂ ಒಂದಿಬ್ಬರು ನರ್ಸ್ಗಳಿರುವ ಮತ್ತು ವೈದ್ಯರು ನಿಯಮಿತವಾಗಿ ಆರೋಗ್ಯ ತಪಾಸಣೆಗೆ ಬರುವ ಒಂದು ಪುಟ್ಟ ಆಸ್ಪತ್ರೆಯೂ ಇತ್ತು.

ಶಾಲೆಯ ಯಾವುದೇ ಮಕ್ಕಳಿಗೆ ಅಲ್ಲದೆ ಸಿಬ್ಬಂದಿಗೂ ಅಕಸ್ಮಾತ್ ಏನಾದರು ಆದರೂ ಅಲ್ಲಿಯೇ ತಕ್ಷಣದ ಚಿಕಿತ್ಸೆ ದೊರೆಯುತ್ತಿತ್ತು.

ಹಾಗಾಗಿ ಹೊಟ್ಟೆ ನೋವಿನಿಂದ ವಿಲವಿಲ ಒದ್ದಾಡುತ್ತಾ ಅಳುತ್ತಿದ್ದ ದೀಪ್ತಿಯನ್ನು ನೋಡಿ ಭಯವಾಗಿ ನರ್ಸಿಂಗ್ ರೂಮ್ಗೆ ಹೋಗಿ ತೋರಿಸ್ಕೊಂಡು ಬರೋಣ ಬಾ ಎಂದು ಅವಸರಿಸಿದೆ.

ಅವಳು ಆ ಮಾತಿಗೆ ತಕ್ಷಣ ಬೇಡ ಟೀಚರ್ ಏನೂ ಬೇಡ. ನಾನು ಸಾಯ್ಬೇಕು ಟೀಚರ್. ನಾನು ಸತ್ತು ಹೋಗ್ಬೇಕು. ನಂಗೆ ಬದುಕೋಕೆ ಇಷ್ಟವಿಲ್ಲ. ಸಾಕಾಗಿ ಹೋಗಿದೆ ಎಂದು ಹೃದಯವಿದ್ರಾವಕವಾಗಿ ಅಳತೊಡಗಿದಳು.
ಅವಳ ಮಾತು ಬಾಲಿಶ ಎಂದುಕೊಂಡು ಕೆಲವು ಮಕ್ಕಳು ಕಿಸಕ್ಕನೆ ನಕ್ಕರೆ ಮತ್ತೆ ಕೆಲವರು, ಇದ್ಯಾಕೆ ಟೀಚರ್ ಇವಳು ಹೀಗೆ ಮಾತಾಡ್ತಾಳೆ ಎಂದು ಸೋಜಿಗದಿಂದ ಕೇಳಿದರು.

ಐದನೆಯ ತರಗತಿಯ ಬಾಲಕಿಯ ಬಾಯಲ್ಲಿ ಸಾಯುವ ಮಾತು???!!! ನಾನು ಬೆಚ್ಚಿ ಬಿದ್ದೆ.
ಕೆಲವೇ ದಿನಗಳ ಹಿಂದೆ ನಾಲ್ಕನೆಯ ತರಗತಿಯ ಒಬ್ಬ ಪುಟ್ಟ ಬಾಲಕ ಕ್ಷುಲ್ಲಕ ಕಾರಣಕ್ಕಾಗಿ ಆತ್ಮಹತ್ಯೆ ಮಾಡಿಕೊಂಡ ವಿಚಾರ ಓದಿ ತತ್ತರಿಸಿ ಹೋಗಿದ್ದೆ. ಆಗೀಗ ಹದಿಹರೆಯದ ಮಕ್ಕಳು, ಕೆಲವೊಮ್ಮೆ ಕಿಶೋರ ವಯಸ್ಸಿನವರೂ ಆತ್ಮಹತ್ಯೆಗೆ ಶರಣಾಗುವ ಸುದ್ದಿಗಳನ್ನು ಅರಗಿಸಿಕೊಳ್ಳಲಾಗುವುದೇ? ಇನ್ನೂ ಸರಿಯಾಗಿ ಕಣ್ಣೂ ಬಿಡದ, ಜಗತ್ತನ್ನು ಸರಿಯಾಗಿ ನೋಡದ, ಬದುಕು ಅರಳಬೇಕಾದ ಎಳೆಯ ಮಕ್ಕಳು ಸಾಯುವ ನಿರ್ಧಾರವನ್ನೇಕೆ ಮಾಡುತ್ತಾರೆ? ಅದಕ್ಕೆ ಸಮಾಜ, ತಂದೆತಾಯಿ, ಶಾಲೆ ಯಾರ್‍ಯಾರು ಎಷ್ಟೆಷ್ಟು ಹೊಣೆ?

ಯಾಕೆ ಪುಟ್ಟಿ ಹೀಗ್ಮಾತಾಡ್ತೀಯ? ಸಾಯೋಕೇನಾಗಿದೆ ನಿನಗೆ?. ಒಂದು ವಾರ ಮನೆಲಿ ರೆಸ್ಟ್ ತಗೊ. ಸರಿ ಹೋಗುತ್ತೆ. ನಾ ನಿಮ್ಮಮ್ಮಂಗೆ ಹೇಳಿ ಕಳಿಸ್ತೀನಿ. ಬಂದು ಕರಕೊಂಡು ಹೋಗ್ತಾರೆ. ಒಂದು ಹೊಟ್ಟೆ ನೋವಿಗೆಲ್ಲ ಯಾರಾದ್ರೂ ಸಾಯೋ ಮಾತಾಡ್ತಾರಾ ಪುಟ್ಟಿ? ಎಂದೆ ಸಂತೈಸುವಂತೆ.

ಅಯ್ಯಯ್ಯೋ! ನಿಮ್ಮ ದಮ್ಮಯ್ಯ. ನಮ್ಮಮ್ಮಂಗೆ ಹೇಳ್ಬೇಡಿ ಟೀಚರ್. ಹಂಗಿಸಿ ಹಂಗಿಸೀನೇ ನನ್ನ ಸಾಯಿಸ್ಬಿಡ್ತಾರೆ ಎಂದು ಕೈಕೈ ಹಿಡಿದು ಬೇಡಿಕೊಂಡಳು.

ಇದು ಸಾಧಾರಣ ಹೊಟ್ಟೆ ನೋವಿನ ಮಾತಲ್ಲ ಈಗ ಸುಮಾರು ಹೊತ್ತಿನಿಂದ ಇವಳು ಹೊಟ್ಟೆ ನೋವು ಎಂದೂ ಹೇಳಿಲ್ಲ ಎಂದು ಅರಿವಾದದ್ದೇ, ಪಕ್ಕದ ತರಗತಿಯಲ್ಲಿದ್ದ ನನ್ನ ಸಹೋದ್ಯೋಗಿಗೆ, ಚುಟುಕಾಗಿ ವಿಷಯ ತಿಳಿಸಿ, ಸ್ವಲ್ಪ ಹೊತ್ತು ನನ್ನ ತರಗತಿಯ ಮಕ್ಕಳನ್ನೂ ನೋಡಿಕೊಳ್ಳಬೇಕೆಂದು ವಿನಂತಿಸಿಕೊಂಡು, ದೀಪ್ತಿಯನ್ನು ತಕ್ಷಣ ಹೊರಗೆ ಕರೆದುಕೊಂಡು ಬಂದು

ಶಾಲೆಯ ವಿಶಾಲ ಅಂಗಳದ ದೂರದೊಂದು ಮರದ ಕೆಳಗಿನ ಕಲ್ಲು ಬೆಂಚಿನ ಮೇಲೆ ಕುಳ್ಳಿರಿಸಿಕೊಂಡು, ಮನೆಲೇನಾಯ್ತು ಹೇಳು. ಯಾಕೆ ಹೀಗೆ ಸಾಯೋ ಮಾತಾಡ್ತೀ ಎಂದು ರಮಿಸತೊಡಗಿದೆ.

ಹಾಗೆ ಕೇಳಿದ್ದೇ ಅವಳ ದುಃಖದ ಅಣೆಕಟ್ಟೊಡೆದು ಅಳು ಪ್ರವಾಹವಾಗಿ ನುಗ್ಗಿ ಬಂತು.

ಮಧ್ಯೆ ಮಧ್ಯೆ ಬಿಕ್ಕುತ್ತಲೇ, ಹೌದು ಟೀಚರ್ ನಾನು ಸಾಯ್ಲೇ ಬೇಕು. ನನ್ನಿಂದ ಅಮ್ಮ ಅಪ್ಪನಿಗೆ ಯಾರಿಗೂ ಪ್ರಯೋಜನವಿಲ್ಲ. ಈಗಾಗ್ಲೇ ಆಸ್ಪತ್ರೆ ಖರ್ಚೇ ಎಪ್ಪತ್ತೈದು ಸಾವಿರ ಆಯ್ತಂತೆ, ಇನ್ನು ಓದಿಸೋ ಖರ್ಚು, ಅಮೇಲೆ ಮದುವೆ ಮಾಡೋ ಖರ್ಚು ಎಷ್ಟೆಷ್ಟೋ ಲಕ್ಷ ರೂಪಾಯಿ ನಮ್ಮಪ್ಪ ಖರ್ಚುಮಾಡ್ಬೇಕಂತೆ. ಅವರಿಗೆ ನಾನೊಂದು ಭಾರ ಅಲ್ವಾ ಟೀಚರ್. ಇಂಥಾ ಮಾತೆಲ್ಲಾ ದಿನಾ ದಿನಾ ಕೇಳೊಕ್ಕಿಂತಾ ಸತ್ತು ಹೋಗೋದೇ ವಾಸಿ ಅಲ್ವಾ ಟೀಚರ್? ಎಂದಳು

ಎಂತಹ ತಂದೆ ತಾಯಿಗಳು?! ಮೃದು ಮನಸ್ಸಿನ ಮಕ್ಕಳ ಮುಂದೆ ಇಂತಹ ಮಾತಾಡುವುದೇ ಎಂದು ತಿರಸ್ಕಾರ ಮೂಡಿತು.
ಆದರೂ ಹಾಗಲ್ಲ ಪುಟ್ಟಿ. ತಂದೆ ತಾಯಿಗಳಿಗೆ ಮಕ್ಕಳಂದ್ರೆ ಪ್ರಾಣ. ಏನೋ ಒಂದ್ಸಲ ಹಾಗೆ ಮಾತಾಡಿದ್ರು ಅಂದ ತಕ್ಷಣ ಅದನ್ನು ಇಷ್ಟು ಸೀರಿಯಸ್ಸಾಗಿ ತಗೋತಾರ ದೀಪ್ತಿ? ಹುಷಾರಿಲ್ದೆ ನೀನು ಹತ್ತು ದಿನ ಆಸ್ಪತ್ರೆಲಿದ್ದೆ ನೋಡು. ಅದಕ್ಕೆ ಮೈಯಲ್ಲಿ ಏನೂ ಶಕ್ತಿಯಿಲ್ದೆ ನಿನ್ ಮನಸ್ಸೂ ವೀಕಾಗಿದೆ. 'ವೀಕ್ ಮೈಂಡ್ ಇನ್ ಎ ವೀಕ್ ಬಾಡಿ' ಅಂತ ಹೇಳ್ತಾರೆ ಕೇಳಿದೀಯಲ್ವಾ? ಸ್ವಲ್ಪ ಏನಾದ್ರೂ ತಿನ್ನು ಸುಸ್ತು ಕಡಿಮೆ ಆದರೆ ಮನಸ್ಸಿಗೂ ಶಕ್ತಿ ಬರುತ್ತೆ ಎಂದು ಹೇಳಿ ಹತ್ತಿರದಲ್ಲೇ ಕಂಡ ಒಬ್ಬ ಆಯಾಳಿಗೆ ಸ್ಟಾಫ್ ರೂಮಿನಲ್ಲಿ ನನ್ನ ಟೇಬಲ್ ಮೇಲಿಟ್ಟಿರುವ ಊಟದ ಡಬ್ಬಿ ತರಲು ಕಳಿಸಿದೆ.

ಬೇಡ ಟೀಚರ್. ನಂಗೇನೂ ಬೇಡ. ಸಾಯೋಳಿಗೆ ಊಟ ಯಾಕೆ? ನೀವೀಗ ಏನು ಹೇಳಿದರೂ, ಹೇಗೆ ತಡೆದರೂ ಮನೆಗೆ ಹೋದಮೇಲೇ ನಾನು ಸಾಯೋದೆ ನಿಜ. ನಾಳೆ ನೀವ್ಯಾರೂ ನನ್ನ ನೋಡೊಲ್ಲ. ಇಷ್ಟರ ಮೇಲೆ ನಾನು ಸತ್ರೇನು ಟೀಚರ್. ಇಬ್ಬರು ಅಕ್ಕ ಇದಾರಲ್ವಾ. ಒಬ್ಬ ಖರ್ಚಂತೂ ಅಪ್ಪನಿಗೆ ಕಡಿಮೆ ಆಗುತ್ತೆ. ನಾನು ಸಾಯೋದನ್ನ ನಿಮ್ಕೈಲಿ ತಪ್ಪಿಸೋಕಾಗೊಲ್ಲ ಟೀಚರ್
ಎಂದು ದೀಪ್ತಿ ನಿಶ್ಚಯವಾಗಿ ನುಡಿದಾಗ ನನಗೆ ನಿಜವಾಗಿಯೂ ಗಾಬರಿಯಾಯಿತು.
ಭಾವೋದ್ರೇಕದ ತುತ್ತ ತುದಿಯ ಸೂಕ್ಷ್ಮ ತಂತುವಿನಲ್ಲಿರುವ ಅವಳ ಮನಸ್ಸನ್ನು ಸಾವಿನ ಯೊಚನೆಯಿಂದ ತಪ್ಪಿಸೋದು ಹೇಗೆ? ಇಂತಹ ಕೇಸ್ಗಳನ್ನು ಪ್ರಿನ್ಸಿಪಾಲರ ಗಮನಕ್ಕೆ ತರೋದೆ ವಾಸಿ ಅಂದುಕೊಂಡು ಹೇಗೋ ಪುಸಲಾಯಿಸಿ ಅವಳನ್ನು ಪ್ರಿನ್ಸಿಪಾಲರ ಬಳಿ ಕರೆದುಕೊಂಡು ಹೋಗಿ ಚುಟುಕಾಗಿ ವಿಷಯ ತಿಳಿಸಿದೆ.

ಆಕೆ ದೀಪ್ತಿಯನ್ನು ನೋಡಿ, You are so fair. So beautiful. Then why do you want die? ಎಂದಾಗ ನನಗೆ ಜಿಗುಪ್ಸೆ ಅಸಹ್ಯಗಳಿಂದ ಹಣೆ ಹಣೆ ಚಚ್ಚಿಕೊಳ್ಳುವಂತಾಯಿತು.

ಏನಿವರ ಮಾತಿನ ಅರ್ಥ?!! ಕಪ್ಪಗಿದ್ದವರು ಚೆಂದವಿಲ್ಲದವರು ಹಾಗಾದರೆ ಸಾಯಬಹುದು ಎಂಬುದು ಇವರ ಅಭಿಪ್ರಾಯವೇ.? ಎಂಬ ಯೋಚನೆ ಸುಳಿಯದಿರುತ್ತದೆಯೇ. ಇವರಿಂದ ಈ ಸಮಸ್ಯೆಗೆ ಪರಿಹಾರ ಸಿಗದು ಎಂದು ಅರ್ಥವಾದದ್ದೇ. OK madam I will deal with her. ಎಂದು ಹೊರಗೆ ಕರೆದುಕೊಂಡು ಬಂದೆ.

ಮತ್ತೆ ಅದೇ ಮರದ ಬಳಿ ಬಂದು ಬಲವಂತವಾಗಿ ಅವಳಿಗೆ ನಾಲ್ಕು ತುತ್ತು ಮೊಸರನ್ನವನ್ನು ತಿನ್ನಿಸಿದೆ.

ಪ್ರಿನ್ಸಿ ಮ್ಯಾಡಂ ನಮ್ಮಮ್ಮಂಗೆ ಖಂಡಿತಾ ಫೋನ್ ಮಾಡಿರ್ತಾರೆ. ನನ್ನ ಗತಿ ಏನು ಟೀಚರ್. ನೀವ್ಯಾಕೆ ನನ್ನನ್ನು ಅವರ ಬಳಿಗೆ ಕರಕೊಂಡು ಹೋದ್ರಿ? ಅಮ್ಮ ಬರೋದ್ರೊಳಗೆ ನಾನು ಸಾಯ್ಬೇಕು. ಇಲ್ದಿದ್ರೆ ಅವರು ಮಾತಿಂದ್ಲೇ ನನ್ನ ಸಾಯಿಸ್ಬಿಡ್ತಾರೆ ಎಂದು ಗಡಗಡ ನಡುಗುತ್ತಾ ರೋಧಿಸತೊಡಗಿದಳು.

ನಾನೆಷ್ಟೆಷ್ಟು ರಮಿಸಿದರೂ ಸಾಯುವ ಅವಳ ನಿರ್ಧಾರ ಅಷ್ಟಷ್ಟು ಗಟ್ಟಿಯಾಗುತ್ತಿತ್ತು.
ನನ್ನ ಪುಸಲಾವಣೆ ನಡೆದಿರುವಂತೆಯೇ ಆ ಮಹಾತಾಯಿ ಆಗಮಿಸಿ,
ಆಯ್ತಾ? ತೃಪ್ತಿಯಾಯ್ತಾ? ಚೆನ್ನಾಗಿ ನಾಟಕ ಆಡ್ತಿದೀಯ. ಹತ್ತು ದಿನ ಆಸ್ಪತ್ರೆಗೆ ಸೇರ್ಸಿ ನೋಡ್ಕೊಳ್ಳಿಲ್ವಾ? ಇನ್ನೇನು ರೋಗ ನಿಂಗೆ? ಸಾಯ್ತೀಯಾ? ಸಾಯಿ ನೋಡ್ತೀನಿ. ಇವ್ಳ ಸುಮ್ನೆ ನಾಟಕ ಆಡ್ತಿದಾಳೆ. ಅಯ್ಯೋ ಟೀಚರ್ ನೀವ್ಯಾಕವ್ಳ ಮಾತನ್ನು ಅಷ್ಟು ಸೀರಿಯಸ್ಸಾಗಿ ತಗೊಂಡಿದೀರಿ ಎಂದು ಹಂಗಿಸತೊಡಗಿದರು.

ನಾನು ಹೇಳ್ಲಿಲ್ವಾ ಟೀಚರ್ ಅಮ್ಮನ್ನ ಕರೆಸಬೇಡಿ ಅಂತ. ಈಗ ನೋಡಿ ಹೇಗ್ಮಾತಾಡ್ತಾರೆ. ಹೇಳಿ ನಾನ್ಯಾಕೆ ಬದುಕ್ಬೇಕು. ನಾನು ಸತ್ರೇನೇ ಇವರಿಗೆಲ್ಲ ಖುಷಿ ಎಂದು ಭಯವಿಹ್ವಲಳಾಗಿ ಅಳುತ್ತಾ ನಡುಗತೊಡಗಿದಳು.

ನನಗೆ ಮೈಯೆಲ್ಲ ಉರಿದು ಹೋಯಿತು.
ನೀವೇನು ತಾಯಿನಾ. ಹತ್ತು ದಿನ ಆಸ್ಪತ್ರೆಲಿದ್ದೋಳು. ಮನೆಲಿ ನಾಲ್ಕು ದಿನ ರೆಸ್ಟ್ ತಗೋಳೋಕೆ ಬಿಡ್ದೆ ಬಲವಂತವಾಗಿ ಸ್ಕೂಲಿಗೆ ಕಳಿಸಿದೀರಲ್ಲ. ಪೋರ್ಷನ್ ಎಲ್ಲ ಮುಗಿದಿದೆ. ಸ್ಕೂಲಿಗೆ ಕಳಿಸದಿದ್ದರೆ ಏನು ಸೂರೆ ಹೋಗ್ತಿದ್ದಿದ್ದು. ಅವಳ ಮನಸ್ಸೀಗ ತುಂಬಾ ವೀಕ್ ಆಗಿದೆ. ನೀವೆಲ್ಲ ಮಲಗಿದ್ದಾಗ ಅವಳೇನಾದ್ರೂ ಮಾಡ್ಕೊಂಡ್ರೆ ಬದುಕಿಸ್ಕೊಳೋಕೆ ನಿಮಗೆ ಸಾಧ್ಯನಾ? ನಿಮಗೆ ದುಡ್ಡು ಮುಖ್ಯನಾ? ಮಗಳು ಮುಖ್ಯನಾ? ತಾಯಂದಿರು ನಿಮ್ಮ ಹಾಗೂ ಇರ್ತಾರಾ? ಎಂದು ಅವರನ್ನು ಹಿಗ್ಗಾ ಮುಗ್ಗಾ ಬೈದು ಕಳಿಸಿಬಿಟ್ಟೆ.

ಅವರಮ್ಮ ಬಂದು ಹಂಗಿಸಿ ಹೋದ ಮೇಲಂತೂ ಸಾಯುವ ಅವಳ ನಿಶ್ಚಯ ಇನ್ನೂ ಗಟ್ಟಿಯಾಗಿಬಿಟ್ಟಿತು. ಅವಳ ಭೀಕರ ನಿರ್ಧಾರದ ಘೋರ ಕ್ಷಣದಿಂದ ಅವಳನ್ನು ದಾಟಿಸಿ

ಅವಳಲ್ಲಿ ಆತ್ಮವಿಶ್ವಾಸ ತುಂಬಿ ಜೀವನ್ಮುಖಿಯಾಗಿ ಮಾಡಲೇಬೇಕಿತ್ತು. ಈಗ ನಾನೇನು ಮಾಡಲಿ. ಸಾಯುವ ಯೋಚನೆಯಿಂದ ಅವಳನ್ನು ಹೇಗೆ ವಿಮುಖಳನ್ನಾಗಿ ಮಾಡಲಿ.

ಅವಳನ್ನಪ್ಪಿಕೊಂಡು ಸಂತೈಸುತ್ತಾ ಯೋಚಿಸುತ್ತಲೇ ಕಡೆಗೆ ಒಂದೇ ದಾರಿ ಎಂದು ನಿರ್ಧರಿಸಿ ನಾನು ಹಿಂದೆಂದೂ ಮಾಡಿರದ, ನನಗೆ ನಂಬಿಕೆಯೂ ಇರದಿದ್ದ ಒಂದು ಕೆಲಸ ಮಾಡಲು ನಿರ್ಧರಿಸಿ,
ದೀಪ್ತಿ ನಿನಗೆ ನನ್ನನ್ನು ಕಂಡರೆ ತುಂಬಾ ಇಷ್ಟ ಅಲ್ವಾ ಅಂತ ಕೇಳಿದೆ.
ಹೌದು ಟೀಚರ್. you are my most favourite teacher. I love you more than my mother. More than anybody else in this world ಎಂದಳು.

ಗೆದ್ದೆ ಎಂದು ಕೊಳ್ಳುತ್ತಾ, ನಿಂಗೆ ನಿಜವಾಗ್ಲೂ ನನ್ಮೇಲೆ ಪ್ರೀತಿ ಇದ್ದರೆ ನಂಗೊಂದು ಪ್ರಾಮಿಸ್ ಮಾಡ್ತೀಯ ಪುಟ್ಟಿ ಎಂದು ಅಂಗೈ ನೀಡಿದೆ. ಅನುಮಾನದಿಂದ ತಬ್ಬಿಬ್ಬಾದರೂ ಒಲ್ಲದ ಮನಸ್ಸಿನಿಂದಲೇ ನನ್ನ ಅಂಗೈ ಮೇಲೆ ತನ್ನ ಅಂಗೈ ಇಟ್ಟು ಪ್ರಾಮಿಸ್ ಟೀಚರ್ ಎಂದಳು. ಈ ಸಮಯದಲ್ಲಿ ನಾನು ಏನು ಕೇಳಬಹುದೆಂಬ ವಾಸನೆ ಸಹಜವಾಗಿಯೇ ಅವಳಿಗೆ ಹೊಡೆಯದಿರುತ್ತದೆಯೇ!

ಹಾಗಾದ್ರೆ ನನ್ನ ತಲೆ ಮೇಲೆ ಕೈಯಿಟ್ಟು ನನ್ಮೇಲೆ ಆಣೆ ಮಾಡಿ ಹೇಳು. ನೀನಿನ್ನೆಂದೂ ಸಾಯೋ ಯೋಚನೆ ಸಾಯೊ ಮಾತಾಡೊಲ್ಲ ಅಂತ ಎಂದು ಹೇಳಿದೆ.

ಆಗ ನೋಡಬೇಕಿತ್ತು! ದೀಪ್ತಿಯ ಮುಖದ ಮೇಲೆ ಭಾವನೆಗಳ ಯಕ್ಷಗಾನದ ಕುಣಿತ. ಅದರಲ್ಲಿ ಅಸಮಾಧಾನವೇ ಮೇಲುಗೈ ಪಡೆದಿದ್ದುದೂ ಹೊಡೆದು ತೋರುತ್ತಿತ್ತು

ಬಹಳ ನಿರಾಶೆ ಹಾಗೂ ನೋವಿನಿಂದಲೇ ಆಯ್ತು ಟೀಚರ್ ನಾನಿನ್ಯಾವತ್ತೂ ಸಾಯೋ ಮಾತಾಡೊಲ್ಲ. ಸಾಯೊ ಯೋಚನೆ ಮಾಡೊಲ್ಲ ನಿಮ್ಮಾಣೆಗೂ ಎಂದಳು.

ಭೀತ ಮನಸ್ಸು ಮೊದಲ ಬಾರಿಗೆ ಸ್ವಲ್ಪ ಹಗುರತೆ ಕಂಡಿತು. ಈ ರೀತಿ Emotional black mail ಮಾಡದೆ ಅವಳನ್ನು ಉಳಿಸಿಕೊಳ್ಳಲು ಸಾಧ್ಯವಿಲ್ಲ ಎಂದು ಅರ್ಥವಾಗಿದ್ದರಿಂದ ಈ ದಾರಿ ಹಿಡಿಯಬೇಕಾಗಿತ್ತು.

ಅವಳ ಇಷ್ಟದ ದೇವರು ಹನುಮಂತ ಎಂದು ತಿಳಿದುಕೊಂಡೆ. ಮಾರನೆ ದಿನ ಒಂದು ಸುಂದರ ಹನುಮಂತನ ಫೋಟೋ ಕೊಂಡುಕೊಂಡು ಹೋಗಿ ಕೊಟ್ಟೆ. ಹದಿನೈದು ದಿನಗಳ ಕಾಲ ಪ್ರತಿ ದಿನ ಬೆಳಿಗ್ಗೆ ರಾತ್ರಿ ಅವಳಿಗೆ ಫೋನ್ ಮಾಡಿ ಪ್ರೀತಿಯಿಂದ ಮಾತನಾಡಿಸುತ್ತಾ, ಜೋಕ್‌ಗಳನ್ನು ಹೇಳಿ ನಗಿಸುತ್ತಾ, ಅವಳನ್ನು ಬದುಕಿನ ಕಡೆಗೆ ತಿರುಗಿಸುವಲ್ಲಿ ಯಶಸ್ವಿಯಾದೆ.

ಈಗವಳು ಉನ್ನತ ವಿದ್ಯಾಭ್ಯಾಸ ಪಡೆದು ಮದುವೆಯಾಗಿ ಒಂದು ಮಗುವಿನ ತಾಯಾಗಿರುವ ಸುಖೀ ಸಂಸಾರಿ.

ಮುಂದೆ ಒಮ್ಮೆ ದೀಪ್ತಿ ಎದುರಿಗೆ ಕಂಡಾಗ ನನ್ನ ಮುಖ ಅರಳಿತು. ಆದರೆ ಅವಳು ಗುರುತು ಸಿಗದಂತೆ ನಟಿಸಿ ಮುಂದೆ ಹೋದದ್ದು ನೋಡಿ ನನ್ನ ಮೊಗದಲ್ಲೊಂದು ಕಿರುನಗೆ ಮೂಡಿತು.

ಕರ್ಮಣ್ಯೇ ವಾಧಿಕಾರಸ್ತೇ ಮಾಫಲೇಷು ಕದಾಚನ..... ಅಷ್ಟೇ ಅಲ್ಲವೇ? ಇರಲಿ ಬಿಡಿ. ಬೇಸರವೇನಿಲ್ಲ.

ಅವಳು ಸುಖವಾಗಿದ್ದಾಳಲ್ಲ. ಅಷ್ಟೇ ಸಾಕು.

ಲೇಖನ - ಹೀಗೊಂದು ಚಿಂತನೆ	ಗೋನವಾರ್ ಕಿಶನ್ ರಾವ್

"What is wonderful about great literature is that it transforms the man who reads it towards the condition of the man who wrote, and brings to birth in us also the creative impulse. ~E.M. Forster“

ಬೆಳಗಾಗೆದ್ದು ಕೈಯಲ್ಲಿ ಕಾಫಿ ಕಪ್ಪು ಹಿಡಿದು, ಅಂದಿನ ದಿನ ಪತ್ರಿಕೆ, ತಿರುವಿ ಹಾಕುತ್ತಿದ್ದೇವೆ ಎಂದು ಭಾವಿಸಿಕೊಳ್ಳಿ. ಪುಟ ತಿರುವುತ್ತ ಹೋಗುತ್ತೀದ್ದೀರಿ,ಅಲ್ಲೊಂದು ಕೊಲೆ,ಇಲ್ಲೊಂದು ಸಾವು,ಮಗದೊಂದು ಪುಟದಲ್ಲಿ ಅಪಘಾತ. ಎಲ್ಲದಕ್ಕೂ ನಿರ್ಲಿಪ್ತ ಭಾವ.ಪತ್ರಿಕೆ ಪಕ್ಕಕ್ಕಿಟ್ಟು ಮೊಬೈಲ್ ಕೈಗೆತ್ತಿಗೊಳ್ಳುವಿರಿ ಸಾಮಾಜಿಕ ಜಾಲತಾಣದಲ್ಲಿ ಒಂದು ಸಂದೇಶ. ಶ್ರೀ……….. ಯವರು ಇಂದು ಹೃದಯಾಘಾತದಿಂದ ನಿಧನರಾಗಿದ್ದಾರೆ.ಅನೇಕರ ಮರು ಸಂದೇಶಗಳು.ನೀವು ಸಹ ಒಂದು ಓಂ ಶಾಂತಿ ಎಂದು ಟಂಕಿಸಿ ಮುಂದೆ ಸಾಗುವಿರಿ.ಅಲ್ಲಿಯೂ ನಿರ್ಲಿಪ್ತ ಮನೋಭಾವ ! ಯೋಚಿಸಿ ನೋಡಿ. ಒಂದು ಸಾವಿನ ಸುದ್ದಿ ಮೂರು ವಿಧದ ಪರಿಣಾಮ ಬೀರುತ್ತದೆ ಅಲ್ಲವೆ ? ಸದರಿ ಶ್ರೀ ಯವರ ನಿಧನಕ್ಕೆ ನೇರ ಪರಿಣಾಮ ಹೊಂದಿದವರು ಅವರ ಹತ್ತಿರದ ದೂರದ ಸಂಬಂಧಿಕರು.ಎರಡನೆಯವರು ಆಪ್ತವಲಯ.ಅವರು ಸಾಧ್ಯವಾದರೆ, ದಹನ ಕಾರ್ಯದಲ್ಲಿ ಭಾಗಿಗಳಾಗುವರು. ಅನಾನುಕೂಲ, ಅನಾರೋಗ್ಯದಂತಹ ಬಲವಾದ ಕಾರಣಗಳಿದ್ದರೆ,ದೂರವಾಣಿಗಳ ಮುಖಾಂತರ ಸಂಪರ್ಕಿಸಿ ಸಂತಾಪ ಸೂಚಿಸುವರು.ಈ ಮೂರರನ್ನು ಮೀರಿದವರಿರುತ್ತಾರೆ.ಏನೂ, ಸಂಬಂಧವಿಲ್ಲದವರು. ಪ್ರಪಂಚದ ಒಳಿತು-ಕೆಡುಕುಗಳ ಗೋಜು ಅವರಿಗೆ ಬೇಕಿಲ್ಲ.ತಮ್ಮ ಪಾಡಿಗೆ ತಾವು ಒಂದು ಗುಡ್ ಮಾರ್ನಿಂಗ್, ಗುಡ್ ಇವನಿಂಗ್ ಸಂದೇಶ ಹಾಕುತ್ತ ಹೋಗುತ್ತಿರುತ್ತಾರೆ.ವಿಚಿತ್ರ ಅಲ್ಲವೇ ಯಾಕೆ ಹೀಗೆ ? ಶ್ರೀ ಯವರ ಹೃದಯಾಘಾತದಿಂದ ದಿಂದ ಅವರ ಸಂಬಂಧಿಕರಿಗೆ ಮಾತ್ರ ಕೆಟ್ಟ ಸುದ್ದಿ. ಉಳಿದ ಕೆಲವರಿಗೆ ಅದು ಸುದ್ದಿಯೇ ಅಲ್ಲ.ನಗರದ ಯಾವುದೇ ವಿಸ್ತರಣೆಯಲ್ಲಿ ಉಂಟಾದ ಸಾವಿನ ಸುದ್ದಿ ನಮ್ಮಲ್ಲಿ ಅನೇಕರನ್ನು ನಿರ್ಭಾವುಕರನ್ನಾಗಿ ಮಾಡಬಲ್ಲದು.

ಮನಸ್ಸಿಗೆ ಆಪ್ತವಾದ ಕೃತಿಗಳನ್ನು ಕುರಿತು ಯೋಚಿಸುವಾಗ, ಉದಾಹರಣೆಗೆ ಮಹಾಭಾರತ,ರಾಮಾಯಣ ಕಾವ್ಯಗಳಲ್ಲಿ, ಕುಂತಿ ಬೀರಿದ ಪ್ರಭಾವ ಮಾದ್ರಿ ಬೀರಲಿಲ್ಲ. ಸೀತೆ, ದ್ರೌಪದಿ, ಪ್ರಾಮುಖ್ಯರಾದಷ್ಟು ಊರ್ಮಿಳೆ, ಮಾಂಡವಿ,ಶೃತಕೀರ್ತಿ ಆಗಿಯೇ ಇಲ್ಲ. ಊರ್ಮಿಳೆಯ ಹೆಸರು ಅಲ್ಲಿ ಇಲ್ಲಿ ಒಂದಷ್ಟು ಚರ್ಚಿತವಾಗಿದ್ದರೆ, ಮಾಂಡವಿ ಶೃತಕೀರ್ತಿ ಹೆಸರು ಬಹಳಷ್ಟು ಜನ ಕೇಳಿಯೂ ಇರಲಿಕ್ಕಿಲ್ಲ. ಅಭಿಮನ್ಯುವಿನ ಸಾವಿನಷ್ಟು ಘಟೋತ್ಕಚನ ಸಾವು ಕಾಡಿಲ್ಲ. ಉಪಕಾರ್ ಚಿತ್ರದ ನಾಯಕ ಮನೋಜ ಕುಮಾರನ ಮೇಲೆ ತೋರಿದ ಪ್ರೀತಿ

ಅನುಕಂಪ ನಮ್ಮ ಊರಿನ ರೈತನ ಮೇಲೆ ತೋರಿದ್ದೇವೆಯೇ ? ಉಹೂಂ! ಸಂದೇಹಗಳ ಸರ ಮಾಲೆ !!

ಬೇಂದ್ರೆಯವರ ಕವಿತೆ ‘ರಾಮಾಯಣ’ದ ಈ ಸಾಲುಗಳನ್ನು ನೋಡಿ.

ಲಕ್ಷ್ಮಣನಿಗೆ ವನವಾಸವು,ಉರ್ಮಿಳೆ ಕುರುಡುಗಳೆದ ಕ್ಷಣಕ್ಷಣಾ |
ಬರಲಿಲ್ಲವು ಲೆಕ್ಕಕ್ಕೆ ವರುಷಗಳು ಹದಿನಾಲ್ಕು ಭಣಭಣಾ|
ಭರತನು ಕಣ್ಣಿಗೆ ಕಾಣುವ ಅಳತೆಯೊಳಿದ್ದನು ತಾ ದಿನದಿನಾ|
ತಪವು ಭರತಗೂ ಮಾಂಡವಿಗೂ ತಪ, ವಿರಹವೇ ಪಾರಾಯಣಾ |
ಶತೃಘ್ನನು ಅರಮನೆಯೊಳಗಿದ್ದರೂ ಶೃತಕೀರ್ತಿಗೂ ರಣರಣಾ |
ರಾಮನ ವಿರಹವು ಸೀತಾವಿರಹವು ತುಂಬಿದೆ ರಾಮಾಯಣಾ ||
ಸಣ್ಣವರತ್ತರೆ ಎಣಿಕೆಗೆ ಬಾರದು ಅಯ್ಯೋ ನಾರಾಯಣಾ ||

ಸಾಹಿತ್ಯ ಸಂಜೀವಿನಿ ಎಂದರೆ, ಬೇಂದ್ರೆ. ನಮ್ಮೆಲ್ಲರ ಪ್ರತಿ ಸಂದೇಹಗಳಿಗೆ, ಬೇಂದ್ರೆಯವರಲ್ಲಿ ಅವರ ಕವಿತೆಗಳಲ್ಲಿ ಮದ್ದಿದೆ.ಅದು ಬೇಂದ್ರೆ ತಾಕತ್ತು! ಸಾಹಿತ್ಯದ ತಾಕತ್ತು.ನಮ್ಮ ನೋವಿನ ಸಂಗತಿಗಳು ನಮಗೆ ಯಾವಾಗಾದರೂ ಸುಖವಾಗಿ-ಸುಂದರವಾಗಿ ಕಂಡಿವೆಯಾ ? ಅಥವಾ ಅವುಗಳನ್ನು ನಾವು, ಸುಖಿಸಿದ ನೆನಪಿದೆಯೇ ? ಇಲ್ಲವೆಂದಾದಲ್ಲಿ ಭಾರತದ 'ದ್ರೌಪದಿ',ರಾಮಾಯಣದ 'ಸೀತೆ',ಭಾಗವತದ 'ಕಯಾದು' ನಮಗೆ ಯಾಕೆ ಹತ್ತಿರವಾಗುತ್ತಾರೆ. ಈ ಕತೆಗಳು ಸಾಹಿತ್ಯಿಕವಾಗಿ ಸುಂದರ ಎನಿಸಿಕೊಂಡು ಓದಿಸಿಕೊಂಡು ಹೋಗುತ್ತವೆಯೇ ? ಯಾಕಿದ್ದೀತು? ಅದು ಸಾಹಿತ್ಯಕ್ಕಿರುವ ಸಶಕ್ತ ಪದಜಾಲ.ಮತ್ತದರಲ್ಲಿ ಅಡಕವಾಗಿರುವ ಸತ್ಯ.ಸ್ಪಷ್ಟವಾಯಿತಲ್ಲ ! ಒಂದು ಕೃತಿ ಅದು ಗದ್ಯ ಪದ್ಯ ವಿಮರ್ಶೆ ನಾಟಕ ಏನೇ ಆಗಿರಲಿ.ನಮ್ಮನ್ನು ಸೆಳೆಯುವ ಶಕ್ತಿ ಆ ಸತ್ಯಕ್ಕಿದೆ. ಅದೇ ಸಾಹಿತ್ಯದ ಕಾಣ್ಕೆ ಮತ್ತು ಅದರಲ್ಲಿರುವ ನೈಜತೆಗೆ ಹತ್ತಿರವಿರುವ ಪಾತ್ರ, ಪರಿಸರ,ಕಟ್ಟಿಕೊಡುವ ಕಲೆ,ಹಿಡಿದಿಟ್ಟ ಭಾಷೆ. ನೈಜತೆ ಅಥವಾ ನಾವು ಕರೆಯುವ ನಿರ್ಮಲಾಂತಃಕರಣ ಮತ್ತು ಅಷ್ಟೇ ಶುದ್ಧವಾದ ಮನಕ್ಕೆ ನೀಡುವ ಪ್ರೀತಿ. ಈ ರೀತಿಯ ಪ್ರೀತಿಗೆ ಸಮಾನವಾದದ್ದು ಏನಾದರೂ ಇದ್ದೀತೆ ?ಖಂಡಿತ ಇರಲಾರದು.ಒಬ್ಬ ಲೇಖಕ ಬರೆಯುತ್ತಿರುವುದು ನೈಜತೆಯಿಂದ ಕೂಡಿಲ್ಲ ಎಂದು ಓದುಗನ ಅರಿವಿಗೆ ಬಂತೆಂದು ತಿಳಿಯಿರಿ ಅದು ನಮ್ಮ ನೆನಪಿನಿಂದ ಮಾಯ. ಅದು ಆ ಕೃತಿಯ ಮತ್ತು ಆ ಲೇಕಖನ ಸೋಲು ಹೌದು. ಒಂದು ಪುಸ್ತಕ ಓದುತ್ತಿದ್ದೇವೆ.ಅದರ ಚೌಕಟ್ಟು, ವಸ್ತು, ಪಾತ್ರಗಳು ನಮ್ಮನ್ನು ವಿಸ್ಮಯ ಲೋಕಕ್ಕೆ ಕೊಂಡೊಯ್ಯುತ್ತ ತನ್ಮಯತೆ ಮೂಡಿಸಿದರೆ ಅ ಪುಸ್ತಕ ಯಶಸ್ಸು ಕಾಣಬಲ್ಲದು. ನಾಲ್ಕು ಜನರ ಬಾಯಲ್ಲಿ ಅದರ ಮಾತು ಬರಬಹುದು ಚರ್ಚೆಗೆ ಒಳಗಾಗಬಹುದು. ವಿಮರ್ಶಕ ಅದನ್ನು ತನ್ನ ಲೇಖನಗಳಲ್ಲಿ ಮಾದರಿ ಪುಸ್ತಕವಾಗಿ ಬಳಸಬಹುದು. ಎಲ್ಲದಕ್ಕೂ ಮೀರಿ ಒಳ್ಳೆಯ ಮಾರುಕಟ್ಟೆ ಪಡೆಯಬಹುದು. ಒಂದು ವೇಳೆ ಅದೇ ಪುಸ್ತಕದ ಪಾತ್ರಗಳ ಮಿತಿಯನ್ನು ದಾಟಿ ಲೇಖಕನೇ ಮಾತಾಡಿದ್ದರೆ ಅಂತಹ ಕೃತಿಗಳು ಅಪಮೌಲ್ಯ ಹೊಂದುತ್ತವೆ. ಇಲ್ಲಿ ಯಾವುದೇ ಒಬ್ಬ ಬರಹಗಾರ/ಕವಿ ಹೇಳುತ್ತಿರುವುದು ಸ್ವಯಂ ಅವನವೇ ಆಗಿರಬೇಕೆ ? ಅವನ ಕಲ್ಪನೆ, ಪ್ರಯತ್ನಗಳಿಗೆ ಬೆಲೆ ಇಲ್ಲವೇ ? ಅದು ಹಾಗಲ್ಲ . ಅಂತಹ ಕಲ್ಪನೆಯಲ್ಲೂ ಪ್ರಾಮಾಣಿಕತನ

ಇದ್ದಾಗಲೇ ಸೃಜನಶೀಲತೆ ಗರಿಗೆದರಲು ಸಾಧ್ಯ. ಇಲ್ಲವಾದರೆ, ಅದು ಒಂದು ರೂಪಾಯಿಗೆ ಒಂದು ಆನೆಯ ಕಥೆ ! ಅಷ್ಟೆ !!

ಓದು,ಸಿನೆಮಾ ಧಾರಾವಾಹಿ ಇನ್ನಾವುದೇ ಕಲೆ ಮತ್ತೊಂದು ಏನೇ ಆಗಿರಲಿ ಆನಂದ, ಸಾಮಾನ್ಯ ಜ್ಞಾನ ಅಥವಾ ಏನೋ ಒಂದು ಸಾಹಿತ್ಯಿಕ ಸಂವೇದನೆ ಒದಗಿಸಬೇಕು. ಕಾವ್ಯಕಲೆಯ ಸದ್ಯ ಪ್ರಯೋಜನ ಕವಿ ಸಹೃದಯರಿಬ್ಬರಿಗೂ ಏಕಕಾಲಕ್ಕೆ ಉಂಟಾಗಬೇಕು ಹಾಗಾದಾಗ ಮಾತ್ರವೇ ಸೌಂದರ್ಯದ ಅನುಭೂತಿ ಮತ್ತು ಸಾಹಿತ್ಯದ ಕೊನೆಯ ಮಜಲನ್ನು ತಲುಪಿದ ತೃಪ್ತಿ. ಇವೆಲ್ಲ ಒಂದು ಕೃತಿ/ಲೇಖಕನಿಂದ ಸಿಗದೇ ಹೋದಾಗ, ಅದು ಸಾರಸ್ವತ ವಲಯದಲ್ಲಿ ಕಳೆದು ಹೋಗುತ್ತದೆ. ಒಂದು ಕೃತಿಯಲ್ಲಿರುವ ಒಂದು ಪಾತ್ರ ನಮ್ಮನ್ನು ಚಿಂತನೆಗೆ ಒಳಪಡಿಸುತ್ತದೆ ಅದರಲ್ಲಿ ನಾವೂ ಒಂದು ಪಾತ್ರವಾಗಿ ಹೋಗುತ್ತೇವೆ. ಯಾವುದೋ ದೃಶ್ಯ/ಪ್ಯಾರಾ ನಮ್ಮ ಕಣ್ಣನ್ನು ಹನಿಗೂಡಿಸುವ ತಾಕತ್ತು ಹೊಂದಿರುತ್ತದೆ.ಜೀವಂತವಿರುವ ಮತ್ತು ಸನಿಹದ ಸಂಪರ್ಕ ಇರುವ ಸ್ನೇಹಿತನಿಗಿಂತ, ಕಾರಂತರ ಚೋಮ, ಅನಂತಮೂರ್ತಿಯವರ ಪ್ರಾಣೇಶಾಚಾರ್, ತ್ರಿವೇಣಿ ಯವರ ಕಾವೇರಿ ನಮಗೆ ಬಹಳ ಹತ್ತಿರವಾಗುತ್ತಾರೆ.ಇದು ಹೇಗೆ ?ಒಂದು ಅನಿಸಿಕೆಯ ಪ್ರಕಾರ ನಮ್ಮ ಮನಸ್ಸು ಇದಕ್ಕೆ ಕಾರಣ.ಕಾಲ್ಪನಿಕ ಪಾತ್ರಗಳು,ನಮ್ಮೊಂದಿಗೆ, ಯಾವುದೇ ರೀತಿಯ ಪೈಪೋಟಿಗೆ ಇಳಿಯಲಾರವು ಎನ್ನುವ ಧೈರ್ಯ.ಇನ್ನೂ ಒಂದು ವಿಶಿಷ್ಟ ಲಕ್ಷಣ ಎಂದರೆ ಆ ಪಾತ್ರ ನಾವೂ ಆಗುವ ಸದವಕಾಶ ಇಲ್ಲಿದೆ.ಕನಿಷ್ಠ ಕೆಲವು ಸಮಯವಾದರೂ ನಮ್ಮನ್ನು ನಮ್ಮಿಂದ ದೂರ ಕರೆದೊಯ್ಯುವ ತಾಕತ್ತು ಇರುವುದು.ಇದು ಒಂದು ರೀತಿಯ ಬಯಲು ಆಲಯದೊಳಗೋ ಆಲಯವು ಬಯಲೋಳಗೋ ಎನ್ನುವ ಉಭಯ ರೀತಿಯ ಲೋಕ. ಬದುಕಿನ ಲಕ್ಷಣ.ಸಾಹಿತ್ಯ ಕಲಿಸುವ ಬದುಕು,ಬದುಕು ಕಲಿಸುವ ವಿದ್ಯೆ .

ಫ್ಲೋರಿಡಾ ದೇಶದ ಭೌಗೋಳಿಕ ಸಂಗತಿಗಳಿಗಿಂತ, ಅಟ್ಲಾಂಟಿಕ್ ಸಾಗರದ ತೀರ ಪ್ರದೇಶಕ್ಕಿಂತ ಅದನ್ನು ನೋಡಲು ಹೋಗುವ ದಾರಿಯಲ್ಲಿ ಕಂಡ ವಿಶಾಲವಾದ ನದಿ ಮತ್ತು ಅದಕ್ಕಿರುವ ಹೆಸರಾದ 'ಇಂಡಿಯಾ ರಿವರ' ಬೋರ್ಡ್ ಓದಿದಾಗ ಧಿಡೀರನೆ ಇಡೀ ಅಮೆರಿಕ ನಮ್ಮದಾಗಿಬಿಡುತ್ತದೆ. ಶ್ರೀಲಂಕಾದ ಮೇಲೆ ಟಿಪ್ಪಣಿ ಬರೆಯಿರಿ ಎಂದಾಗ, ಅದರ ರಾಜಧಾನಿ ಯಾವುದು? ಅಲ್ಲಿಯ ಜನಸಂಖ್ಯೆ ಎಷ್ಟು ? ಅಲ್ಲಿಯ ಉಷ್ಣತಾಮಾನಕ್ಕಿಂತ ಸೇತುಕಟ್ಟಿ ಶ್ರೀಲಂಕೆಗೆ ಹೋದ ರಾಮಾಯಣದಿಂದಾಗಿ ಶ್ರೀಲಂಕಾ ನಮ್ಮದಾಗಿಬಿಡುತ್ತದೆ. ಇದನ್ನು ನಮಗೆ ಲಿಸುವುದು,ಬಾಹ್ಯ ಸಂಗತಿಗಳಲ್ಲ ಭಾವನಾ ಪ್ರಪಂಚ. ಅದು ಸಾಹಿತ್ಯ ಎಂದೇ ಧೃಡವಾದ ನಂಬಿಕೆ. ನಂಬಿಕೆ ಹುಸಿಯಾಗಲಾರದು ಎನ್ನುವುದು ಸಹ ನಂಬಿಕೆಯೇ. ಎಲ್ಲ ನಂಬಬೇಕು ಎನ್ನುವ ಹಟವೂ ಸಲ್ಲ.

ನಂಬದಿರ್ದನು ತಂದೆ ನಂಬಿದನು ಪ್ರಹ್ಲಾದ
ನಂಬಿಯೂ ನಂಬದಿರುವ ಇಬ್ಬಂದಿ ನೀನು
ಕಂಬದಿನೋ, ಬಿಂಬದಿನೋ ಮೋಕ್ಷ ಅವರಿಂಗಾಯ್ತು.
ಸಿಂಬಳದ ನೊಣ ನೀನು – ಮಂಕುತಿಮ್ಮ.

0-0-0-0.

ಪರಾಮರ್ಶನ ಸೂಚಿ.

ವಿನಯ :- ಬೇಂದ್ರೆಯವರ ಆಯ್ದ ಕವನಗಳು.

ಮಂಕುತಿಮ್ಮನ ಕಗ್ಗ :- ಡಿ.ವಿ.ಜಿ

ಲೇಖನ - ಆಯ್ದಕ್ಕಿ ಮಾರಯ್ಯ	**ಶ್ರೀಪ್ರಕಾಶ್ ಎಚ್ ವಿ**

ನಮ್ಮ ಭಾರತೀಯ ಸ್ಟೇಟ್ ಬ್ಯಾಂಕಿನ ಅಧಿಕಾರಿಗಳ ಸಂಘದ ಡೈರಿಯಲ್ಲಿ ಪ್ರತಿವರ್ಷವೂ ಧ್ಯೇಯವಾಕ್ಯ ಎಂದು ಪ್ರಕಟವಾಗುತ್ತಿದ್ದ ಒಂದು ವಚನ ನನ್ನನ್ನು ಬಹುವಾಗಿ ಸೆಳೆಯುತ್ತಿತ್ತು.ಯಾವುದಾದರರೂ ಪ್ರಚಲಿತ ಶ್ಲೋಕವೋ ,ವಾಕ್ಯವೋ ಅಥವಾ ಕಾರಂತ ಕುವೆಂಪು ಬೇಂದ್ರೆಯವರ ಉತ್ತಮ ಸಾಲುಗಳನ್ನೋ ಹಾಕಬಹುದಿತ್ತು.ಈ ವಚನದಲ್ಲಿ ಏನಿದೆ ಅಂದುಕೊಳ್ಳುತ್ತಿದ್ದೆ.ಕಾಯಕದ ಮಹತ್ವ ಹೇಳುವ ಆ ವಚನ ಬರೆದ ಆಯ್ದಕ್ಕಿ ಮಾರಯ್ಯ ಮತ್ತು ಆತನಪತ್ನಿ ಲಕ್ಕಮ್ಮ ನಡೆಸಿದ ಸರಳ ಬದುಕು ,ಪಾಲಿಸಿದ ಮೌಲ್ಯ ತಿಳಿದಾಗ ವಚನ ಬಹು ಅರ್ಥಪೂರ್ಣವೆನಿಸಿತು. ವಚನ ಹೀಗಿದೆ.

ಕಾಯಕವೇ ಕೈಲಾಸ

ಕಾಯಕದಲ್ಲಿ ನಿರತನಾದರೆ
ಗುರುದರ್ಶನವಾದರೂ ಮರೆಯಬೇಕು
ಲಿಂಗಪೂಜೆಯಾದರೂ ಮರೆಯಬೇಕು
ಜಂಗಮ ಮುಂದಿದ್ದರೂ ಹಂಗು ಹರಿಯಬೇಕು
ಕಾಯಕವೇ ಕೈಲಾಸವಾದಕಾರಣ ಅಮರೇಶ್ವರ ಲಿಂಗವಾಯಿತ್ತಾದರೂ ಕಾಯಕದೊಳಗು ಗುರುವಾದರೂ ಕಾಯಕದಿಂದಲೇ ಜೀವನ್ಮುಕ್ತಿ ಲಿಂಗವಾದರೂ ಕಾಯಕದಿಂದಲೇ ಶಿಲೆಯ ಕುರುವು ಹರಿಯುವುದು
ಜಂಗಮನಾದರೂ ಕಾಯಕದಿಂದಲೇ ತನ್ನ ವೇಷಪಾಶ ಹರಿಯುವುದು.ಇದು ಚಂದೇಶ್ವರ ಲಿಂಗದ ಅರಿವು ಕೇಳಾ ಪ್ರಭುವೇ.
- ಆಯ್ದಕ್ಕಿ ಮಾರಯ್ಯನವರು

ವಚನ ಸಾಹಿತ್ಯ ಕರ್ನಾಟಕದ ಬಹುದೊಡ್ಡ ಸಾಂಸ್ಕೃತಿಕ ಸಂಪತ್ತು.ಹನ್ನೆರಡನೇ ಶತಮಾನದಲ್ಲಿ ನಡೆದ ಒಂದು ಸಾಮಾಜಿಕ ಆಧ್ಯಾತ್ಮಿಕ ಕ್ರಾಂತಿ.

ವೇದ ಉಪನಿಷತ್ತುಗಳ ಈ ಪುಣ್ಯಭೂಮಿಯಲ್ಲಿ ವಸುದೈವ ಕುಟುಂಬಕಂ ಎಂಬ ತತ್ವದ ಅರಿವಿದ್ದರೂ ಶೋಷಣೆ ವರ್ಧಿಸುತ್ತಾ ವರ್ಗ ವರ್ಣ ಲಿಂಗ ಭೇಧಗಳು ಹೆಚ್ಚುತ್ತಾ ಬಂದದ್ದು ವಿಪರ್ಯಾಸವೇ ಸರಿ.
ತುಂಬಿದ್ದ ಮೌಢ್ಯವನ್ನು ಹೊರಹಾಕಿ ಸಮಾಜದ ಕೆಡುಕುಗಳನ್ನು ಬೊಟ್ಟುಮಾಡಿ ತೊಡೆದು ಹಾಕಲು ಯತ್ನಿಸಿದ ಶರಣರ ಚಳುವಳಿ ಇಂದಿಗೂ ಒಂದು ಬೆರಗು.
ಇಂತಹ ಶರಣ ವಚನಕಾರರಲ್ಲಿ ಆಯ್ದಕ್ಕಿ ಮಾರಯ್ಯ ಲಕ್ಕಮ್ಮ ದಂಪತಿಗಳೂ ಇದ್ದು ಇವರು ಕೃಷಿ ಕೂಲಿಕಾರರಾಗಿದ್ದರು.ಅಮರೇಶ್ವರ ಲಿಂಗ ಎಂದು ಇವರ ವಚನಗಳಲ್ಲಿ ಬರುವುದರಿಂದ ಬೀದರ್ ನ ಅಮರೇಶ್ವರ ಲಿಂಗ ಇವರ ಊರು ಇರಬಹುದೆಂಬ ಊಹೆ ಇದೆ.ಕುಸನೂರ ಬಳಿ ಇವರಿದ್ದರೆಂದು ಅಲ್ಲಿನ ರೈತರು ಇವರ ಸ್ಮಾರಕ ನಿರ್ಮಿಸಿದ್ದು ದಾಸೋಹವನ್ನೂ ನಡೆಸುತ್ತಾರೆ.

ಆಯ್ದಕ್ಕಿ ಲಕ್ಕಮ್ಮ ೨೫ ವಚನಗಳನ್ನೂ ಮಾರಯ್ಯ ೩೨ ವಚನಗಳನ್ನೂ ಬರೆದಿದ್ದಾರೆ.
ಬಸವಕಲ್ಯಾಣ ಅನೇಕ ಶರಣರ ನ್ನು ಕೂಗಿ ಕರೆದಿತ್ತು.ಈ ದಂಪತಿಗಳೂ ಕಲ್ಯಾಣಕ್ಕೆ ಬಂದರು.
ಆಯ್ದಕ್ಕಿ ಲಕ್ಕಮ್ಮ ಕಾಯಕದ ಮಹತ್ವ ಅರಿತಿದ್ದ ಭಕ್ತಿ ಶ್ರದ್ಧೆಯುಳ್ಳ ಹೆಂಗಸು "ಏಳಯ್ಯ ಕಾಯಕಕ್ಕೆ ಹೊತ್ತಾಯ್ತು" ಎಂದು ಅನುಭವ ಗೋಷ್ಠಿ ಯಲ್ಲಿ ಮೈಮರೆತ ಗಂಡನನ್ನು ಎಬ್ಬಿಸಿ ಕಾಯಕದ ನೆನಪು ಮಾಡುತ್ತಾಳೆ.ಕಾಯಕಕ್ಕೆ ಪೂಜೆ ಧ್ಯಾನಕ್ಕಿಂತಲೂ ಹೆಚ್ಚಿನ ಮಹತ್ವ ಎಂಬ ಸಂದೇಶ ಇಲ್ಲಿ ಕಾಣಬಹುದು
ಇವರ ಬವಣೆ ಅರಿತಿದ್ದ ಬಸವಣ್ಣನವರು ಒಮ್ಮೆ ಬೇಕೆಂದೇ ಬಹಳ ಅಕ್ಕಿ ಚೆಲ್ಲುತ್ತಾರಂತೆ.ಬಹಳ ಬೇಗ ಎಂದಿಗಿಂತ ನಾಲ್ಕುಪಟ್ಟು ಹೆಚ್ಚು ಅಕ್ಕಿ ತಂದ ಗಂಡನನ್ನು ಕಂಡು ಸಂತಸಪಡುವ ಬದಲಾಗಿ ಆಯ್ದಕ್ಕಿ ಲಕ್ಕಮ್ಮ
" ಆಸೆಯೆಂಬುದು ಅರಸಂಗಲ್ಲದೆ ಶಿವಭಕ್ತರಿಗುಂಟೇ ಅಯ್ಯಾ..ಈಸಕ್ಕಿ ಆಸೆ ನಿಮಗೇಕೆ?"
ಎಂದು ಎಚ್ಚರಿಸುತ್ತಾಳೆ.
ಲಂಚ ಭ್ರಷ್ಟಾಚಾರ ಕ್ಕೆ ಬಾಯಿ ಬಿಡುವ ಈ ದಿನಗಳಲ್ಲಿ ಅಗತ್ಯಕ್ಕಿಂತ ಹೆಚ್ಚು ಸಂಗ್ರಹಿಸುವುದು ತಪ್ಪು ಎಂಬ ಲಕ್ಕಮ್ಮನ ಎಚ್ಚರಿಕೆ ಅದೆಷ್ಟು ಮಹತ್ವಪೂರ್ಣ!
ಮಾರಯ್ಯ ಹೆಚ್ಚಿನ ಅಕ್ಕಿಯನ್ನು ಹಿಂದಿರುಗಿಸಿ ಬಂದನಂತೆ.
ಹೀಗೆ ಶರಣರ ಸಂಸ್ಕೃತಿಯ ಜೀವನ ಮೌಲ್ಯಗಳನ್ನು ಕಾಯಕ ತತ್ವವನ್ನು ನಿಷ್ಠೆ ಯಿಂದ ಪಾಲಿಸಿ ಸಾರಿದ ಆಧ್ಯಾತ್ಮ ಜೀವಿಗಳು ಇವರು.

" ಆಯ್ದಕ್ಕಿ ಮಾರಯ್ಯನ ಮಗ ನಾನು" ಎಂದು ಒಂದು ವಚನದಲ್ಲಿ ಬಸವಣ್ಣನವರೇ ಹೇಳಿರುವುದು ಈ ದಂಪತಿಗಳ ಉತ್ತಮ ಬದುಕಿಗೆ ನಿದರ್ಶನವಾಗಿದೆ.

ಕವನ - ಸಂಕಲ್ಪ ಶಕ್ತಿ	ಶ್ರೀಮತಿ ರಾಜೇಶ್ವರಿ ಚಿಂತಾಮಣಿ

ತಾಪದಲ್ಲೆ ಅರಳಬೇಕು ಸ್ವಚ್ಛ ಮಲ್ಲಿಗೆ
ನೋವಿನಲ್ಲೆ ಮಾಗಬೇಕು ಜೀವ ಮೆಲ್ಲಗೆ
ಎಲೆಗಳೆಲ್ಲ ಉದುರಬೇಕು ಹೊಸ ಚಿಗುರಿಗೆ
ಬೆಂಕಿಯಲ್ಲಿ ಬೇಯಬೇಕು ಚೊಕ್ಕ ಚಿನ್ನವಾಗೆ

ದೂರವೆನಿತು ಇದ್ದರು ದಾರಿಯೂ ಇದೆ
ನಿರಾಸೆಯ ಸಸಿಯಲ್ಲಿ ಆಸೆ ಚಿಗುರಿದೆ
ಭಾದೆಯ ಕಡಲಾಳದಲ್ಲೆ ನಗುವಿನ ಮುತ್ತಿದೆ
ದುಃಖ ಭಾವ ತಾನದಲ್ಲೆ ನವರಾಗ ಪಲ್ಲವಿ ಇದೆ

ಅಪಜಯಗಳೆ ಬಾಳಿನಲ್ಲಿ ಗೆಲುವಿಗಾಸರೆ
ಕತ್ತಲಲ್ಲಿ ಚಿಮ್ಮಬೇಕು ಬೆಳಕಿನಾ ಸೆಲೆ
ಸಾಗರ ಮಥನದಲ್ಲಿ ವಿಷವೇ ಮೊದಲು
ಸಾಧಿಸಿ ನಡೆಯುತಿರೆ ದೊರೆವುದು ಅಮೃತಧಾರೆಯು

ಉಳಿಯೇಟು ಬಿದ್ದರೂ ಚೂರಾಗದಿರಬೇಕು
ಸೊಗಸಾದ ಶಿಲ್ಪವಾಗಿ ಮೂಡುತ ನಿಲ್ಲಬೇಕು
ಸಂಕಲ್ಪ ಶಕ್ತಿಗೆ ಆ ವಿಧಿ ಕೂಡ ಸೋಲಬೇಕು
ಮಣಿದು ತಾನು ಕಲ್ಲಿಗೂ ಜೀವ ತುಂಬಬೇಕು

ಕಹಿ ಅನುಭವದಲೊಂದು ಪಾಠವೂ ಇದೆ
ಬೇವು ತಾನು ಕಹಿಯಾದರೂ ಔಷಧೀಯ ಗುಣವಿದೆ
ಮುಷ್ಟಿಯನ್ನು ಬಿಗಿದು ಹಸ್ತರೇಖೆ ಮೂಡಿಸು
ಭವ್ಯ ಭವಿತ ರೂಪಿಸಿ ಲಲಾಟ ಲಿಖಿತ ಬದಲಿಸು

ವಿ. ಎನ್. ರಾಜೇಶ್ವರಿ (ಶಿವಪ್ರಿಯೆ)

	ಕವನ - ಕಾಳಿಂಗ ಮರ್ಧನ	**ಜಿ.ವಿ.ಹೆಗ್ಗಡೆ**

ನಂದ ಗೋಕುಲದಲ್ಲಿ ಬಲರಾಮ ಕೃಷ್ಣರು
ಸುಂದರರಿಬ್ಬರು ಬಾಲಕರು|
ನಂದಗೋಪನು ತಂದೆ ತಾಯಿ ಯಶೋಧೆಯು
ಚಂದದೊಳಿರ್ದರು ಗುಣಯುತರು||೧||

ಆಟವನಾಡಲು ಬಾಲಗೋಪಾಲರು
ಊಟವ ಬೇಡದೆ ಕೂಡುವರು|
ಸಾಟಿಯಿಲ್ಲದ ಆಟ ಮರಕೋತಿ ಚಿಣಿದಾಂಡು
ಗೋಟಿಯಾಟವನಾಡಿ ನಲಿಯುವರು||೨||

ಬೆಳಗಿನ ಜಾವದಿ ಹಸುಗಳ ಕೂಡಿಸಿ
ಗೆಳೆಯರೆಲ್ಲರು ಸೇರಿ ಹರುಷದಲಿ|
ಚಳಿಮಳೆ ಬಿಸಿಲುಗಳೆನ್ನದೆ ಪ್ರತಿದಿನ
ಕಳೆವರು ಸಮಯವ ಯಮುನೆಬಳಿ||೩||

ಮರದ ಗೆಲ್ಲಿನ ಮೇಲೆ ಕುಳಿತು ಕೈಯಲಿ ಕೊಳಲ
ಗರುವದಿ ಊದುವ ಬಾಲಕನು|
ಸರಸರ ಹಸುಗಳು ಸನಿಹಕೆ ಬರುವವು
ನಿರುತ ನೋಡಿದರಲ್ಲಿ ಅವ ಕೃಷ್ಣನು||೪||

ಹೊತ್ತಿಳಿಯುತಲಿರೆ ಬಾಲಕರೆಲ್ಲರು

ಹೊತ್ತು ತಂದಿಹ ಪಾತ್ರೆಗಳನೆಲ್ಲವ|
ಕತ್ತಲೆಯಾಗುವ ಪೂರ್ವದಿ ಹೊಗುವರು
ಮತ್ತೆ ತಡಮಾಡದೆ ಸ್ವಗೃಹವ||೫||

ಒಂದು ದಿವಸ ಯಮುನೆಯ ತಟದಲಿ ಬಂದ
ಕಂದು ಬಣ್ಣದ ಹಸು ಕಾಣಲಿಲ್ಲ|
ಅಂದುಕೊಂಡರು ಮೊದಲೆ ತೆರಳಿದೆ ಊರಿಗೆ
ಇಂದು ಎನುತ ತಿರುಗಿ ಹೊರಟರೆಲ್ಲ||೬||

ಕೊಟ್ಟಿಗೆಯಲಿ ಕಂದು ಬಣ್ಣದ ಕಪಿಲೆಯು
ಎಷ್ಟು ನೋಡಿದರೇನು ಬರಲೆ ಇಲ್ಲ|
ಗಟ್ಟಿಮನಸು ಮಾಡಿ ಹುಡುಕಿದರೆಲ್ಲೆಲ್ಲ
ಬೆಟ್ಟ ತಿರುಗಿದರು ಸಿಗಲೆ ಇಲ್ಲ||೭||

ಯಮುನೆಯ ಮಡುವಲಿ ಘೋರ ಕಾಳಿಂಗನ
ಗಮನಿಸಿದರು ಗೋಕುಲದ ಜನರು||
ನಿಮಿಷಾರ್ಧದಲಿ ಸುದ್ಧಿ ಹರಡಿತು ಗರುಡನ
ಗಮನನೆ ಕಾಯುವದೆಂದರವರು||೮||

ಚಿಕ್ಕ ಬಾಲಕರನೆಲ್ಲರ ಕೂಡಿ ಕೃಷ್ಣನು
ಹೊಕ್ಕನು ಯಮುನೆಯ ತಟವನಾಗ|
ಫಕ್ಕನೆ ಮರವೇರಿ ಹಾರಿದ ನದಿಯೊಳು
ಹೊಕ್ಕನಾಗಲೆ ನದಿ ಮಡುವಬೇಗ||೯||

ಸುದ್ದಿಯ ಕೇಳಿ ಯಶೋಧೆ ಗಾಬರಿಯಾಗಿ
ಎದ್ದು ಬಿದ್ದೆನೊ ಎಂದು ಬಂದಳಲ್ಲ|
ಸದ್ದಿಲ್ಲ ಸುತ್ತೆಲ್ಲ ನೋಡಿದರೂ ಕೂಡ
ಮುದ್ದು ಮಗ ಕೃಷ್ಣನ ಕಾಣಲಿಲ್ಲ||೧೦||

ಮಡುವಿಂದ ಹೊರಟಿತು ಕೆನ್ನೀರು ಸುತ್ತಲೂ
ಗಡಿಬಿಡಿಸಿದರೆಲ್ಲ ಊರಜನ|
ತಡವಮಾಡದೆ ನದಿ ನಡುವೆ ಕೋಲಾಹಲ
ಎಡೆಬಿಡದಲಿ ನೋಡಿದರು ಕೃಷ್ಣನ||೧೧||

ಕೈಯಲಿ ಬಾಲ ಪುಟ್ಟನ ಕಾಲು ತಲೆಯಲಿ
ಧೈಯ ತಕ್ಕ ಧೈಯ ಕುಣಿಯುವನು|
ಬಾಯಲಿ ರಕ್ತವ ಸುರಿಪ ಕಾಳಿಂಗನ
ಹಾಯೆಂದು ಹೆಡೆಮೆಟ್ಟಿ ನಲಿದಿಹನು||೧೨||

ಲೇಖನ - ಬದಲಾಗುತ್ತಿರುವ ವೈದ್ಯ ರೋಗಿಯ ಸಂಬಂಧ – ಅವಲೋಕನ	**ಶ್ರೀಮತಿ (ಡಾ) ಶ್ರೀಲಕ್ಷ್ಮೀ ಶ್ರೀನಿವಾಸನ್**

"ವೈದ್ಯೋ ನಾರಾಯಣೋ ಹರಿಃ". ಸುಮಾರು ಇಪ್ಪತ್ತು-ಮೂವತ್ತು ವರ್ಷಗಳ ಕೆಳಗೆ ಭೌತಿಕ ರೋಗಗಳನ್ನು ಗುಣಪಡಿಸುವ ವೈದ್ಯರನ್ನು ಜನರು ಹರಿಗೆ ಸಮಾನವಾಗಿಯೇ ಕಾಣುತಿದ್ದರು. ಜನಜನಿತವಾಗಿದ್ದ ಈ ಭಾವನೆ ನನ್ನಂತಹ ಹಲವರಿಗೆ ವೈದ್ಯಕೀಯ ವೃತ್ತಿ ಆರಿಸಿಕೊಳ್ಳಲು ಪ್ರೇರಣೆಯಾಯಿತು. ಇಂದು ಪರಿಸ್ಥಿತಿ ಗಣನೀಯವಾಗಿ ಬದಲಾಗಿದೆ. ವೃತ್ತಿಸಂಬಂಧಿ ಹೆಣಗಾಟದಿಂದ ವೈದ್ಯ ಹೈರಾಣಾಗಿದ್ದಾನೆ. ವೈದ್ಯರ ಮೇಲೆ ಹಲ್ಲೆ ನಿತ್ಯದ ಸಮಾಚಾರವಾಗಿದೆ. ಹುಡುಕಿ ಹೊರಟ ಗೌರವ ಆದರಗಳು ಇಲ್ಲದೆ, ಪಟ್ಟ ಶ್ರಮಕ್ಕೆ ತಕ್ಕ ಆರ್ಥಿಕ ಪ್ರತಿಫಲವಿಲ್ಲದೆ ವೈದ್ಯ ಸಮುದಾಯ ನಿರಾಶವಾಗಿದೆ. ಇದು ವೈದ್ಯರ ಕಥೆಯಾದರೆ ರೋಗಿಗಳದು ಬೇರೆಯೆ ವ್ಯಥೆ. ಅನುಭವಿಸುತ್ತಿರುವ ಯಾತನೆಯೊಂದಿಗೆ, "ಚಿಕಿತ್ಸೆಗಾಗಿ ಎಷ್ಟು ಹಣ ತೆತ್ತರೂ ಸಾಲದು". "ಹಣ ಕೊಟ್ಟರೂ ಸರಿಯಾದ ಪರಿಹಾರ ಸಿಗುತ್ತಿಲ್ಲ." "ಆಸ್ಪತ್ರೆಗಳಿಗೆ ತಿರುಗಿ ತಿರುಗಿ ಹಣದೊಂದಿಗೆ ಮಾನಸಿಕ ನೆಮ್ಮದಿ ಹಾಳಾಯ್ತು" ಈ ರೀತಿಯ ಆಲೋಚನೆಗಳಲ್ಲಿ ಬಳಲುವವರೆಷ್ಟೋ ಮಂದಿ.

ಏಕೆ ಹೀಗೆ? ಏನು ಕಾರಣ? ವೈದ್ಯರು ಬದಲಾದರೆ? ರೋಗಿಗಳು ಬದಲಾದರೆ?

ಬ್ರಿಟೀಷರು ತಮ್ಮೊಡನೆ ತಮ್ಮ ವೈದ್ಯಕೀಯ ಪದ್ದತಿಯನ್ನೂ ಭಾರತಕ್ಕೆ ತಂದರು. ಸ್ವತಂತ್ರ ಹೋರಾಟದ ಬಿಸಿಯಲ್ಲಿ ಬದಲಾಗುತ್ತಿದ್ದ ವೈದ್ಯಕೀಯ ಚಿತ್ರಣ ಹೆಚ್ಚಿನ ಪ್ರಾಮುಖ್ಯತೆಯನ್ನು ಪಡೆಯಲಿಲ್ಲ. ಆಧುನಿಕ ವೈದ್ಯ ಪದ್ದತಿ ನಮ್ಮ ಸಾಂಪ್ರದಾಯಿಕ ವೈದ್ಯ ಪದ್ದತಿಗಳನ್ನು ಸದ್ದಿಲ್ಲದೆ ಹಿಂದಿಕ್ಕಿ ಮುಖ್ಯ ವಾಹಿನಿಯ ಪದ್ದತಿಯಾಯಿತು. ಇಂದು ಭಾರತ (ವಿಶ್ವವೂ ಕೂಡ) ಬೇರೊಂದು ರೀತಿಯ ವೈದ್ಯಕೀಯ ಸಂಧಿಕಾಲದಲ್ಲಿದೆ. ಹೊಸ ಆವಿಷ್ಕಾರಗಳು, ಬದಲಾಗುತ್ತಿರುವ ಆರ್ಥಿಕ

ಪರಿಸ್ಥಿತಿ, ಬದಲಾದ ಆದ್ಯತೆಗಳು, ಯಾಂತ್ರೀಕರಣ ಇತ್ಯಾದಿಗಳು ವೈದ್ಯ ರೋಗಿಯ ಸೂಕ್ಷ್ಮ ಸಂಬಂಧದ ಮೇಲೆ ಗಾಢವಾದ ಪರಿಣಾಮ ಬೀರುತ್ತಿವೆ.

ಇಂದು ನಾವು ನೋಡುತ್ತಿರುವ ಬದಲಾವಣೆಗಳಲ್ಲಿ ಅತಿ ದೊಡ್ಡದು ಅಂತರ್ಜಾಲದ ಪ್ರವೇಶ ಹಾಗು ಹರವು. ಜಗತ್ತಿಗೆಲ್ಲಾ ಜ್ಞಾನದ ಬಾಗಿಲಾಗಿರುವ ಅಂತರ್ಜಾಲ, ವೈದ್ಯರಿಗೆ ಅರಿವನ್ನು ಹೆಚ್ಚಿಸಿಕೊಳ್ಳುವ, ಕ್ಲಿಷ್ಟ ವಿಷಯಗಳನ್ನು ಚರ್ಚಿಸುವ, ಜ್ಞಾನವನ್ನು ಹಂಚಿಕೊಳ್ಳುವ ವೇದಿಕೆಯಾಗಿದೆ. ಹಾಗೆಯೇ ರೋಗಿಗಳಿಗೂ ಅರಿವನ್ನು ಹೆಚ್ಚಿಸುವ ಮಾಧ್ಯಮವಾಗಿದೆ. ರೋಗ ಸಾಕ್ಷರತೆ ಹೆಚ್ಚಿದೆ. ಈಗ ರೋಗಿಗಳು ತಮ್ಮ ಚಿಕಿತ್ಸೆಯ ಚರ್ಚೆಯಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳುತ್ತಿದ್ದಾರೆ. ಹೆಚ್ಚಿನ ಮಟ್ಟದ ತಿಳುವಳಿಕೆಯಿಂದ ಚಿಕಿತ್ಸೆಯ ತೀರ್ಮಾನಗಳನ್ನು ತೆಗೆದುಕೊಳ್ಳುತ್ತಿದ್ದಾರೆ.

ರೋಗದ ಇಡೀ ಸ್ವರೂಪ, ಚಿಕಿತ್ಸೆ, ತೀವ್ರ ಪರಿಣಾಮಗಳು, ಚಿಕಿತ್ಸೆಯ ಅಡ್ಡ ಪರಿಣಾಮಗಳು ಅಂತರ್ಜಾಲದಲ್ಲಿ ಲಭ್ಯವಿರುವುದರಿಂದ ಹೋಲಿಸಿ ನೋಡಿಕೊಳ್ಳುವ, ತೀವ್ರ ಅನುಮಾನದಿಂದ ಬಳಲುವ, ಚಿಂತಿಸುವ ಪ್ರವೃತ್ತಿಯೂ ಜನರಲ್ಲಿ ಹೆಚ್ಚಾಗಿದೆ.

ಅಂತರ್ಜಾಲದ ಪ್ರವೇಶದಿಂದ ಚಿಕಿತ್ಸೆಯ ಜವಾಬ್ದಾರಿ ಮತ್ತು ಅಧಿಕಾರ, ವೈದ್ಯರಿಂದ ಸ್ವಲ್ಪ ಮಟ್ಟಿಗೆ ರೋಗಿಗೆ ಮತ್ತು ಅವರ ಕುಟುಂಬದವರಿಗೆ ವರ್ಗಾವಣೆಯಾಗಿದೆ. ವೈದ್ಯರ ಮೇಲಿನ ಅವಲಂಬನೆ ಹಿಂದಿಗಿಂತಲೂ ಕಡಿಮೆಯಾಗಿದೆ.

ಹೆಚ್ಚಾಗುತ್ತಿರುವ ಕೊಳ್ಳುವ ಸಾಮರ್ಥ್ಯ - ಸಾಮಾನ್ಯ ಭಾರತೀಯನ ಸರಾಸರಿ ಆದಾಯ ದಶಕದಿಂದ ದಶಕಕ್ಕೆ ಹೆಚ್ಚುತ್ತಿದೆ. ಸಹಜವಾಗಿಯೇ ಅವನ ಕೊಳ್ಳುವ ಸಾಮರ್ಥ್ಯವೂ ಹೆಚ್ಚಿದೆ. ಹಿಂದಿಗಿಂತಲೂ ಹೆಚ್ಚಿನ ಬೆಲೆಯ, ಹೆಚ್ಚಿನ ಮೌಲ್ಯದ, ಹೆಚ್ಚಿನ ಗುಣಮಟ್ಟದ ಸೇವೆಯನ್ನು ಪಡೆಯುವುದು, ಶೀಘ್ರವಾಗಿ ಸೇವೆ ಪಡೆಯುವುದು ತೀರಾ ಸಾಮಾನ್ಯವಾಗಿಬಿಟ್ಟಿದೆ. ಬದುಕಿನ ಎಲ್ಲಾ ಸ್ತರಗಳಲ್ಲೂ ಇದೇ ರೀತಿಯ ಬದಲಾವಣೆಗಳನ್ನು ಬಯಸುವುದು ಸಾಮಾನ್ಯವಾಗಿದೆ. ವೈದ್ಯಕೀಯ ಕ್ಷೇತ್ರವೂ ಇದಕ್ಕೆ ಹೊರತಲ್ಲ. ಆಸ್ಪತ್ರಯಲ್ಲಿ ರೋಗಿ ತನ್ನ ರೋಗಕ್ಕೆ ಪರಿಹಾರ ಮಾತ್ರವಲ್ಲ "ಗ್ರಾಹಕ ತೃಪ್ತಿಯನ್ನು" ಬಯಸುತ್ತಿದ್ದಾನೆ. ಇದರಿಂದಾಗಿ ವೈದ್ಯರು ರೋಗಿಗಳೊಂದಿಗೆ ವ್ಯವಹರಿಸುವ ರೀತಿ ಬದಲಾಗಲೇಬೇಕಾಗಿದೆ. ಬದಲಾಗಿದೆ.

ಆರೋಗ್ಯ ವಿಮೆ – ಭಾರತಕ್ಕೆ ಸಾಫ್ಟ್ ವೇರ್ ಉದ್ಯಮದೊಡನೆಯೇ ಆರೋಗ್ಯ ವಿಮೆಯ ಆಗಮನವೂ ಆಯಿತು. ವಿಮೆಯಿಂದಾಗಿ, ಹಿಂದೆ ಅತಿ ಶ್ರೀಮಂತರಿಗೆ ಮಾತ್ರ ಮೀಸಲಾಗಿದ್ದ ಅನೇಕ ಚಿಕಿತ್ಸಾ ವಿಧಾನಗಳು ಜನ ಸಾಮಾನ್ಯರಿಗೂ ಲಭ್ಯವಾಗಿದೆ. ರೋಗಿಗೆ ಆಯ್ಕೆಯ ಸೌಲಭ್ಯ ದೊರಕಿದೆ. ತುರ್ತು ಪರಿಸ್ಥಿತಿಗಳಲ್ಲಿ ಹಣದ ಚಿಂತೆ ಇಲ್ಲದೆ ಚಿಕಿತ್ಸೆ ಪಡೆಯುವಂತಾಗಿದೆ. ಆಸ್ಪತ್ರೆಗಳಲ್ಲಿ ಚಿಕಿತ್ಸೆ ಪಡೆಯುವ ರೋಗಿಗಳು ಹೆಚ್ಚಾಗಿದ್ದಾರೆ.

ವಿಮೆ ಹಾಗು ಹೆಚ್ಚುತ್ತಿರುವ ಕೊಳ್ಳುವ ಸಾಮರ್ಥ್ಯದಿಂದ ಜನರ ಮನಸ್ಥಿತಿ 'ವೈದ್ಯರು ನಮಗೆ ಸೇವೆ ಮಾಡುತ್ತಿದ್ದಾರೆ' 'ಅವರದು ನಿಸ್ವಾರ್ಥ ಕೆಲಸ' ಎಂಬುದರಿಂದ 'ನಾವು ಕೊಟ್ಟ ಹಣಕ್ಕೆ ನಮಗೆ ಚಿಕಿತ್ಸೆ ದೊರಕುತ್ತಿದೆ' ಎಂದು ಬದಲಾಗುತ್ತಿದೆ. ಇದು ಗ್ರಾಹಕ ಮನೋಧರ್ಮ. ಇದು ಇಂದು ನಾವು ನೋಡುತ್ತಿರುವ ಬದಲಾವಣೆಗಳಲ್ಲಿ ಅತಿ ಮುಖ್ಯವಾದುದು.

ಪೂರಕ ಶಾಖೆಗಳ ಬೆಳವಣಿಗೆ – ಬಹಳ ಹಿಂದೆ ರೋಗ ನಿದಾನ, ಔಷಧ ತಯಾರಿ, ರೋಗಿಯ ಆರೈಕೆ ಎಲ್ಲವೂ ವೈದ್ಯರ ಜವಾಬ್ದಾರಿಗಳೇ ಆಗಿದ್ದವು. ನಿಧಾನವಾಗಿ ಔಷಧ ಕೈಗಾರಿಕೆ, ರೋಗ ನಿದಾನ ಉಪಕರಣಗಳು, ಶುಶ್ರುಷಕ ವೃತ್ತಿ ಎಲ್ಲವೂ ವೈದ್ಯರ ಕೆಲಸಕ್ಕೆ ಪೂರಕವಾಗಿ ಆರಂಭಗೊಂಡವು. ಕಾಲಾನುಕ್ರಮದಲ್ಲಿ ಅವೆಲ್ಲವೂ ಸ್ವತಂತ್ರ ಅಸ್ಥಿತ್ವವುಳ್ಳ ಉದ್ಯಮಗಳಾದವು. ಈ ಎಲ್ಲಾ ಉದ್ಯಮಗಳೂ ಸ್ವತಂತ್ರವಾಗಿ ರೋಗಿಯ ಚಿಕಿತ್ಸೆಯ ಆಯ್ಕೆಯ ಮೇಲೆ ಪ್ರಭಾವ ಬೀರ ತೊಡಗಿದವು.

ಔಷಧ ಕೈಗಾರಿಕೆ (ಕಾರ್ಖಾನೆಗಳು ಮತ್ತು ಔಷಧದ ಅಂಗಡಿಗಳು) – ಇವುಗಳ ಆಗಮನದಿಂದ ಔಷಧ ತಯಾರಿ, ಪ್ಯಾಕಿಂಗ್, ಮಾರಾಟ ಎಲ್ಲವೂ ವೈದ್ಯೇತರರ ಜವಾಬ್ದಾರಿಯಾಯಿತು. ರೋಗ ನಿರ್ಣಯ ಹಾಗು ಔಷಧವನ್ನು ಸೂಚಿಸುವ ಕೆಲಸ ವೈದ್ಯರದಾಯಿತು. ಔಷಧದ ಪರಿಣಾಮದ ಮೇಲಿನ ವೈದ್ಯರ ಹಿಡಿತ ಕಡಿಮೆಯಾಯಿತು. ಕಂಪನಿಗಳು ಎಷ್ಟೊ ಬಾರಿ ಜಾಹೀರಾತುಗಳ ಮೂಲಕವಾಗಿ ಸ್ವತಂತ್ರವಾಗಿ ರೋಗಿಗಳ ಅಯ್ಕೆಯ ಮೇಲೆ ಪರಿಣಾಮ ಬೀರಿದ್ದೂ ಇದೆ (ಈ ಆಯಾಮ ಅಭಿವೃದ್ಧಿಯಾದ ದೇಶಗಳಲ್ಲಿ ಹೆಚ್ಚು)

ಶುಶ್ರುಷ ವೃತ್ತಿ – ವೈದ್ಯ ಔಷಧವನ್ನು, ಚಿಕಿತ್ಸೆಯನ್ನೂ ಸೂಚಿಸಿದರೆ ಅದನ್ನು ಪಾಲಿಸುವ, ರೋಗಿಗೆ ಉಪಚಾರ ಮಾಡವ ಜವಾಬ್ದಾರಿ ಶುಶ್ರುಷಕರದು. ದಿನ ಕಳೆದಂತೆ ಶುಶ್ರುಷಕರ ಜವಾಬ್ದಾರಿಯ ಪರಿಧಿಯೊಳಗೆ ಹೆಚ್ಚಿನ ಕೆಲಸಗಳು ಸೇರುತ್ತಿದ್ದು ರೋಗ ವಾಸಿಯಾಗುವ ನಿಟ್ಟಿನಲ್ಲಿ ಅವರ ಪಾತ್ರ ದೊಡ್ಡದಾಗುತ್ತಿದೆ. ಒಂದು ಆಸ್ಪತ್ರೆಯ ಬಗೆಗಿನ ಒಳ್ಳೆಯ ಅಥವಾ ಕೆಟ್ಟ ಅಭಿಪ್ರಾಯಕ್ಕೆ ಆ ಆಸ್ಪತ್ರೆಯಲ್ಲಿ ಲಭ್ಯವಿರುವ ಶುಶ್ರುಷಕರ ತಂಡದ ಗುಣಮಟ್ಟ ಕಾರಣವಾಗಬಲ್ಲದು.

ರೋಗ ನಿರ್ಣಾಯಕಗಳು – ಇತ್ತೀಚೆಗೆ ರೋಗ ನಿರ್ಣಯ ಮತ್ತು ಚಿಕಿತ್ಸೆಯಲ್ಲಿ ಯಾಂತ್ರೀಕೃತ ಪರೀಕ್ಷೆಗಳ ಫಲಿತಾಂಶ ಬಹಳ ಪ್ರಮುಖ ಪಾತ್ರ ವಹಿಸುತ್ತಿದೆ.(ರಕ್ತ ಪರೀಕ್ಷೆಗಳು, ವಿವಿಧ ಸ್ಕ್ಯಾನ್ ಗಳು ಇತ್ಯಾದಿ) ಇದಕ್ಕೆ ಪುರಾವೆ ಆಧಾರಿತ ಚಿಕಿತ್ಸೆ (evidence based medicine) ಎನ್ನುತ್ತೇವೆ. ಸಂದೇಹಿಸಿದ ಸಮಸ್ಯೆ ಪರೀಕ್ಷೆಗಳಲ್ಲಿ ಸಿದ್ದವಾದರೆ, ಚಿಕಿತ್ಸೆಯ ಹಾದಿ ಸುಲಭವಾಗುತ್ತದೆ. ಪರೀಕ್ಷೆಗಳಲ್ಲಿ ಯಾವುದೇ ತೊಂದರೆ ಇಲ್ಲವೆಂದು ಸಿದ್ದವಾದರೂ ರೋಗಿಗೂ ವೈದ್ಯರಿಗೂ ನಿರಾಳವೆನಿಸುತ್ತದೆ. ಚಿಕಿತ್ಸೆಯಲ್ಲಿ ಏಕರೂಪತೆಯನ್ನು ತರುವುದಕ್ಕೂ, ಚಿಕಿತ್ಸೆಯ ಪರಿಣಾಮವನ್ನು ಅಳೆಯುವುದಕ್ಕೂ ಈ ಪರೀಕ್ಷೆಗಳು ಅತ್ಯಂತ ಸಹಕಾರಿಯಾಗಿದೆ. ಜನರಿಗೆ ವೈದ್ಯರ ಮೇಲಿದ್ದ ನಂಬುಗೆ ಮತ್ತು ಅವಲಂಬನೆ ಈಗ ಭಾಗಶಃ ಪರೀಕ್ಷೆಯ ಫಲಿತಾಂಶಗಳಿಗೆ ವರ್ಗಾವಣೆಯಾಗಿದೆ. ಚಿಕಿತ್ಸೆಯ ವೆಚ್ಚವೂ ಹೆಚ್ಚಾಗಿದೆ.

ಪೂರಕ ಶಾಖೆಗಳ ನೇತೃತ್ವ ವೈದ್ಯರದೇ ಆದರೂ ಚಿಕಿತ್ಸೆಯ ಒಟ್ಟು ಪರಿಣಾಮದಲ್ಲಿ (ಒಳ್ಳೆಯ ಮತ್ತು ಕೆಟ್ಟ) ಎಲ್ಲಾ ವಿಭಾಗಗಳ ಕೊಡುಗೆಯೂ ಇರುತ್ತದೆ. ಚಿಕಿತ್ಸೆಯ/ಚಿಕಿತ್ಸಕನ ಮೇಲಿನ ಜನಾಭಿಪ್ರಾಯವನ್ನು ತಂಡದ ಅತ್ಯಂತ ದುರ್ಬಲ ಕೊಂಡಿ ನಿರ್ಧರಿಸಬಲ್ಲದು. ಪೂರಕ ಶಾಖೆಗಳ

ಬೆಳವಣಿಗೆಯಿಂದ ಕೆಲವು ಸಂದರ್ಭಗಳಲ್ಲಿ ವೈದ್ಯರ ಮೇಲಿನ ಅವಲಂಬನೆ ಕಡಿಮೆಯಾಗಿ ರೋಗಿಗೆ ಹಾಗು ವೈದ್ಯರಿಗೆ ಹೆಚ್ಚಿನ ಸ್ವಾತಂತ್ರ್ಯ ದೊರೆತ್ತಿದೆ. ಇತರಡೆ ಅತಿ ನಂಬುಗೆ, ಹೆಚ್ಚಿದ ವೆಚ್ಚ, ಹೆಚ್ಚಿದ ಪ್ರಾತಿನಿಧಿಕ ಜವಾಬ್ದಾರಿ (vicarious liability – ವೈದ್ಯರಿಗೆ) ಇವುಗಳು ಹೊಸ ರೀತಿಯ ಚರ್ಯೆಯನ್ನೂ, ಹೊಸ ವಿಧಾನಗಳನ್ನೂ ಹುಟ್ಟು ಹಾಕುತ್ತಿದೆ.

ಆಧುನಿಕ ವೈದ್ಯಕೀಯ ಅನ್ವೇಷಣೆಗಳು : ಕಾಡುವ ಸಮಸ್ಯೆಗಳಿಗೆ ಪರಿಹಾರ ಹುಡುಕುವುದು ಮಾನವನ ಮೂಲಭೂತ ಲಕ್ಷಣ. ಹಿಂದೆ ರೋಚಕ ವೈಜ್ಞಾನಿಕ ಕಾದಂಬರಿಗಳಲ್ಲಿ ಮಾತ್ರ ಓದಿದ್ದ ಅನೇಕ ವಿಷಯಗಳು (ಅನೇಕ ವೇಳೆ ಕಲ್ಪಿಸಿಯೂ ಇಲ್ಲದಂತಹ) ಅನೇಕ ಅನ್ವೇಷಣೆಗಳು, ಚಿಕಿತ್ಸೆಗಳು ಇಂದು ಲಭ್ಯವಿದೆ. ಇವೆಲ್ಲವೂ ಆಳವಾದ ಸಂಶೋಧನೆಗಳ ಫಲ. ರೋಗಗಳ ಶೀಘ್ರ ಪತ್ತೆ, ಹೊಸದಾದ - ಹೆಚ್ಚು ಪರಿಣಾಮಕಾರಿಯಾದ ಚಿಕಿತ್ಸೆಗಳು, ಅತ್ಯುತ್ತಮ ಮೇಲ್ವಿಚಾರಣಾ ವಿಧಾನಗಳು ರೋಗಿಗಳ ಸ್ಥಿತಿಯನ್ನು ಉತ್ತಮವಾಗಿಸಿದೆ. ವೈದ್ಯರಿಗೆ ಹೊಸ ಕಲಿಕೆ, ವೃತ್ತಿಯಲ್ಲಿ ಅಭಿವೃದ್ಧಿ ಸಾಧ್ಯವಾಗಿದೆ. ಇಂತಹ ಪ್ರಗತಿಯು ತನ್ನೊಡನೆಯೇ ಅನೇಕ ಸಮಸ್ಯೆಗಳನ್ನೂ ತಂದಿದೆ.

ಪ್ರತಿಯೊಂದು ಹೊಸ ಅನ್ವೇಷಣೆಯ ಹಿಂದೆಯೂ ಕಂಪನಿಗಳ ಕೋಟ್ಯಾಂತರ ರೂಪಾಯಿ/ಡಾಲರ್ ಗಳ ಹೂಡಿಕೆ ಇರುತ್ತದೆ. ಪ್ರತಿಯೊಂದಕ್ಕೂ ಹಲವಾರು ಪೇಟೆಂಟ್ ಗಳಿರುತ್ತವೆ. ಹೊಸ ಚಿಕಿತ್ಸಾ ವಿಧಾನವನ್ನು ಕಲಿಯುವುದಕ್ಕಾಗಿ ವೈದ್ಯರಿಗೆ ಹೆಚ್ಚಿನ ತರಬೇತಿ ಬೇಕಾಗುತ್ತದೆ ಸಹಜವಾಗಿಯೇ ಹೊಸ ಚಿಕಿತ್ಸೆಯ ಅಥವಾ ಪರೀಕ್ಷೆಯ ಬೆಲೆ ಹೆಚ್ಚಾಗಿರುತ್ತದೆ. ಇವುಗಳಿಂದ ಚಿಕಿತ್ಸೆಯ ಒಟ್ಟಾರೆ ವೆಚ್ಚ ಗಣನೀಯವಾಗಿ ಹೆಚ್ಚಾಗುತ್ತದೆ.

‘ಲಭ್ಯವಿರುವ ಅತ್ಯಾಧುನಿಕ ಚಿಕಿತ್ಸೆ ಮಾಡುವವರು ಮಾತ್ರ ಉತ್ತಮ ವೈದ್ಯರು’ ಹಾಗು ‘ಅನಗತ್ಯ ಚಿಕಿತ್ಸೆಯನ್ನು ತಮ್ಮ ಲಾಭಕ್ಕಾಗಿ ಸೂಚಿಸುತ್ತಾರೆ’ ಈ ಎರಡು ವಿರುದ್ಧವಾದ ಅರ್ಥವುಳ್ಳ ನಂಬಿಕೆಗಳು. ಆದರೆ ಎರಡೂ ಯೋಚನಾ ಲಹರಿಗಳನ್ನೂ ನಮ್ಮ ಸಮಾಜದಲ್ಲಿ ದಿನವೂ ಕೇಳುತ್ತೇವೆ. ಎರಡೂ ಯೋಚನಾಲಹರಿಗಳ ಪರಿಣಾಮವೂ ಒಂದೇ – ವೈದ್ಯರ ಮೇಲೆ, ಚಿಕಿತ್ಸೆಯ ಮೇಲೆ ಅಪನಂಬಿಕೆ (ಅಪನಂಬಿಕೆ ಚಿಕಿತ್ಸೆಯ ಪರಿಣಾಮವನ್ನು ತಗ್ಗಿಸುತ್ತದೆ ಎಂಬುದು ಸಿದ್ದ ಮಾಡಲ್ಪಟ್ಟ ಸತ್ಯ). ಹೆಚ್ಚಿದ ಚಿಕಿತ್ಸೆಯ ವೆಚ್ಚ, ಬದಲಾದ ಧೋರಣೆಗಳು ಆಧುನಿಕ ಅನ್ವೇಷಣೆಗಳಿಂದ ವೈದ್ಯ ರೋಗಿಯ ಸಂಬಂಧದಲ್ಲಾದ ಪ್ರಮುಖ ಬದಲಾವಣೆಗಳು.

ವೈದ್ಯಕೀಯ ಪರೀಕ್ಷೆಗಳಲ್ಲಿ ಕೃತಕ ಬುದ್ಧಿಮತ್ತೆಯ ಪ್ರವೇಶ : ಹಿಂದೆ ವೈದ್ಯರೇ ಕೈಗೊಳ್ಳುತ್ತಿದ್ದ ಅನೇಕ ವೈಯಕ್ತಿಕ ಪರೀಕ್ಷೆಗಳನ್ನು ಇಂದು ಯಂತ್ರಗಳು ಹೆಚ್ಚು ನಿಖರವಾಗಿ ಮತ್ತು ಪುನಾರಾವರ್ತಿಸಬಹುದಾದ ರೀತಿಯಲ್ಲಿ ಮಾಡುತ್ತಿವೆ. ಉದಾಹರಣೆಗೆ : ಪಲ್ಸ್, ಬ್ಲಡ್ ಪ್ರಶರ್ ಮುಂತಾದ ಮಾಪಕಗಳು, ಹೊಟ್ಟೆಯೊಳಗಿನ ಮಗುವಿನ ಹೃದಯಬಡಿತ ಪರೀಕ್ಷೆ, ರಕ್ತ ಪರೀಕ್ಷೆಗಳು ಇತ್ಯಾದಿ. ಮುಂದೆ ಸಾಗುತ್ತಾ ರಕ್ತದಲ್ಲಿನ ಸಕ್ಕರೆಯ ಮಟ್ಟದ ನಿರಂತರ ಪರೀಕ್ಷೆ ಮತ್ತು ಅದಕ್ಕೆ ತಕ್ಕಂತೆ ಇನ್ಸುಲಿನ್ ಪೂರೈಕೆ, ದೇಹದೊಳಗೆ ಅಳವಡಿಸಬಹುದಾದ ಚಿಪ್ ನಿಂದ ಕ್ಯಾನ್ಸರ್ ನ ಗುರುತುಗಳನ್ನು ಪತ್ತೆಮಾಡುವುದು, ಅಕ್ಷಿಪಟಲದ ಚಿತ್ರದಿಂದ ದೇಹಾರೋಗ್ಯದ ಅಳತೆ ಹೀಗೆ ಅನೇಕಾನೇಕ ವಿಷಯಗಳಲ್ಲಿ ಕೃತಕ ಬುದ್ಧಿಮತ್ತೆಯ ಪ್ರವೇಶವಾಗಲಿದೆ. ವೈದ್ಯ ಮಾನವ ಸಹಜವಾದ ತಪ್ಪುಗಳಿಗೆ ಬದ್ದ. ಯಾವುದೇ ನಿರ್ಣಯಕ್ಕೆ ಹಲವು ಆಲೋಚನೆಗಳ

ಪ್ರಭಾವಕ್ಕೊಳಗಾಗಬಲ್ಲವ. ಆದರೆ ಕೃತಕ ಬುದ್ಧಿಮತ್ತೆಯ ಯಂತ್ರಗಳು ಒಂದೇ ಕೆಲಸವನ್ನು ಪುನಃ ಪುನಃ ಮಾಡುತ್ತಾ, ಪ್ರತಿಯೊಂದು ಘಟನೆಯಿಂದಲೂ ಕಲಿಯುತ್ತಾ ಮುಂದುವರಿಯುತ್ತವೆ. ಸಮಯ ಸರಿದಂತೆ ಕೃತಕ ಬುದ್ಧಿಮತ್ತೆಯ ನಿಖರತೆ ಹೆಚ್ಚುತ್ತಾ ಹೋಗುತ್ತದೆ ಮತ್ತು ಮಾನವ ಸಂಪರ್ಕದ ಆವಶ್ಯಕತೆ ಕಡಿಮೆಯಾಗುತ್ತಾ ಹೋಗುತ್ತದೆ. ಕೃತಕ ಬುದ್ಧಿಮತ್ತೆಯೂ ಕೂಡ ವೈದ್ಯರ ಮೇಲಿನ ಅವಲಂಬನೆಯನ್ನು ಕಡಿಮೆ ಮಾಡುತ್ತದೆ.

ಕಾನೂನಿನ ಬದಲಾವಣೆಗಳು – ಗ್ರಾಹಕ ರಕ್ಷಣಾ ಕಾನೂನಿನಲ್ಲಿ ವೈದ್ಯ ವೃತ್ತಿಯನ್ನು ೧೯೮೬ ರಲ್ಲಿ ಸೇರಿಸಲಾಯಿತು. ಇದೊಂದು ಬದಲಾವಣೆಯಿಂದ ವೈದ್ಯ ರೋಗಿಯ ಸಂಬಂಧವು ಗ್ರಾಹಕ – ವ್ಯಾಪಾರಿಯದಾಗಿ ಬದಲಾಯಿತು. ಅಲ್ಲಿಯವರೆಗೆ ಪ್ರಶ್ನಾತೀತವಾಗಿದ್ದ ವೈದ್ಯರ ನಡೆ – ನಿರ್ಧಾರಗಳು, ನ್ಯಾಯಾಲಯದಲ್ಲಿ ಚರ್ಚೆಗೊಳಪಟ್ಟವು. ವೈದ್ಯರಿಂದ ತೊಂದೆಗೊಳಗಾದ ರೋಗಿ ಸಧ್ಯ ಎಂದು ನಿಟ್ಟಿಸಿರಿಟ್ಟರೆ, ವೈದ್ಯರ ಪ್ರತಿ ನಿರ್ಧಾರದ ಹಿಂದೆಯೂ ಈ ರೋಗಿ ನನ್ನನ್ನು ಕೋರ್ಟಿಗೆಳೆದರೆ ಎಂಬ ಭಯ ಕೆಲಸ ಮಾಡತೊಡಗಿತು. 'ಕಾನೂನು ಕ್ರಮದ ಭೀತಿ' ರೋಗಿಗೆ ತೀರಾ ಅವಶ್ಯವಿರುವಷ್ಟು ಪರೀಕ್ಷೆಗಳನ್ನಷ್ಟೇ ಅಲ್ಲದೆ, ಸುರಕ್ಷೆಗಾಗಿ (ಕಾನೂನಿನಿಂದ, ದೊಂಬಿಯಿಂದ) ಪರೀಕ್ಷೆಗಳನ್ನು ಮಾಡಿಸುವ ಪರಿಪಾಠ ಮೊದಲಾಯಿತು. ರೋಗಿಯನ್ನು ಪರೀಕ್ಷೆ ಮಾಡಲಷ್ಟೆ ಮೀಸಲಾಗಿರುತ್ತಿದ್ದ ವೈದ್ಯರ ಸಮಯ ಈಗ ರೋಗದ ಅಂಶಗಳನ್ನು ಲಿಖಿತ ರೂಪದಲ್ಲಿ ದಾಖಲಿಸುವುದರಲ್ಲಿ ವ್ಯಯವಾಗತೊಡಗಿತು. ಇದೂ ಕೂಡ ವೈದ್ಯ ರೋಗಿಯ ಸಂಬಂಧವನ್ನೂ ಇನ್ನೊಂದು ದಿಕ್ಕಿನಿಂದ ಎಳೆಯತೊಡಗಿತು.

ಬದಲಾಗುತ್ತಿರುವ ಆಸ್ಪತ್ರೆಯ ಆರ್ಥಿಕ ಚಿತ್ರಣ – ಬಿಳಿಯ ಕೋಟಿನ ವೈದ್ಯರು, ಸಮವಸ್ತ್ರದಲ್ಲಿರು ದಾದಿಯರು, ನಗೆ ಮೊಗದ ಸಿಬ್ಬಂದಿ, ಚಿಕಿತ್ಸೆಗಾಗಿ ಕಾದಿರುವ ರೋಗಿಗಳು, ರೋಗಿಗಳ ಪರೀಕ್ಷೆ, ಚಿಕಿತ್ಸೆ ಇವು ಆಸ್ಪತ್ರೆಯ ಮುನ್ನೆಲೆಯ ಚಿತ್ರಗಳು. ಹಿನ್ನೆಲೆಯಲ್ಲಿ ಆಸ್ಪತ್ರೆಯ ಚಟುವಟಿಕೆಗಳು ಬೇರಾವುದೇ ಉದ್ಯಮದಂತೆಯೇ ನಡೆಯುತ್ತವೆ. ಅಸ್ಪತ್ರೆ ಸ್ಥಿರವಾಗಿ ನಿಲ್ಲಬೇಕಾದರೆ ಹಣದ ಪಾತ್ರ ಹಿರಿದಾಗಿರುತ್ತದೆ. ಕಟ್ಟಡ - ಯಂತ್ರೋಪಕರಣಗಳಿಗಾಗಿ ಹೂಡುವ ಹಣ, ಸಿಬ್ಬಂದಿ - ವೈದ್ಯರ ಸಂಬಳ, ಪುನರಾವರ್ತನೆಯಾಗುವ ಬಿಲ್ಲುಗಳು, ಪರವಾನಗಿಗಳಿಗಾಗಿ ಸಲ್ಲಿಸಬೇಕಾದ ಹಣ ಹೀಗೆ. ತಂತ್ರಜ್ಞಾನ, ಅನ್ವೇಷಣೆಗಳು ಹೆಚ್ಚಾದಂತೆ ಅದಕ್ಕೆ ತಕ್ಕ ಉಪಕರಣ, ತರಬೇತಿಗಳಿಗೆ ಮತ್ತಷ್ಟು ಹಣ ವಿನಿಯೋಗಿಸಬೇಕಾಗುತ್ತದೆ. ಹಿಂದೆ ವೈದ್ಯರೇ ಮಾಲೀಕರಾಗಿರುತ್ತಿದ್ದ ಆಸ್ಪತ್ರೆಗಳಲ್ಲಿ ಇಂತಹ ವಿನಿಯೋಗ ಕಷ್ಟವಾಗಿತ್ತು. ಇಂದು ಬೃಹತ್ ಕಂಪನಿಗಳು ಆಸ್ಪತ್ರಗಳಲ್ಲಿ ಹಣ ಹೂಡುತ್ತಿವೆ. ತಂತ್ರಜ್ಞಾನ, ಅನ್ವೇಷಣೆಗಳು ಸುಲಭವಾಗಿ ಜನರಿಗೆ ದಕ್ಕುತ್ತಿವೆ. ವಾರ್ಡುಗಳ ಸ್ಥಿತಿ, ಸಿಬ್ಬಂದಿಗಳ ವರ್ತನೆ ಉತ್ತಮವಾಗುತ್ತಿವೆ. ಅಂತೆಯೇ ಚಿಕಿತ್ಸೆಯ ಒಟ್ಟಾರೆ ವೆಚ್ಚ ಹೆಚ್ಚಾಗುತ್ತಿದೆ. ಅಸ್ಪತ್ರೆಗಳ ದೈನಂದಿನ ನಿರ್ವಹಣೆ ವ್ಯವಸ್ಥಾಪ್ರಬಂಧ ಶಿಕ್ಷಣ ಪಡೆದವರ ತೆಕ್ಕೆಗೆ ಹೋಗುತ್ತಿದೆ. ಆಸ್ಪತ್ರೆಗಳು ಸೇವಾ ಸಂಸ್ಥೆಗಳ ಬದಲಾಗಿ ಸುವ್ಯವಸ್ಥಿತ ಉದ್ಯಮಗಳಾಗುತ್ತಿವೆ. ಅಂತೆಯೆ ರೋಗಿ ವೈದ್ಯರ ಒಡನಾಟ ಉದ್ಯಮಗಳಲ್ಲಿರುವಂತೆಯೆ ಬದಲಾಗುತ್ತಿದೆ.

ಬದಲಾಗುತ್ತಿರುವ ಪರಿಣಿತಿಗಳ ಮೇಲಿನ ಒತ್ತು – ಸುಮಾರು ೪ ದಶಕಗಳ ಹಿಂದೆ ದೇಶದ ವೈದ್ಯರಲ್ಲಿ ಬಹುಪಾಲು ಸಾಮಾನ್ಯ ವೈದ್ಯಕೀಯ ಶಿಕ್ಷಣ ಪಡೆದಿರುತ್ತಿದ್ದರು. ವಿಶೇಷಜ್ಞರ ಸಂಖ್ಯೆ ಬಹಳ ಕಡಿಮೆ ಇರುತ್ತಿತ್ತು. ಇಂದು ಈ ಅನುಪಾತ ಬದಲಾಗಿದೆ. ಮುಖ್ಯವಾಗಿ ನಗರಗಳಲ್ಲಿ. ಅನೇಕ ಆಸ್ಪತ್ರೆಗಳಲ್ಲಿ ವಿಶೇಷಜ್ಞರ ಅಭಿಪ್ರಾಯಕ್ಕೆ ಹೆಚ್ಚು ಒತ್ತು ಕೊಡಲಾಗುತ್ತದೆ. ರೋಗಿಗಳಲ್ಲಿಯೂ ವಿಶೇಷಜ್ಞರ ಸಲಹೆ ಇಲ್ಲದಿದ್ದರೆ ಚಿಕಿತ್ಸೆಯೇ ಸಮರ್ಪಕವಾಗಿಲ್ಲ ಎಂಬ ಮನಸ್ಥಿತಿ ಬೆಳೆಯುತ್ತಿದೆ. ಇದರಿಂದಾಗಿ ಸಾಮಾನ್ಯ ವೈದ್ಯನ ಪ್ರಾಮುಖ್ಯತೆ ಕಡಿಮೆಯಾಗುತ್ತಿದೆ.
ಸದ್ಯಕ್ಕೆ ನಮ್ಮ ದೇಶದಲ್ಲಿ ಸುವ್ಯವಸ್ಥಿತ ಶಿಫಾರಸು ಆಧಾರಿತ ಸಮಾಲೋಚನೆ (reference based consultation) ಇಲ್ಲ. ಪ್ರತಿಯೊಬ್ಬರೂ ತಮಗೆ ಬೇಕಾದ ವೈದ್ಯರನ್ನು ಕಾಣಬಹುದಾಗಿದೆ. ಇದರಿಂದಾಗಿ ಅನಾವಶ್ಯಕ ಸಮಾಲೊಚನೆಗಳು, ಹೆಚ್ಚಿದ ವೆಚ್ಚ, ಪ್ರತಿಯೊಬ್ಬ ವೈದ್ಯರಿಗೂ ಅತಿಯಾದ ಕೆಲಸದೊತ್ತಡ, ಕಡಿಮೆಯಾದ ಆರ್ಥಿಕ ಪ್ರತಿಫಲ ಉಂಟಾಗಿ, ಒಟ್ಟಾರೆ ಸಾರ್ವತ್ರಿಕ ಅಸಮಾಧಾನದ ವಾತಾವರಣ ಮೂಡಿದೆ.

ಸಾಂಪ್ರದಾಯಿಕವಾಗಿ ವೈದ್ಯ-ರೋಗಿ ಸಂಬಂಧದಲ್ಲಿ ವೈದ್ಯನಿಗೆ ನಿಯಂತ್ರಕ ಸ್ಥಾನ. ಮೇಲೆ ಚರ್ಚಿಸಿದ ಅನೇಕ ಬದಲಾವಣೆಗಳಿಂದ ಚಿಕಿತ್ಸೆಯಲ್ಲಿ ವೈದ್ಯನ ನಿಯಂತ್ರಣ ಕಡಿಮೆಯಾಗಿ ರೋಗಿಗಳ ಪಾಲ್ಗೊಳ್ಳುವಿಕೆ ಹೆಚ್ಚಾಗುತ್ತಿದೆ. ಸಹಜವಾಗಿಯೇ ವೈದ್ಯನಿಗೆ ಏನನ್ನೂ ಕಳೆದುಕೊಂಡ ಭಾವ, ರೋಗಿಗೆ ಸ್ವಲ್ಪ ಮಟ್ಟಿಗಾದರೂ ಹಿಡಿತ ಸಾಧಿಸಿದ ಹಿಗ್ಗು. ಎಷ್ಟೇ ಬದಲಾವಣೆಗಳು ಬಂದರೂ ಚಿಕಿತ್ಸೆಯು ಸಂಪೂರ್ಣವಾಗಿ ಯಂತ್ರಧಾರಿತವಾಗುವವರೆಗೆ ರೋಗಗಳ ಉಪಶಮನಕ್ಕಾಗಿ ವೈದ್ಯರು ಬೇಕು. ಕಪ್ಪು ಕಲೆಗಳಂತೆ, ತಿಳಿದೂ ಹಣ, ಅಧಿಕಾರದ ಆಸೆಗಾಗಿ ರೋಗಿಗಳ ಜೀವನವನ್ನು ಬಲಿಕೊಡುವ ವೈದ್ಯರು ಇದ್ದಾರೆ. ತಮ್ಮದೇ ಸ್ವಾರ್ಥ ಉದ್ದೇಶಗಳಿಗಾಗಿ ನಿಷ್ಠೆಯಿಂದ ಕೆಲಸ ಮಾಡಿದ ವೈದ್ಯರ ಜೀವನವನ್ನು ಹಾಳುಗೆಡವಿದ ರೋಗಿಗಳೂ ಇದ್ದಾರೆ. ಇಂತಹ ವ್ಯಕ್ತಿಗಳು ಅಪವಾದಗಳೇ ಹೊರತು ನಿಯಮಗಳಲ್ಲ.

ಇವೇ ಅಲ್ಲದೆ ಮತ್ತೊಂದು ಅತಿಮುಖ್ಯ ಅಂಶ ಬೆಳಕಿಗೆ ತರಬೇಕಿದೆ. ಈ ಅಂಶವು ಚರ್ಚಿತವಾಗಿಲ್ಲ. ವೈದ್ಯರೂ ರೋಗಿಗಳೂ ಈ ಅಂಶವನ್ನು ಮುಜುಗರದ ವಿಷಯವೆಂದು ಗಮನಿಸದೆ ನಿರ್ಲಕ್ಷಿಸಿದ್ದಾರೆ. ವೈದ್ಯರಲ್ಲಿಯ ಮನುಷ್ಯ ಸಹಜ ಲೋಪದೋಷಗಳು - ಪ್ರತಿಯೊಬ್ಬ ಮನುಷ್ಯರಂತೆ ವೈದ್ಯರೂ ಅರಿಷ್ಡವರ್ಗಗಳ ಪ್ರಭಾವಕ್ಕೆ ಬದ್ದರು. ಹೆಚ್ಚಿನ ಸ್ಥಾನಮಾನದ ಬಯಕೆ, ಹೆಚ್ಚಿನ ಹಣಕಾಸು ಪರಿಸ್ಥಿತಿಯ ಬಯಕೆ ಅನೇಕ ನಿರ್ಧಾರಗಳನ್ನು ಬದಲಿಸಬಲ್ಲದು. ಇದರ ಪರಿಣಾಮ ನೇರ ರೋಗಿಗಳ ಮೇಲೆ. ಪ್ರತಿಯೊಬ್ಬ ವೈದ್ಯರಿಗೂ ತಜ್ಞತೆಯ ಮಿತಿ ಇರುತ್ತದೆ. ಇದರಿಂದಾಗಿ ಯಾವ ಪ್ರಭಾವವಿಲ್ಲದೆಯೂ ರೋಗ ನಿದಾನದಲ್ಲಿ, ಚಿಕಿತ್ಸೆಯಲ್ಲಿ ತಪ್ಪಾಗುತ್ತದೆ. ಇದು ಹೆದರಿಕೆಯನ್ನುಂಟುಮಾಡಿದರೂ (ನಿಮಗೆ ಮಾತ್ರವಲ್ಲ ನಮಗೂ) ಸತ್ಯ. ಈ ಅಂಶವನ್ನು ನಿರ್ಲಕ್ಷಿಸಿ ವೈದ್ಯರಿಂದ ಪರಿಪೂರ್ಣ ನಿರ್ದೋಷಿ ವ್ಯಕ್ತಿತ್ವವನ್ನು, ನಡತೆಯನ್ನು ನಿರೀಕ್ಷಿಸುವುದು ತಪ್ಪಾಗುತ್ತದೆ. ಈ ತಪ್ಪು ರೋಗಿಗಳು ಮಾತ್ರವಲ್ಲದೆ ವೈದ್ಯರೂ ಮಾಡುತ್ತಾರೆ. ತಮ್ಮಿಂದ ಮತ್ತು ತಮ್ಮ ಸಹೋದ್ಯೋಗಿಗಳಿಂದ ಪರಿಪೂರ್ಣ ನಿರ್ದೋಷಿ ವ್ಯಕ್ತಿತ್ವವನ್ನೂ ನಡತೆಯನ್ನೂ ನಿರೀಕ್ಷಿಸುತ್ತಾರೆ. ಇದು ನಿರಾಶೆ, ಅಸಮಾಧಾನಗಳಿಗೆ ಹೇಳಿಮಾಡಿಸಿದ ಹೂರಣ.

ಉತ್ತಮ ವೈದ್ಯ ರೋಗಿಯ ಸಂಬಂಧದ ಮೂಲಾಧಾರ ನಂಬಿಕೆ. ಹಿಂಸೆಯ, ಭಯದ ವಾತಾವರಣದಲ್ಲಿ ಯಾವ ವೈದ್ಯರಿಗೂ ಕೆಲಸ ಮಾಡಲಾಗದು. ತನ್ನನ್ನು ಮೋಸಗೊಳಿಸಬಹುದು ಎಂಬ ಭಾವನೆ ಮೂಡಿಸುವ ವಾತಾವರಣದಲ್ಲಿ ರೋಗಿಯ ಸಮಸ್ಯೆ ಪರಿಹಾರವಾಗದು. ಬದಲಾಗುತ್ತಿರುವ ಈ ಸೂಕ್ಷ್ಮ ಸಂಬಂಧದ ಹೊಳಹುಗಳನ್ನು ಅರ್ಥಮಾಡಿಕೊಂಡೇ ನಾವು ಮುಂದಡಿ ಇಡಬೇಕಾಗಿದೆ. ನಂಬಿಕೆಯ ಭದ್ರ ಅಡಿಪಾಯದೊಂದಿಗೆ ನಾವು ಪ್ರಗತಿಯನ್ನು ಸ್ವಾಗತಿಸಬೇಕಾಗಿದೆ. ಅದರೊಂದಿಗೆ ಬೆಳೆಯಬೇಕಿದೆ.

ಕವನ - ನಿವೇಶನ; ನಮ್ಮಪ್ಪ ಅಮ್ಮ	**ಶ್ರೀಮತಿ ಶೀಲಾ ಅರಕಲಗೂಡ್**

೧. ನಿವೇಶನ

ಖಾಲಿ ಇದೆ ನಿವೇಶನ ನನ್ನ ಹೆಸರಿನಲ್ಲಿ
ಬಹುಕಾಲದಿಂದಿರುವೆ ನಾನು ಅದರಲ್ಲಿ
ಈ ಮೊದಲು ನಾನಲ್ಲಿ ಕಟ್ಟಿದ್ದ ಮನೆಗಳೆಲ್ಲಾ
ಬಿದ್ದು ಮತ್ತೊಮ್ಮೆ ನಿವೇಶನ ಖಾಲಿ ಖಾಲಿ

ನಿತ್ಯ ಕಟ್ಟುತ್ತೇನೆ ಸುಂದರ ಗುಡಿಸಲೊಂದನ್ನು
ಆನಂದಿಸುತ್ತೇನೆ ನಾನದರಲ್ಲಿ ಪ್ರತಿಕ್ಷಣವನ್ನು
ನಾನೇ ಕೆಡವಿ ಬೀಳಿಸುತ್ತೇನೆ ಅದನ್ನು ರಾತ್ರಿಗೆ
ಹೊಸ ಗುಡಿಸಲನ್ನು ಕಟ್ಟುವ ಹೊಸ ಹುರುಪಿಗೆ

ಒಂದೊಂದು ದಿನದ ಗುಡಿಸಲು ಒಂದೊಂದು ರೀತಿ
ಪುಟ್ಟದಾದರೂ ಅದರ ಭಾವ ನವನವೀನ ಕಾಂತಿ

ಪ್ರತಿದಿನ ಪಡುವೆ ಗೃಹಪ್ರವೇಶದ ಸಂಭ್ರಮ
ಆದರೂ ಕಟ್ಟಲಾಗುತ್ತಿಲ್ಲ ಸುಸ್ಥಿರ ಭವ್ಯ ಧಾಮ

ಕಟ್ಟಲಾಗದಿದ್ದರೆ ಚಿಂತೆ ಏನಿಲ್ಲ ನನಗೆ
ಬಿಟ್ಟು ಬಿಡುವೆನದನು ನನಗೆ ಕೊಟ್ಟವನಿಗೆ
ಕೊಡಲವನು ಆಗ ಬೇರೊಂದು ನಿವೇಶನ
ಹೊಸ ಶಕ್ತಿಯಿಂದೆದ್ದು ಕಟ್ಟುವೆನು ಭವ್ಯ ಭವನ

***

ನಮ್ಮಪ್ಪ ಅಮ್ಮ

ನೋವೆಂದರೇನೆಂದು ಗೊತ್ತಾಗದಂತೆ
ಗೊತ್ತಾದರೂ ಅದು ಮಧುರವಾಗಿರುವಂತೆ
ನೋಡಿಕೊಂಡರು ಹೇಗೆ ನಮ್ಮಪ್ಪ ಅಮ್ಮ

ಹಸಿವೆ ಏನೆಂದು ಅರಿವಾಗದಂತೆ
ಅರಿವಾದರೂ ತಕ್ಷಣವೇ ಹೊಟ್ಟೆ ತುಂಬುವಂತೆ
ಸಾಕಿಬಿಟ್ಟರು ಹೇಗೆ ನಮ್ಮಪ್ಪ ಅಮ್ಮ

ಬಟ್ಟೆ ಬರೆ ನಮಗೆಲ್ಲ ಕಡಿಮೆ ಇದ್ದರೂ
ಇರುವುದನೆ ಹೊಸದಾಗಿ ಮಾರ್ಪಡಿಸಿ
ಖುಷಿಯ ಕೊಟ್ಟರು ಹೇಗೆ ನಮ್ಮಪ್ಪ ಅಮ್ಮ

ಅದು ಬೇಕು ಇದು ಬೇಕು ಎಂದೆಲ್ಲ ಕಾಡಿದರೂ
ಇಲ್ಲವೆನ್ನದೆ ನಾಳೆಗದನು ನೂಕಿ
ಹೊಸ ಬಯಕೆ ಚಿಗುರಿಸಿದರು ಹೇಗೆ ನಮ್ಮಪ್ಪ ಅಮ್ಮ

ದುಡ್ಡು ಕಾಸಿನ ಬಯಕೆ ನಮ್ಮೊಳಗೆ ಮೂಡಿದರೂ
ದುಡ್ಡಿಲ್ಲವೆಂದು ಹೇಳದೆಯೆ ನಮಗೆ
ಪ್ರೀತಿಯಿಂದಲೆ ಅದನು ಮರೆಸಿದರು ಹೇಗೆ ನಮ್ಮಪ್ಪ ಅಮ್ಮ

ವಿದ್ಯೆ ಬುದ್ಧಿಯ ಕಲಿಸಿ ಓದಿನಾಸಕ್ತಿ ಬೆಳೆಸಿ
ಅಶಕ್ತರೆನಿಸಿದ ನಮ್ಮೆಲ್ಲರನ್ನು
ಶಕ್ತರಾಗಿಸಿದರು ಹೇಗೆ ನಮ್ಮಪ್ಪ ಅಮ್ಮ

ಕುಂಟುತ್ತ ಬೀಳುತ್ತ ಆನಂದದಿಂದೇಳುತ್ತ
ಸಮಾಜಮುಖಿಯಾಗಿ ನಿಲುವಂತೆ ಮಾಡುತ್ತ
ದೇವರಿಳೆಗಿಳಿದಂತೆ ಹೀಗೆ ನಮ್ಮಪ್ಪ ಅಮ್ಮ

ಲೇಖನ - ಅನ್ಯಗ್ರಹವಾಸಿಗಳ `ಮಹಾಸಂಪರ್ಕ'	ಶ್ರೀಮತಿ(ಡಾ) ಜಯಂತಿ ಮನೋಹರ್

ಮಹಾಭಾರತವನ್ನು ಆಧುನಿಕ ಶಿಸ್ತುಗಳ ಮೂಲಕ ಅರ್ಥಮಾಡಿಕೊಂಡು ನಿರೂಪಿಸುವುದು ಭಾರತೀಯ ಸಾಹಿತ್ಯಕ್ಕೆ ಹೊಸತೇನಲ್ಲ. ಎಸ್ .ಎಲ್ .ಭೈರಪ್ಪ ಅವರು ಇದನ್ನು `ಪರ್ವ' ಕೃತಿಯಲ್ಲಿ ತೋರಿಸಿದ್ದಾರೆ. ಮರಾಠಿಯಿಂದ ಕನ್ನಡಕ್ಕೆ ಬಂದ ಇರಾವತಿ ಕರ್ವೆ ಅವರ `ಯುಗಾಂತ' ಮತ್ತೊಂದು ರೀತಿಯ ಪ್ರಯತ್ನ. ಕೆ.ಎಸ್.ನಾರಾಯಣಾಚಾರ್ಯ ಅವರ ಮಹಾಭಾರತದ ಪಾತ್ರಗಳ ವಿಶ್ಲೇಷಣೆ ಪ್ರಸಿದ್ಧವಾಗಿದೆ. ತಾಳಮದ್ದಳೆಗಳಲ್ಲಿ ಮಹಾಭಾರತದ ಪಾತ್ರಗಳನ್ನು ವಿವಿಧ ದೃಷ್ಟಿಕೋನಗಳಲ್ಲಿ ವಿಶ್ಲೇಷಿಸುವ ಬಹಳ ದೊಡ್ಡ ಪರಂಪರೆಯಿದೆ. ಇವೆಲ್ಲವುಗಳ ಪಟ್ಟಿಗೆ `ಮನು' ಎಂಬ ಕಾವ್ಯ ನಾಮದಲ್ಲಿ ಪರಿಚಿತರಾಗಿರುವ ಪಿ.ಎನ್.ರಂಗನ್ ರವರು ಬರೆದಿರುವ `ಮಾಹಾಸಂಪರ್ಕ'ದ ಎರಡು ಸಂಪುಟಗಳಾದ `ತರ್ಕ' ಮತ್ತು `ಸಾಧ್ಯ'ಗಳು ಅಲ್ಲಿರುವ ಹಾಗೂ ಅಲ್ಲಿಲ್ಲದಿರುವ ಹಲವಾರು ತರ್ಕ-ಸಾಧ್ಯಗಳನ್ನು ಚಿಂತನಶೀಲರಲ್ಲಿ ಪ್ರಚೋದಿಸುವಲ್ಲಿ ಯಶಸ್ವಿಯಾಗುತ್ತದೆ. ರಂಗನ್ ರವರು ತಮ್ಮ ಪ್ರತಿಭೆಯೊಂದಿಗೆ ಕಾಲಗರ್ಭದ ಒಳಹೊಕ್ಕು, ಅನ್ಯಗ್ರಹ ವಾಸಿಗಳ ಭೂ - ಸಂಪರ್ಕದ ಪರಿಕಲ್ಪನೆಯನ್ನು ಮೇಲೆತ್ತಿ, ಓದುಗರನ್ನು ಬೇರೊಂದು ಲೋಕಕ್ಕೆ ಕೊಂಡೊಯ್ಯುತ್ತಾರೆ.

`ತರ್ಕ' - 'ಸಾಧ್ಯ' ಸಂಪುಟಗಳು

ಚಿರಪರಿಚಿತವಾದ ಮಹಾಭಾರತದ ಕಥೆಗೆ ಸಂಪೂರ್ಣ ಹೊಸ ಆಯಾಮವನ್ನು ಕೊಟ್ಟಿರುವ `ಸಾಧ್ಯ' ನಿಜಕ್ಕೂ ಸಾಧ್ಯವೇ ಎಂದುಕೊಂಡು ಓದುತ್ತಾ ಹೋಗುವಾಗ ಅದರ ರೋಚಕ ಶೈಲಿಗೆ ಮಾರುಹೋಗದವರು ಇರಲಾರರು. ರಂಗನ್ ಸಾಧ್ಯವೆಂದು ಸಾಧಿಸುತ್ತಿರುವ ಹೊಸ `ತರ್ಕ'ಕ್ಕೆ ಅವರಿಗೆ ಸ್ಫೂರ್ತಿಯಿತ್ತ ಸ್ವಿಸ್ ತತ್ತ್ವಜ್ಞಾನಿ ಎರಿಕ್ ವಾನ್ ಡ್ಯಾನಿಕೇರ್, ಐದು ದಶಕಗಳ ಹಿಂದೆ 'Chariots of the Gods' ಎನ್ನುವ ಪುಸ್ತಕವನ್ನು ಪ್ರಕಟಿಸಿದ. ಪ್ರಪಂಚದ ನಾನಾ ಕಡೆ ವ್ಯಾಪಕ ಸಂಚಾರ ಕೈಗೊಂಡು ಪುರಾತನ ಶಿಲ್ಪಗಳನ್ನು, ಗುಹೆಗಳಲ್ಲಿನ ಚಿತ್ರಗಳನ್ನೂ ಕಂಡು ವಿವಿಧೆಡೆ ಪ್ರಚಲಿತವಿರುವ ಪೌರಾಣಿಕ ಕಥಾನಕಗಳನ್ನು ವಿಶ್ಲೇಷಿಸಿ ಬೇರೊಂದು ಲೋಕದಿಂದ ನಮ್ಮ ಭೂಮಿಗೆ ಬಹಳ ಹಿಂದೆ ನಮ್ಮಂತೆಯೇ ಕಾಣುತ್ತಿದ್ದ ಜನರು ಬಂದಿದ್ದರೆಂದೂ; ಹಾಗೂ ಅವರನ್ನೇ ನಮ್ಮ ಪೂರ್ವಿಕರು ದೇವತೆಗಳೆಂದು ಕರೆದರೆಂದೂ ಅವನು ಪ್ರತಿಪಾದಿಸುತ್ತಾನೆ. ಈ ಅನ್ಯಗ್ರಹ ಜೀವಿಗಳು ಇಲ್ಲಿಗೆ ಬಂದಿಳಿದ ವಾಹನಗಳ ಚಿತ್ರಗಳು, ನಮಗೆ ಈಗ ಪರಿಚಿತವಾಗಿರುವ space shipನ ಆಕೃತಿಯನ್ನು ಹೋಲುತ್ತವೆಂದು ಹೇಳುತ್ತಾ. ತನ್ನ ವಾದಕ್ಕೆ ಪುಷ್ಟಿಕೊಡಲು, ಬೈಬಲ್ಲಿನ ಹಳೇ ಒಡಂಬಡಿಕೆಯ ಹೇಳಿಕೆಗಳನ್ನು ಉಲ್ಲೇಖಿಸಿದ್ದನ್ನು ಕ್ರಿಶ್ಚಿಯನ್ ಧಾರ್ಮಿಕ ವಲಯಗಳು ತೀವ್ರವಾಗಿ ವಿರೋಧಿಸಿದ್ದವು. ಅವನ ಈ ವಾದವನ್ನು ತಳ್ಳಿ ಹಾಕುವ ಪುಸ್ತಕಗಳೂ ಪ್ರಕಟಣೆಗೊಂಡವು ಹಾಗೆಯೇ ಅವನ ಈ ರೋಚಕ ಹೊಸ ಪರಿಕಲ್ಪನೆಯನ್ನು ಮೆಚ್ಚಿದವರೂ ಎಲ್ಲಡೆ ಇದ್ದಾರೆ.

ದೇವತೆಗಳು - ಅನ್ಯಗ್ರಹ ಜೀವಿಗಳು

ಆಕಾಶನೌಕೆಯಲ್ಲಿ ಭೂಮಿಗೆ ಬಂದಿಳಿದ ಅನ್ಯಗ್ರಹ ವಾಸಿಗಳನ್ನೇ ನಮ್ಮ ಪೂರ್ವಜರು `ದೇವತೆಗಳು' ಎಂದು ಕರೆದರು ಎಂದು ಹೇಳುವ ಎರಿಕ್ ವಾನ್‌ನ ವಾದದಿಂದ ಪ್ರಭಾವಿತರಾದ ರಂಗನ್ ಮಹಾಭಾರತದ ಕಥಾನಕವನ್ನು ಈ ವಾದದ ಹಿನ್ನಲೆಯಲ್ಲಿ ಕಾಣುತ್ತಾರೆ. ಬೃಹತ್ ವಿಶ್ವದ ಇನ್ನ್ಯಾವುದೋ ಸೌರಮಂಡಲದಲ್ಲಿ ಭೂಮಿಯಂತೆಯೇ ಇರುವ ಗ್ರಹದಲ್ಲಿ ನಮ್ಮಂತೆಯೇ ಕಾಣುವ ಜನರು ಆಕಾಶನೌಕೆಯಲ್ಲಿ ಅಂತರ್ತಾರಾ ಪ್ರಯಾಣ ಮಾಡಿ ಹಿಮಾಲಯದಲ್ಲಿ ಕ್ರಿ.ಪೂ. 3208ರಲ್ಲಿ ಬಂದಿಳಿದರು ಎಂದು ಕರಾರುವಾಕ್ಕಾಗಿ ಹೇಳುತ್ತಾರೆ! ಭಾರತೀಯ ಚಿಂತನೆಯಲ್ಲಿ ಕಾಣುವ ದೇವತೆಗಳು ಹಾಗೂ ವೇದ ಕಾಲದಿಂದಲೂ ಪ್ರಸಿದ್ಧರಾಗಿರುವ ಋಷಿಗಳು, ಪ್ರಧಾನ ಗಗನಯಾತ್ರಿಯಾದ ಮಹರ್ಷಿ ವೇದವ್ಯಾಸರೊಂದಿಗೆ ಆ ಗಗನನೌಕೆಯಲ್ಲಿ ಬಂದಿಳಿದರು. ತಮ್ಮ ವಿಜ್ಞಾನ ತಂತ್ರಜ್ಞಾನಗಳನ್ನು ಇಲ್ಲಿನವರಿಗೆ ಹೇಳಿಕೊಟ್ಟರು ಎಂದು ಅವರ ಕಥನ ಮುಂದುವರೆಯುತ್ತದೆ. ಹೀಗೆ, ಮಾನವರೊಂದಿಗೆ, ಹಲವಾರು ವೈಜ್ಞಾನಿಕ ಪ್ರಯೋಗಗಳನ್ನು ಮಾಡಲೆಂದೇ ಬಂದಿಳಿದ ಈ ಅನ್ಯಗ್ರಹ ವಾಸಿಗಳ ಭೂಸಂಪರ್ಕವೇ ರಂಗನ್ ರವರ `ಮಹಾಸಂಪರ್ಕ'. ಮಹಾಭಾರತದಲ್ಲಿ ಕಾಣಸಿಗುವ ಹಲವು ವೈಚಿತ್ರಗಳು ಈ ಅನ್ಯಗ್ರಹ ವಾಸಿಗಳು ಇಲ್ಲಿ ನಡೆಸಿದ ಪ್ರಯೋಗಗಳಿಗೆ ಸಾಕ್ಷಿಯಾಗಿರುವುದನ್ನು ತಮ್ಮ ರೋಚಕ ಶೈಲಿಯಿಂದ ಹೇಳುವ ರಂಗನ್ ಓದುಗರನ್ನು ಬೇರೊಂದು ಲೋಕಕ್ಕೆ ಕರೆದೊಯ್ಯುತ್ತಾರೆ.

ಈ ಅನ್ಯಗ್ರಹದ ಪ್ರಾಜ್ಞರು ಮಹಾಭಾರತದ ಘಟನಾವಳಿಯ ಉದ್ದಕ್ಕೂ ನೂರು ವರ್ಷಗಳ ಕಾಲ ಇಲ್ಲಿನವರೊಂದಿಗೆ ಬೆರೆತು, ಲೈಂಗಿಕ ಸಂಪರ್ಕವೂ ಸೇರಿದಂತೆ ಹಲವಾರು ಪ್ರಯೋಗಗಳನ್ನು ಮಾಡಿ ಕೊನೆಗೆ, ತಮ್ಮಂತೆಯೇ ದೇವತ್ವಕ್ಕೆ ಏರಿದ ಪಾಂಡವ ಶ್ರೇಷ್ಠ ಧರ್ಮರಾಜನೊಂದಿಗೆ ಹಿಮಾಲಯದ ಬದರಿ ಕ್ಷೇತ್ರದಲ್ಲಿರುವ ಸ್ವರ್ಗಾರೋಹಣ ಸ್ಥಳದಿಂದಲೇ ಆಕಾಶ ನೌಕೆಯಲ್ಲಿ

ತಮ್ಮ ಲೋಕಕ್ಕೆ ಮರಳಿದರು ಎನ್ನುವ ರಂಗನ್ ಅಲ್ಲೇ ಹತ್ತಿರದಲ್ಲಿರುವ ವ್ಯಾಸಗುಹೆ ಮುಂತಾದ ಸ್ಥಳಗಳಲ್ಲಿ ಉತ್ಖನನ ಸಂಶೋಧನೆಗಳು ನಡೆದಲ್ಲಿ ಆಕಾಶನೌಕೆಯು ಅಲ್ಲಿಗೆ ಬಂದು ಹೋದ ಭೌತಿಕ ಕುರುಹುಗಳೂ ದೊರಯಬಹುದು ಎಂದು ಆಶಿಸುತ್ತಾರೆ.

ಭೀಷ್ಮ, ದ್ರೋಣ, ಕೃಪ, ಪಾಂಡವರು, ದ್ರೌಪದಿ, ಧೃಷ್ಟದ್ಯುಮ್ನ ಮುಂತಾದ ಮಹಾಭಾರತದ ಪ್ರಮುಖರೆಲ್ಲರೂ ದೇವ - ಮಾನವ ಸಂಸರ್ಗದಿಂದ ಹುಟ್ಟಿದವರು. ಕೃಷ್ಣ ಅನ್ಯಗ್ರಹವಾಸಿ ಜನರ ಮಗು. ಕೃಷ್ಣನ ಬಾಲ್ಯದಲ್ಲಿ ನಡೆದ ಪವಾಡಗಳು, ಕುರು ಸಭೆಯಲ್ಲಿ ನಡೆದ ದೌಪದೀ ವಸ್ತ್ರಾಪಹರಣದ ಸಂದರ್ಭದಲ್ಲಿ ಹಾಗೂ ಯುದ್ಧ ಪ್ರಸಂಗದಲ್ಲಿ ಜರುಗಿದ ಅದ್ಭುತ ಘಟನೆಗಳೆಲ್ಲವೂ ಈ ದೇವಜನರಿಂದ ನಡೆದದ್ದು. ಅವರಿಗೆ ನೀರಿನ ಮೇಲೆ ನಡೆಯುವುದು ಸಹಜ ಕ್ರಿಯೆ. ಇಲ್ಲಿನ ಜನರಿಗಿಂತ ನಾಲ್ಕು ಪಟ್ಟು ಹೆಚ್ಚಿನ ಆಯಸ್ಸು ಅವರದು ಎಂದೆಲ್ಲಾ ಹೇಳಿ ತಮ್ಮ ಮಹಾಭಾರತದ ಮರುಕಥನವಾದ `ಸಾಧ್ಯ'ದಲ್ಲಿ ಆಸಾಧ್ಯವಾದ ಪ್ರಾವೀಣ್ಯವನ್ನು ಮನು ತೋರಿಸಿದ್ದಾರೆ.

ಋಗ್ವೇದ - ಮಹಾಭಾರತ

ರಂಗನ್ ಪ್ರಸ್ತಾಪಿಸಿರುವ ಋಗ್ವೇದ ಮಂತ್ರಗಳ ರಚನೆ ಹಾಗೂ ಕಾಲಗಳು ಬಹಳಷ್ಟು ತೊಡಕುಗಳನ್ನು ಸೃಷ್ಟಿಸುತ್ತವೆ. ಆಕಾಶ ನೌಕೆಯಲ್ಲಿ ಬಂದಿಳಿದ ಋಷಿಗಳೇ ಇಲ್ಲಿದ್ದ ಅನಾಗರಿಕ, ಅಜ್ಞಾನಿ ಜನರಿಗೆ ವೈಜ್ಞಾನಿಕ ಸತ್ಯವನ್ನು ಹೇಳಲು ಕಥಾರೂಪದಲ್ಲಿ ಋಗ್ವೇದವನ್ನು ರಚಿಸಿದರು ಎನ್ನುತ್ತಾರೆ ರಂಗನ್ರವರು. ನಿಗೂಢ ತತ್ತ್ವಗಳನ್ನು ಒಳಗೊಂಡ, ಧ್ವನ್ಯಾತ್ಮಕ ಅದ್ಭುತ ರಚನೆಗಳಾದ ಋಗ್ವೇದದ ಬಗೆಗಿನ

ಅವರ ಈ ನಿಲುವು ಆಶ್ಚರ್ಯ ತರಿಸುತ್ತದೆ. ತಮ್ಮ ವಾದವನ್ನು ಸಮರ್ಥಿಸಲು ಅವರು, ಪಂಚತಂತ್ರದ ಕಥಾರೂಪದ ಉಪದೇಶವನ್ನೂ ಉಲ್ಲೇಖಿಸುತ್ತಾರೆ. ಆದರೆ ಅಲ್ಲಿರುವುದು ವಾಚ್ಯವಾದ ನೀತಿ ಬೋಧಕ ಕಥೆಗಳು. ಇಲ್ಲಿ ಅಂದರೆ ಋಗ್ವೇದದಲ್ಲಿ ನಾವು ಕಾಣುವುದು, ಸಾಹಿತ್ಯದ ಉನ್ನತಾಭ್ಯಾಸಿಗೆ ಮಾತ್ರ ನಿಲಕುವ ಧ್ವನ್ಯಾತ್ಮಕ ಪ್ರತಿಮೆಗಳು. ಇಲ್ಲಿ ಅಗ್ನಿ, ಇಂದ್ರಾದಿ ದೇವತೆಗಳ ಸರ್ವವ್ಯಾಪಿ ಸರ್ವಜ್ಞ, ಸರ್ವಶಕ್ತ ಗುಣ ಲಕ್ಷಣಗಳು ಕಾಣಿಸಿದರೆ, ಮಹಾಭಾರತದ ಕಾಲಕ್ಕೆ ಇದೇ ದೇವತೆಗಳು ಮಾನವರಂತೆ ರಾಗ - ದ್ವೇಷಗಳಿಗೆ ಒಳಗಾಗಿ ವ್ಯವಹರಿಸುವ ಶಕ್ತಿಗಳಾಗಿ ಮಾರ್ಪಟ್ಟಿರುವುದು ಕಾಣುತ್ತದೆ. ಅಷ್ಟೇ ಅಲ್ಲದೆ ಋಗ್ವೇದವು ಸ್ವಾತಂತ್ರ್ಯ, ಸಮಾನತೆ. ಭ್ರಾತೃತ್ವ ಭಾವಗಳ ಉನ್ನತ ಜೀವನ ಚಿತ್ರಣ ಕೊಡುತ್ತದೆ. ಅಲ್ಲಿ, ಆಯ್ಕೆ ಸ್ವಾತಂತ್ರ್ಯವಿದ್ದ ವರ್ಣ ವ್ಯವಸ್ಥೆಯಂತಹ ಮೌಲ್ಯಗಳು ಕಂಡರೆ, ಮಹಾಭಾರತದ ಕಾಲಕ್ಕಾಗಲೇ ಜನನದಿಂದ ನಿರ್ಧರಿತವಾಗುವ ಜಾತಿವ್ಯವಸ್ಥೆ ಗಟ್ಟಿಗೊಂಡಿದ್ದು

ಕಾಣಸಿಗುತ್ತದೆ. ಇವೆಲ್ಲಾ ಏನೇ ಇದ್ದರೂ, ಜ್ಞಾನ ಪ್ರದಾನ ಮಾಡುವ ಮಹಾಸಂಪರ್ಕವು ನಮ್ಮ ದೇಶದಲ್ಲಿ ಅನಾದಿಕಾಲದಿಂದಲೂ ನಡೆಯುತ್ತಲೇ ಬಂದಿರುವುದನ್ನು ನಾವಿಲ್ಲಿ ಸ್ಮರಿಸಬಹುದು. ನಮ್ಮ ಮನಸ್ಸಿಗೆ ಇರುವ ಶಕ್ತಿಯಲ್ಲಿ ಕೇವಲ, ಶೇ.10 ರಷ್ಟು ಅಂಶವನ್ನು ನಾವಿಂದು ಬಳಸುತ್ತಿದ್ದೇವೆ ಎನ್ನುವ ವೈಜ್ಞಾನಿಕ/ವೈದ್ಯಕೀಯ ನಿಲುವಿನ ಹಿನ್ನೆಲೆಯಲ್ಲಿ ನೋಡಿದಾಗ, ಇದನ್ನು ಹೆಚ್ಚು ಉಪಯೋಗಿಸುವ

`ಸಿದ್ಧಿ' ದೊರೆತಾಗ ಜ್ಞಾನ ಪ್ರವಾಹವು ದೇವತ್ವದಿಂದ - ಮಾನವರಿಗೆ ಹರಿದು ಬರುವುದು ಎಂಬುದನ್ನು ವೇದಕಾಲೀನ ಋಷಿಗಳು ಹಾಗೂ 20ನೇ ಶತಮಾನದ ಅನುಭಾವಿಗಳಲ್ಲಿ ಕಾಣುತ್ತಿದ್ದೇವೆ.

ನಮ್ಮ ನಡುವಯೇ ವಿಜ್ಞಾನಿಗಳು ತಮ್ಮ ಮನೋಬಲದಿಂದ ತೀವ್ರ ಚಿಂತನೆಗಳಿಂದ ಹಾಗೂ ಪ್ರಯೋಗಗಳಿಂದ ಅಗಾಧ ಪ್ರಗತಿಯನ್ನು ಸಾಧಿಸಿರುವುದನ್ನು ಇಂತಹ ಒಂದು ದೈವಿಕ ದರ್ಶನವೆನ್ನಬಹುದು. ಋಗ್ವೇದದಲ್ಲಿ ಬರುವ ಹಲವಾರು ಋಷಿಗಳು ತಾವು ಸಿದ್ಧಿಸಿಕೊಂಡ ಮನೋಬಲದಿಂದ ಸತ್ಯದರ್ಶನವನ್ನು ಮಾಡಿದರು ಹಾಗೂ ಅದನ್ನೇ ತಮ್ಮ ಮಾತುಗಳಲ್ಲಿ ಹೇಳಿದರು

ಎಂದಿರುವುದನ್ನೇ ದೇವ - ಮಾನವರ ಮಹಾಸಂಪರ್ಕ ಎನ್ನಬಹುದು. ಹೀಗೆ, ಪೂರ್ಣಪ್ರಮಾಣದ ಸಿದ್ಧಿಯನ್ನು ಪಡೆದ ಜನಾಂಗ ನಮ್ಮ ದೇಶದಲ್ಲೇ ವಿಕಸಿತವಾಗಿ ಬೇರೆಡೆ ಹೋಗಿರಬಹುದು ಅಥವಾ ಇದೇ ಭೂಮಿಯ ಇನ್ನೊಂದು ಭಾಗದಲ್ಲಿ ಇಂತಹುದೇ ಸಿದ್ಧಿಯನ್ನು ಸಾಧಿಸಿ ಜನರು ಭರತ ಖಂಡದ ಪ್ರದೇಶಕ್ಕೆ ವಿಮಾನ ಅಥವಾ ಹೆಲಿಕಾಪ್ಟನರ್ಂತಹ ಸಾಧನಗಳಿಂದ ಬಂದಿರಬಹುದು.

ಎರಿಕ್ವಾನ್ ಡ್ಯಾನಿಕೆರ್, ತನ್ನ `In search of ancient Gods' ನಲ್ಲಿ ಅತ್ಯುನ್ನತ ಎತ್ತರಕ್ಕೇರಿದ್ದ ಜನಾಂಗವಾದ ಮಾಯನ್ನರು ಹೇಳುವ 10,000 ವರ್ಷಗಳ ಇತಿಹಾಸವನ್ನು ಹಾಗೂ ಭಾರತೀಯ ಜ್ಞಾನ ವಾಹಿನಿಯಲ್ಲಿ ದೀರ್ಘ ಕಾಲಾವಧಿಯಲ್ಲಿ ಕಾಣುವ ಅಂತರ್ಗ್ರಹಯಾನದ ಪ್ರಸಂಗಗಳನ್ನು ಪ್ರಸ್ತಾಪಿಸುತ್ತಾನೆ. ಈ `ಮಯರು' ನಮ್ಮ ಮಹಾಭಾರತಾದಿ ಗ್ರಂಥಗಳಲ್ಲಿಯೂ ಕಾಣುತ್ತಾರೆ. ಖಾಂಡವವನದ ಬೆಂಕಿಯಿಂದ ತಪ್ಪಿಸಿಕೊಂಡು ಬಂದ ಶಿಲ್ಪಿ 'ಮಯ' ಅದ್ಭುತವಾದ ಭವನಗಳನ್ನು ಪಾಂಡವರಿಗೆ ನಿರ್ಮಿಸಿದ ಸಂಗತಿಯನ್ನು ಈ ದೃಷ್ಟಿಯಿಂದಲೂ ನೋಡಬಹುದು. ಈ ಜನಾಂಗದವರು ಪಾತಾಲ ಲೋಕಗಳಲ್ಲಿ ವಾಸಿಸುತ್ತಿದ್ದ ಉಲ್ಲೇಖ ಹಲವೆಡೆ ಕಾಣುತ್ತದೆ.

ಒಟ್ಟಿನಲ್ಲಿ ಪಿ.ಎಸ್.ರಂಗನ್ (ಮನು) ರವರ `ಮಹಾಸಂಪರ್ಕವು ಚಿಂತಕರ ಚಿಂತನೆಯನ್ನು ಹರಿತಗೊಳಿಸಿ ಹೊಸ ಪರಿಕಲ್ಪನೆಯತ್ತ ಸಾಗುತ್ತದೆ. ಖಂಡಿತಕ್ಕೂ ಇದು ಚಿಂತನಯೋಗ್ಯ ಹಾಗೂ ಸಂಗ್ರಹಯೋಗ್ಯ ಕೃತಿಯಾಗಿದೆ.

ಲೇಖನ - ಹಕ್ಕಿ ಹಬ್ಬ- 2021	**ಗುರುರಾಜ ಶಾಸ್ತ್ರಿ**

ಪ್ರತಿ ವರ್ಷ ರಾಜ್ಯ ಪ್ರವಾಸೋದ್ಯಮ ಇಲಾಖೆಯ ಒಂದು ಅಂಗವಾದ ಇಕೋ ಟೂರಿಸಮ್ ಸಂಸ್ಥೆ , ರಾಜ್ಯ ಸರ್ಕಾರದ ಅರಣ್ಯ ಇಲಾಖೆ ಹಾಗೂ ಜಂಗಲ್ ಲಾಡ್ಜಸ್ ಸಂಸ್ಥೆ ಒಂದಾಗಿ ಸೇರಿ ಕರ್ನಾಟಕ ಹಕ್ಕಿ ಹಬ್ಬ ಆಚರಿಸುತ್ತಾರೆ. ಇದು ಸಾಮಾನ್ಯವಾಗಿ ಜನವರಿ ಆಥವಾ ಫೆಬ್ರವರಿಯಲ್ಲಿ

ನಡೆಯುತ್ತದೆ. ದೇಶದ ಮೂಲೆ ಮೂಲೆಗಳಿಂದ ಆಸಕ್ತರು ಈ ಹಬ್ಬಕ್ಕೆ ರೂಪಾಯಿ 750ರಿಂದ 1000ದ ವರೆಗೆ ಶುಲ್ಕ ನೀಡಿ ನೊಂದಣಿ ಮಾಡಿಕೊಳ್ಳುತ್ತಾರೆ.

ಈ ಹಕ್ಕಿ ಹಬ್ಬ ಮೊದಲು ಪ್ರಾರಂಭವಾದದ್ದು ಕರ್ನಾಟಕದಲ್ಲೇ. ಈಗ ಬೇರೆ ಬೇರೆ ರಾಜ್ಯ ಸರ್ಕಾರಗಳು ಇದರಿಂದ ಸಿಗುವ ಪ್ರಚಾರವನ್ನು ನೋಡಿ, ತಮ್ಮ ರಾಜ್ಯಗಳಲ್ಲೂ ಹಕ್ಕಿ ಹಬ್ಬ ಪ್ರಾರಂಭಿಸಿದ್ದಾರೆ. ಕರ್ನಾಟಕ ರಾಜ್ಯವು ಕಳೆದ 7 ವರ್ಷಗಳಿಂದ ಸತತವಾಗಿ ಹಕ್ಕಿ ಹಬ್ಬ ಆಚರಿಸುತ್ತಾ ಬಂದಿದೆ. ನಮ್ಮ ರಾಜ್ಯದಲ್ಲಿರುವ ಕಾಡುಗಳ ಬಗ್ಗೆ ಮಾಹಿತಿ ನೀಡಲು, ತಜ್ಞರಿಂದ ಪಕ್ಷಿಗಳ ಬಗ್ಗೆ ನಡೆಯುತ್ತಿರುವ ಸಂಶೋಧನೆಗಳ ಬಗ್ಗೆ ಉಪನ್ಯಾಸ, ಪಕ್ಷಿಗಳಿಗೆ ಅನುಕೂಲವಾಗುವಂತೆ ವಾತಾವರಣ ಸೃಷ್ಠಿ ಮಾಡುವಲ್ಲಿ ನಮ್ಮೆಲ್ಲರ ಜವಾಬ್ದಾರಿ ಹಾಗೂ ಆ ಸ್ಥಳಗಳಲ್ಲಿ ವೀಕ್ಷಿಸಬಹುದಾದ ಪಕ್ಷಿಗಳ ವಿವರವನ್ನು ಪ್ರತಿನಿಧಿಗಳಿಂದ ಕಲೆ ಹಾಕುವುದೇ ಈ ಹಕ್ಕಿ ಹಬ್ಬದ ಮೂಲ ಉದ್ದೇಶ.

ಈಗ ಅಂದರೆ ಜನವರಿ 5, 2021ರಿಂದ ಜನವರಿ ೭, 2021ರವರೆಗೆ ನಾನು ಮುಗಿಸಿ ಬಂದದ್ದು ನಮ್ಮ ರಾಜ್ಯದ ೭ನೇ ಹಕ್ಕಿ ಹಬ್ಬ. ನಮ್ಮ ರಾಜ್ಯದಲ್ಲಿ ಕಾಡಿಗೇನು ಕೊರತೆ ಇಲ್ಲ, ಹಾಗೆಯೇ ಕಾಡಿನ ಉತ್ತಮ ನಿರ್ವಹಣೆಯಲ್ಲಿ ಕರ್ನಾಟಕದ ಅರಣ್ಯ ಇಲಾಖೆ ದೇಶದಲ್ಲೇ ಅಗ್ರಸ್ಥಾನದಲ್ಲಿದೆ. ಸಾಮಾನ್ಯವಾಗಿ , ಕಾಡು ಹತ್ತಿರದಲ್ಲೇ ಇರುವ ಊರುಗಳನ್ನು ಹಕ್ಕಿ ಹಬ್ಬಕ್ಕೆ ಆಯ್ಕೆ ಮಾಡುತ್ತಾರೆ. ಕೆಲವೊಮ್ಮೆ ಕಾಡಿಲ್ಲದಿದ್ದರೂ, ಆ ಊರಿನಲ್ಲಿ ವಿಧವಿಧವಾದ ಹಕ್ಕಿಗಳ ವೀಕ್ಷಣೆ ಇರುವ ಮಾಹಿತಿ ಮೇಲೆಯೂ ಜಾಗಗಳನ್ನು ಆರಿಸಲಾಗುತ್ತದೆ.

ಈ ವರ್ಷ ಹಕ್ಕಿ ಹಬ್ಬ ನಡೆದದ್ದು ಬಿಳಿಗಿರಿರಂಗನ ಬೆಟ್ಟದಲ್ಲಿ. ಡಿಸೆಂಬರ್ 2ನೇ ವಾರದಲ್ಲಿ ಆಸಕ್ತರಿಗೆ ಪ್ರತಿನಿಧಿಗಳಾಗಿ ನೊಂದಾಯಿಸಿಕೊಳ್ಳಲು ಕರೆ ನೀಡಲಾಯಿತು. ಹಿಂದೆಲ್ಲಾ ಸುಮಾರು ನೂರರಿಂದ ನೂರೈವತ್ತು ಪ್ರತಿನಿಧಿಗಳಿಗೆ ಅವಕಾಶ ಸಿಗುತ್ತಿತ್ತು. ಆದರೆ ಕೋವಿಡ್‌ನಿಂದಾಗಿ ಈ ವರ್ಷ ಕೇವಲ 50 ಪ್ರತಿನಿಧಿಗಳಿಗೆ ಮಾತ್ರ ಅವಕಾಶವಿತ್ತು. ಎರಡೇ ದಿನದಲ್ಲಿ ನೊಂದಣಿ ಮುಗಿದುಹೋಗಿತ್ತು. ನೊಂದಣಿ ಶುಲ್ಕ 750 ರೂಪಾಯಿಗಳು, ಇದರಲ್ಲಿ ವಸತಿ ಹಾಗೂ ಬೆಂಗಳೂರಿನಿಂದ ನಾವು ಹೋಗಿ ಬರುವ ಖರ್ಚು ಸೇರುವುದಿಲ್ಲ.

ಪ್ರತಿನಿಧಿಗಳು ಹಾಗೂ ಅಯೋಜಕರನ್ನು ಸೇರಿಸಿ ಒಂದು ವಾಟ್ಸಾಪ್ ಗುಂಪು ಮಾಡಲಾಯಿತು. ಇದರಲ್ಲಿ ನಮಗೆ ಯಾವ ಸಮಯಕ್ಕೆ ಎಲ್ಲಿಗೆ ಬರಬೇಕು ಎಂಬ ಮಾಹಿತಿ ಹಾಗೂ ಮೂರು ದಿನದ ಪೂರ್ಣ ಕಾರ್ಯಕ್ರಮಗಳ ವಿವರಣೆ ನೀಡಲಾಯಿತು. ನಾವು ಉಳಿದುಕೊಳ್ಳಲು ಮುಂಗಡವಾಗಿ ಕೋಣೆಗಳನ್ನು ಕಾಯ್ದಿರಿಸಲು ಅಲ್ಲೇ ಸಮೀಪದಲ್ಲಿ ಇರುವ ಹೋಟೆಲ್‌ಗಳ ಹೆಸರು ಹಾಗೂ ಅದರ ಫೋನ್ ನಂಬರ್ ವಾಟ್ಸಾಪಿನಲ್ಲಿ ನೀಡಿದರು. ನಾವು ಗಿರಿದರ್ಶಿನಿ ಎಂಬ ಹೋಟಲ್ಲಿನಲ್ಲಿ ರೂಮ್ ಕಾಯ್ದಿರಿಸಿದೆವು.

5ನೇ ತಾರೀಖು ಬೆಳಗ್ಗೆ 6 ಗಂಟೆಗೆ ನಾವು 10 ಜನ ಗೆಳೆಯರು ಬೆಂಗಳೂರಿನಿಂದ ಹೊರಟು 10.30ಕ್ಕೆ ಬಿಳಿಗಿರಿ ರಂಗನ ಬೆಟ್ಟದಲ್ಲಿರುವ ಮೊರಾರ್ಜಿ ದೇಸಾಯಿ ವಸತಿ ಶಾಲೆ ತಲುಪಿದೆವು.

ಪ್ರತಿ ಪ್ರತಿನಿಧಿಗೆ ಒಂದು ಟೀಶರ್ಟ್, ಮಾಸ್ಕ್, ಒಂದು ಟೋಪಿ ಹಾಗೂ ಒಂದು ಬಟ್ಟೆಯ ಬ್ಯಾಗ್ ನೀಡಲಾಯಿತು. ಮದ್ಯಾಹ್ನ 2 ಗಂಟೆಯವರೆಗೆ ಉದ್ಘಾಟನೆ, ಸ್ಥಳೀಯ ಸಚಿವರುಗಳಿಂದ ಹಾಗೂ ಹಿರಿಯ ಅರಣ್ಯ ಅಧಿಕಾರಿಗಳಿಂದ ಭಾಷಣಗಳು ನಂತರ ಊಟ. 3 ಗಂಟೆಗೆ ಆ ದಿನದ ಉಪನ್ಯಾಸಗಳು ಪ್ರಾರಂಭವಾದವು. ಈ ಉಪನ್ಯಾಸಗಳಲ್ಲಿ ನನಗೆ ತುಂಬಾ ಇಷ್ಟವಾದದ್ದು ಉತ್ತರ ಭಾರತದಿಂದ ಬಂದು ಬಿಳಿಗಿರಿ ರಂಗನ ಬೆಟ್ಟದಲ್ಲಿ ನೆಲೆಸಿ ಪಕ್ಷಿಗಳ ಅಧ್ಯಯನ ಹಾಗೂ ಅಲ್ಲೇ ಕಾಡಿನಲ್ಲಿ ನೆಲೆಸಿರುವ ಸೋಲಿಗರು ಹಾಗೂ ಪಕ್ಷಿಗಳ ಜೊತೆಗಿನ ಅವರ ಸಂಬಂಧದ ಅಧ್ಯಯನ ಮಾಡಿದ ಡಾ ಸಮೀರಾ ಅಗ್ನಿಹೋತ್ರಿಯವರದು. ಕನ್ನಡವನ್ನಷ್ಟೇ ಅಲ್ಲದೇ ಸೋಲಿಗರ ಭಾಷೆಯನ್ನು ಸ್ಪಷ್ಟವಾಗಿ ಮಾತನಾಡಿದ್ದು ಅವರ ಉಪನ್ಯಾಸಕ್ಕೆ ಇನ್ನೂ ಹೆಚ್ಚು ಮೆರಗು ನೀಡಿತು. 6 ಗಂಟೆಗೆ ಎಲ್ಲಾ ಉಪನ್ಯಾಸಗಳು ಮುಗಿದವು, ೬ ಜನ ಪ್ರತಿನಿಧಿಗಳನ್ನು ಹೊಂದುವ 8 ಗುಂಪುಗಳನ್ನು ಆಯೋಜಕರು ಮಾಡಿದರು. ನನ್ನ ಮತ್ತು ನನ್ನ ಗೆಳೆಯರದು ಒಂದನೇ ಗುಂಪು. ರಾತ್ರಿ 8.30ಕ್ಕೆ ಮಯೂರ ಹೋಟಲ್ಲಿನಲ್ಲಿ ಊಟ ನಂತರ ಎಲ್ಲರೂ ನಮ್ಮ ನಮ್ಮ ಹೋಟಲ್‌ಗೆ ತೆರಳಿದೆವು.

ಮಾರನೇ ದಿನ ಅಂದರೆ ಜನವರಿ ೬ ಬೆಳಗ್ಗೆ ಆರು ಗಂಟೆಗೆ ಎಲ್ಲಾ ಮಯೂರ ಹೋಟೆಲ್ ಬಳಿ ಸೇರಿದೆವು. ನಮಗಾಗಿ ತಿಂಡಿಯ ಅಂದರೆ ಚಿತ್ರಾನ್ನದ ಪಾರ್ಸೆಲ್ ಗಳು ತಯಾರಿಯಾಗಿತ್ತು. ಜೊತೆಗೆ ಒಂದು ಬಾಳೆ ಹಣ್ಣು ಹಾಗೂ ಒಂದು ಸೇಬು. ಆ ದಿನ ನಮ್ಮ ಗುಂಪು ಪುರಾನಿ ಗೇಟ್ ಎಂಬ ಜಾಗಕ್ಕೆ ಹಾಗಬೇಕಾಯಿತು. ಗೇಟ್ ಹತ್ತಿರದ ವರೆಗೆ ನಮಗೆ ಅರಣ್ಯ ಇಲಾಖೆಯ ಜೀಪಿನಲ್ಲಿ ಡ್ರಾಪ್ ಕೊಟ್ಟರು. ಅಲ್ಲಿಂದ ನಮ್ಮ ಜೊತೆ 2 ಗನಮ್ಯಾನಗಳು (ಗನ್ ಸಹಿತ) ಹಾಗೂ ಇಬ್ಬರು ಫಾರೆಸ್ಟ್ ಗಾರ್ಡ್‌ಗಳು ಸೇರಿಕೊಂಡರು. ಕಾಡಿನಲ್ಲಿ ಸುಮಾರು 4 ಕಿಲೋಮೀಟರ್ ಪಕ್ಷಿ ವೀಕ್ಷಣೆ ಮಾಡುತ್ತಾ ನಡಿಗೆ. ಮತ್ತೆ, ಬಂದ ದಾರಿಯಲ್ಲೇ ವಾಪಸ್ ಗೇಟಿನ ಬಳಿಗೆ. ಬಿಳಿಗಿರಿ ರಂಗನ ಬೆಟ್ಟ ಮುಖ್ಯವಾಗಿ ಆನೆ, ಕರಡಿಗಳು ಹಾಗೂ ಹುಲಿಗಳು ವಾಸ ಮಾಡುವ ಕಾಡು. ಹಾಗಾಗಿ ಗನಮ್ಯಾನ್ ಜೊತೆಯಲ್ಲೇ ನಾವು ನಡೆಯಬೇಕು. ಹಾಗೇನಾದರು ಯಾವುದಾದರು ಪ್ರಾಣಿ ಬಂದರೆ ಅವರು ಗಾಳಿಯಲ್ಲಿ ಗುಂಡು ಹಾರಿಸುತ್ತಾರೆ ಆಗ ಪ್ರಾಣಿಗಳು ದೂರ ಓಡುತ್ತದೆ. ಆದರೆ ಅದೃಷ್ಟವಶಾತ್ ಆ ಸನ್ನಿವೇಶ ಯಾವ ಗುಂಪಿಗೂ ಈ ವರ್ಷ ಬರಲಿಲ್ಲ.

ಮಧ್ಯಾಹ್ನ 1 ಗಂಟೆಗೆ ಮಯೂರ ಹೋಟಲ್ಗೆ ವಾಪಸ ಬಂದು ಊಟ ಮುಗಿಸಿ ನಾವು ನೋಡಿದ ಪಕ್ಷಿಗಳ ಹೆಸರನ್ನು ಬಿಳಿ ಹಾಳೆಯಲ್ಲಿ ಬರೆದು ಅರಣ್ಯ ಅಧಿಕಾರಿಗಳಿಗೆ ನೀಡಿದೆವು. ಸಾಮಾನ್ಯವಾಗಿ ಎಲ್ಲಾ ಪ್ರತಿನಿಧಿಗಳು ಪಕ್ಷಿ ವೀಕ್ಷಣೆಯಲ್ಲಿ ಪರಿಣಿತಿ ಹೊಂದಿರುತ್ತಾರೆ ಹಾಗಾಗಿ ಪಕ್ಷಿಗಳ ಹೆಸರು ನೀಡುವುದು ಕಷ್ಟವಾಗುವುದಿಲ್ಲ. ಅಷ್ಟೇ ಅಲ್ಲದೆ ಆ ಪೂರ್ತಿ ಅರಣ್ಯ ಪ್ರದೇಶದಲ್ಲಿ ಸಿಗಬಹುದಾದ ಸುಮಾರು 200 ಪಕ್ಷಿಗಳ ಹೆಸರು ನಮ್ಮ ಬಳಿ ಇರುತ್ತದೆ. ಮದ್ಯಾಹ್ನ ಒಂದು ಗಂಟೆಗಳ ಕಾಲ ವಿಶ್ರಾಂತಿ ತೆಗೆದುಕೊಂಡೆವು.

2.30ಕ್ಕೆ ಮತ್ತೆ ಪಕ್ಷಿ ವೀಕ್ಷಣೆ ಪ್ರಾರಂಭ. ಈ ಭಾರಿ ಬೇರೆ ಕಡೆ ಅಂದರೆ ಕೃಷ್ಣಯ್ಯನ ಕಟ್ಟೆ ಡ್ಯಾಮ್ ಬಳಿ ನಮ್ಮ ಗುಂಪಿಗೆ ಹೋಗಲು ಹೇಳಿದರು. ಜೀಪಿನಲ್ಲಿ ಸುಮಾರು 15 ಕಿಲೋ ಮೀಟರ ಪ್ರಯಾಣ, ನಂತರೆ ಡ್ಯಾಮಿನ ನೀರಿನ ಸುತ್ತ ನಮ್ಮ ಪಕ್ಷಿ ವೀಕ್ಷಣೆ. ಒಟ್ಟಾರೆ ಸುಮಾರು 8 ಕಿಲೋ

ಮೀಟರ್ ನಡಿಗೆ, ಜಲ ಪಕ್ಷಿಗಳ ಸಮೇತ ಇನ್ನೂ ಹಲವಾರು ಪಕ್ಷಿಗಳನ್ನು ವೀಕ್ಷಿಸಿದೆವು ಹಾಗೂ ಕ್ಯಾಮೆರಾದಲ್ಲಿ ಕ್ಲಿಕ್ಕಿಸಿದೆವು.

೬ ಗಂಟೆಗೆ ಕತ್ತಲಾಗುತ್ತಾ ಬಂತು, ಜೀಪ್ ಹತ್ತಿ ಮಯೂರ ಹೋಟಲ್ ಕಡೆ ನಮ್ಮ ಪ್ರಯಾಣ. ಜೀಪ್ ಹತ್ತಿದ 5 ನಿಮಿಷದಲ್ಲಿ ಮಳೆ ಪ್ರಾರಂಭವಾಯಿತು. ಕಾಡಿನಲ್ಲಿ ಮಳೆ ಎಂದರೆ ನಮ್ಮ ಬೆಂಗಳೂರಿನ ಮಳೆಗೆ ಐದು ಪಟ್ಟು ರಭಸ ಹೆಚ್ಚು. ಅದೃಷ್ಟವೆಂದರೆ ಮಳೆ ಪ್ರಾರಂಭವಾಗುವ ಹೊತ್ತಿಗೆ ನಾವು ಜೀಪಿನಲ್ಲಿ ಕುಳಿತಾಗಿತ್ತು. ಬೇರೆ ಜಾಗಗಳಿಗೆ ಹೋಗಿದ್ದ ಸಾಕಷ್ಟು ಪ್ರತಿನಿಧಿಗಳು ಮಳೆಯಲ್ಲಿ ನೆಂದು ತೊಪ್ಪೆಯಾದರು. ರಾತ್ರಿ 8.30ಕ್ಕೆ ಊಟ ಮುಗಿಸಿ ಮತ್ತೆ ನಮ್ಮ ಹೋಟಲ್‌ಗೆ ವಾಪಸ್.

ಮಾರನೇ ದಿನ ಅಂದರೆ ಜನವರಿ 7ರಂದು ಮತ್ತೆ ಮಯೂರ ಹೋಟಲ್ ಬಳಿ ಸೇರಿದೆವು. ತಿಂಡಿ ಪಾರ್ಸಲ್ ತಯಾರಿತ್ತು. ಅದನ್ನು ತೆಗೆದುಕೊಂಡು ನಾವು ಸುಮಾರು 25 ಕಿಲೋಮಿಟರ್ ದೂರವಿರುವ ಬೆಲ್ಲಾ ಎಂಬ ಕಾಡು ಪ್ರದೇಶಕ್ಕೆ ಹೋದೆವು. ಈ ದಿನ ನಮಗೆ ಕೇವಲ ಟಾರ್ ರಸ್ತೆಯ ಮೇಲೆ ನಡಗೆ. ಆದರೆ ಪಕ್ಷಿಗಳ ಸದ್ದು ಬಿಟು ಇನ್ನೇನು ಕೇಳಿಸುತ್ತಿರಲಿಲ್ಲ. ತುಂತುರು ಮಳೆ ಬರುತ್ತಿದ್ದಿದ್ದರಿಂದ ನಾವು ಸಾಕಷ್ಟು ಹೊತ್ತು ನಮ್ಮ ಕ್ಯಾಮೆರವನ್ನು ಹೊರಗೆ ತೆಗೆಯಲೇ ಇಲ್ಲ. ಕೇವಲ ಬೈನಾಕ್ಯುಲರ್ ಇಂದ ಪಕ್ಷಿ ವೀಕ್ಷಣೆ ಮಾಡುತ್ತಾ ಹೋದೆವು. ನಿಧಾನವಾಗಿ ಪಕ್ಷಿ ವೀಕ್ಷಣೆ ಮಾಡುತ್ತಾ 6 ಕಿಲೋ ಮೀಟರ್ ನಡೆಯಲು ಸುಮಾರು 3 ಗಂಟೆಗಳು ಬೇಕಾಯಿತು. ಅಂದು ಹನ್ನೊಂದು ಗಂಟೆಗೆ ನಮ್ಮ ಪಕ್ಷಿವೀಕ್ಷಣೆ ಮುಗಿಯಿತು.

ಮಯೂರ ಹೋಟಲ್‌ಗೆ ಹಿಂದಿರುಗಿ ನಾವು ನೋಡಿದ ಪಕ್ಷಿಗಳ ಹೆಸರನ್ನು ಬರೆದುಕೊಟ್ಟಲ್ಲಿಗೆ ಈ ವರ್ಷದ ಹಕ್ಕಿ ಹಬ್ಬ ಮುಗಿಯಿತು. ಎಲ್ಲರಿಗೂ ಧನ್ಯವಾದಗಳನ್ನು ಹೇಳಿ ನಾವು ತಂಗಿದ್ದ ಹೋಟಲಿನಲ್ಲಿ ನಮ್ಮ ಖರ್ಚಿನಲ್ಲಿ ಊಟ ಮಾಡಿ ಬೆಂಗಳೂರಿಗೆ ಹಿಂದಿರುಗಿದೆವು.

ಈ ಹಕ್ಕಿ ಹಬ್ಬದಲ್ಲಿ ನಾವು ನಡೆದ ಹಾದಿಗಳಲ್ಲಿ ಅರಣ್ಯ ಇಲಾಖೆಯವರಿಗೆ ಬಿಟ್ಟು ಸಾಮಾನ್ಯ ಜನರಿಗೆ ನಡೆಯಲು ಅವಕಾಶವಿರುವುದಿಲ್ಲ. ಆದರೆ ಹಕ್ಕಿ ಹಬ್ಬ ಇಂತಹ ಜಾಗಗಳನ್ನು ನೋಡಲು ಅವಕಾಶ ಕಲ್ಪಿಸಿಕೊಡುತ್ತದೆ. ಹಕ್ಕಿ ಹಬ್ಬ ಮುಗಿಸಿ ಮತ್ತೆ ಮುಂದಿನ ಹಕ್ಕಿ ಹಬ್ಬ ಎಲ್ಲಿ ಮಾಡುತ್ತಾರೆಂದು ಯೋಚಿಸುತ್ತಾ ನಮ್ಮ ಪಯಣ ಮುಂದೆ ಸಾಗುತ್ತದೆ.

ಕವನ - ಹರ್ಷತಾರದ ವರ್ಷ	**ವೆಂಕಟೇಶ ಮೂರ್ತಿ ಎಮ್ ಜಿ**

ಕಳೆಯಿತೊಂದು ವರ್ಷ ಇದು ತಾರಲಿಲ್ಲ ಹರ್ಷ
ಸದ್ದಿಲ್ಲದೆ ಸುದ್ದಿ ಮಾಡಿದ ಕರೋನ
ತೋರಿಸಿತು ಎಲ್ಲೆಡೆ ತನ್ನ ರುದ್ರ ನರ್ತನ
ಪಡೆಯಿತು ಲಕ್ಷಾಂತರ ಮಂದಿಯ ಪ್ರಾಣ
ವಿಶ್ವಾದ್ಯಂತ ಕೇಳಿಸಿತು ಜನರ ರೋದನ

ಕರೋನ ತಂದಿತು ಹಲವು ಹತ್ತು ಬದಲಾವಣೆ
ಬಡವ ಬಲ್ಲಿದರೆಲ್ಲರು ಪಟ್ಟರು ಬವಣೆ
ಬಹು ಸಮಯ ಬೇಕಾಯಿತು ಹೆಮ್ಮಾರಿಯನೆದುರಿಸಲು
ಇನ್ನೂ ಸಾಧ್ಯವಾಗಿಲ್ಲ ಆಕೆಯನು ಹಿಮ್ಮೆಟ್ಟಿಸಲು

ಗೆಳೆಯರು, ಸಂಬಂಧಿಕರು ಮೊದಲಾದವರನ್ನು ಸಂಧಿಸುವಂತಿಲ್ಲ
ಮದುವೆಯಂತಹ ಸಂಭ್ರಮೋತ್ಸವಗಳಲ್ಲಿ ಪಾಲ್ಗೊಳ್ಳುವಂತಿಲ್ಲ
ಅಂತ್ಯ ಸಂಸ್ಕಾರದಲ್ಲಿ ಅಂತಿಮ ದರ್ಶನ ಪಡೆಯುವಂತಿಲ್ಲ
ಸಭೆ, ಸಮಾರಂಭಗಳಲ್ಲಿ ಸಾರ್ವಜನಿಕರು ಭಾಗವಹಿಸುವಂತಿಲ್ಲ

ಊರಿಂದೂರಿನ ಪಯಣಕೆ ನಿರ್ಬಂಧ
ವಿದೇಶ ಪ್ರಯಾಣ ಮಾಡಲು ನ್ಷಿಷೇಧ
ಸಿನಿಮ, ನಾಟಕಗಳ ಪ್ರದರ್ಶನ ಎಂದಿನಂತಿಲ್ಲ
ಪ್ರದರ್ಶನವಾದರು ವೀಕ್ಷಣೆಗೆ ಜನಸಂದಣಿ ಇಲ್ಲ

ಶಾಲಾ ಕಾಲೇಜುಗಳು ಎಂದಿನಂತೆ ನಡೆಯುತ್ತಿಲ್ಲ
ಜಾಲ-ತಾಣದ ತರಗತಿಗಳು ಸಮಂಜಸವಾಗಿಲ್ಲ
ಶೈಕ್ಷಣಿಕ ವರ್ಷ ಮುಗಿದರೂ ಶಿಕ್ಷಕರ ಸಂಪರ್ಕವಿಲ್ಲ
ವಿದ್ಯಾರ್ಥಿಗಳ ಸಮಯ ಈ ರೀತಿ ಕಳೆಯುತಿಹುದಲ್ಲ
ಊಟೋಪಚಾರಗಳಿಗೆ ಹೋಟೆಲ್ಗಳಿಗೂ ನಿರ್ಬಂಧ
ಆಟೋ ಸಂಚಾರಕೆ ಪ್ರಯಾಣಿಕರ ನಿರ್ಲಕ್ಷ
ಕಚೇರಿಗಳಿಗೆ ಸಿಬ್ಬಂದಿ ಹಾಜರಿ ಅಪೂರ್ಣ
ಮನೆಯಿಂದಲೇ ಕೆಲಸ ನಡೆಯುತ್ತಿದೆ ಸಂಪೂರ್ಣ

ಕೈ-ಕಾಲು ಸ್ವಚ್ಛಗೊಳಿಸಿ ಮುಖ ಮಾಸು ಧರಿಸಿ
ಸಾಮಾಜಿಕ ಅಂತರ ಸಮರ್ಪಕವಾಗಿ ನಿರ್ವಹಿಸಿ
ಎಂಬ ಸರ್ಕಾರದ ಆದೇಶವನು ಗಾಳಿಗೆ ತೂರಿ
ಸಾರ್ವಜನಿಕರು ನಡೆದುಕೊಳ್ಳುತಿರುವರು ಆಗಿ ಸ್ವೇಚ್ಛಾಚಾರಿ

ಸಾಹಿತ್ಯ ದಾಸೋಹಿಗಳು ಒಂದೆಡೆ ಸೇರಲಾಗುತ್ತಿಲ್ಲ
ಆದರೂ ಸಾಹಿತ್ಯ ಪ್ರಸಾರ ಎಂದೂ ನಿಂತಿಲ್ಲ
ನೋಡಿಯೊ ಸಾಹಿತ್ಯ ಜನ್ಮ ತಾಳಿತಲ್ಲ
ಸಾಹಿತ್ಯದ ವಿವಿಧ ಪ್ರಕಾರಗಳು ನಿರಂತರ ಸಾಗಿಹುದಲ್ಲ

ಹೊಸ ಹೊಸ ಸಾಹಿತಿಗಳು ನಮ್ಮ ಜೊತೆ ಸೇರಿಹರಲ್ಲ
ಹೊಸ ಬಗೆಯ ಕಾರ್ಯಕ್ರಮಗಳು ಮೂಡಿ ಬರುತ್ತಿರುವುದಲ್ಲ
ಸಂಚಲನ ಮೂಡಿಸುತಿಹ ಸಂಚಾಲಕರ ಪಾತ್ರ
ಎಂದೆಂದಿಗೂ ನಾವು ಮರೆಯಬಾರದು ಮಾತ್ರ

ಇಂದು ಬೆಳಿಗ್ಗೆ ಇಜ್ಞಾನ ಟ್ರಸ್ಟ್ ನ ಅಧ್ಯಕ್ಷ ಶ್ರೀ ಗೋಪಾಲ್ ಹಾಗೂ ಕಾರ್ಯದರ್ಶಿ ಹಾಗೂ ಪ್ರಖ್ಯಾತ ವಿಜ್ಞಾನ ತಂತ್ರಜ್ಞಾನ ಲೇಖಕ ಟಿ ಜಿ ಶ್ರೀನಿಧಿ , ಈ ಬೆಳಿಗ್ಗೆಯಷ್ಟೇ ಅವರ ಕೈ ಸೇರಿದ್ದ ಇಜ್ಞಾನ ಟ್ರಸ್ಟ್ ನ ಪ್ರಕಟಣೆ ಪುಟ್ಟ ಪುಟ್ಟಿಯ ಪರಿಸರ ಪಾಠಗಳು ಕಿರು ಹೊತ್ತಿಗೆಯನ್ನು ನನಗೂ ನನ್ನ ಮೊಮ್ಮಗಳು ಗೌರಿಗೂ ಖುದ್ದಾಗಿ ತಲುಪಿಸಿದರು. ಅವರಿಗೆ ಧನ್ಯವಾದಗಳು. ಈ ಕಿರು ಹೊತ್ತಿಗೆಯ ಒಂದು ಕಿರು ಪರಿಚಯ ಮಾಡಿಕೊಡಲು ಈ ಮೂಲಕ ಪ್ರಯತ್ನಿಸಿತ್ತಿದ್ದೇನೆ.

ಎಳೆಯ ಮಕ್ಕಳನ್ನು ಎದುರಿಗೆ ಕೂರಿಸಿಕೊಂಡು ಶ್ರೀನಿಧಿ ಬರೆದಿರುವ ಈ ಕಿರುಹೊತ್ತಿಗೆಯಲ್ಲಿ ಪ್ರಾಕೃತಿಕ ಸಂಪತ್ತಿನ , ಅದರ ಸಂಪರ್ಕದ ಮಹತ್ವವನ್ನೂ ಹೊಸ ಅನ್ವೇಷಣೆಗಳನ್ನು ಗೊತ್ತು ಮಾಡಿಸುವ ಕಾಳಜಿಯೂ ಪ್ರಕಟವಾಗಿದೆ ಎಂದು ಗೋಪಾಲ್ ತಮ್ಮ ಮೊದಲ ಮಾತಿನಲ್ಲಿ ತಿಳಿಸಿದ್ದಾರೆ. ಮಕ್ಕಳು ಏನಾಗಬೇಕು ಎನ್ನುವುದನ್ನು ನಿರ್ಧರಿಸುವುದರಲ್ಲಿ ಶೇ. ೩೦ ರಷ್ಟು ಮಾತ್ರಾ ವಂಶವಾಹಿನಿಯ ಪ್ರಭಾವವಿದ್ದು ಉಳಿದಿದ್ದನ್ನು ನಿರ್ಧರಿಸುವುದು ಜೀವನ ಶೈಲಿ, ಪರಿಸರ ಹಾಗೂ ಅವರಿಗೆ ಸಿಗುವ ಜ್ಞಾನ ಎಂಬ ಅಭಿಪ್ರಾಯವನ್ನು ತಮ್ಮ ಮುನ್ನುಡಿಯ ರೂಪದಲ್ಲಿರುವ ದೊಡ್ಡವರ ಕಣ್ಣನ್ನು ತೆರೆಸುವ ಪುಟ್ಟಕಥೆಗಳು ಎಂಬ ಶೀರ್ಷಿಕೆಯಡಿ ಹಸರು ವಾಸಿ ಪತ್ರಿಕೆಯ ಸಂಪಾದಕ ಶ್ರೀ ರಾಧಾಕೃಷ್ಣ ಭಡ್ತಿ ಅಭಿಪ್ರಾಯ ಪಡುತ್ತಾರೆ.

ಹೊತ್ತಿಗೆಯಲ್ಲಿ ಗೆದ್ದಲ ಗೂಡು, ಹಲ್ಲಿಯ ಪಾದ, ನೀರು-ಕಾರು, ಪ್ಲಾಸ್ಟಿಕ್ ಮನೆ, ಕಸದ ಸಮಸ್ಯೆಗೆ ರುಚಿಕರ ಪರಿಹಾರ, ಶುದ್ಧ ಗಾಳಿಗೊಂದು ದೊಡ್ಡ ಮಶೀನು, ಹೊಸ ಕ್ಯಾಮರಾ ಬೇಕೆ? ಅದಕ್ಕೆ ಮೊಬೈಲ್ ಬದಲಿಸೋದು ಯಾಕೆ? ಈ ಕುರಿತಾದ ವಿವರಗಳ ಮೂಲಕ ಪರಿಸರ ಸಂಬಂಧಿಯಾದ ಅನೇಕ ವಿವರಗಳನ್ನು ಮಕ್ಕಳಿಗೆ ಆಸಕ್ತಿ ಹುಟ್ಟಿಸುವ ಹಾಗೆ ಶ್ರೀನಿಧಿ ಕಟ್ಟಿಕೊಟ್ಟಿದ್ದಾರೆ. ಖ್ಯಾತ ಚಿತ್ರಕಾರ ರಘುಪತಿ ಶೃಂಗೇರಿ ಅವರ ಆಕರ್ಷಕ ವರ್ಣಚಿತ್ರಗಳು, ಜೊತೆಗೆ ಪೂರಕವಾದ ಉತ್ತಮ ಛಾಯಾಚಿತ್ರಗಳೂ ಈ ಪುಸ್ತಕದ ಮೌಲ್ಯವನ್ನು ಹೆಚ್ಚಿಸಿದೆ. ಪ್ರತಿ ಪಾಠದ ಕೊನೆಯಲ್ಲಿ ಸೇರಿಸಿರುವ ಟಿಪ್ಪಣಿ, ಅಬ್ಯಾಸ ಸೂಚಿಗಳು ಪುಸ್ತಕದ ಅಧ್ಯಯನಕ್ಕೆ ಗಂಭೀರವಾದ ಪೂರಕ ಅಂಶಗಳನ್ನು ಒದಗಿಸಿವೆ ಹಾಗೂ ಮಕ್ಕಳ ಸಾಹಿತ್ಯ ರಚನೆಯಲ್ಲಿ ಇದೊಂದು ವಿನೂತನ ಪ್ರಯತ್ನ ಎಂದು ಗೋಪಾಲ್ ಅಭಿಪ್ರಾಯ ಪಡುತ್ತಾರೆ.

ಬಯೋ ಮಿಮಿಟೆಕ್ಸ್ ಅಥವಾ ಬಯೋ ಮಿಮಿಕ್ರಿ ಅಂದರೆ ಪರಿಸರದ ಪ್ರೇರಣೆಯಿಂದ ಮನುಷ್ಯನ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳುವ ಉಪಾಯಕ್ಕೆ ಇಲ್ಲಿ ಸಾಕಷ್ಟು ಉದಾಹರಣೆಗಳನ್ನು ಲೇಖಕರು ಕೊಟ್ಟಿದ್ದಾರೆ. ಅಂಟು ಪುರಲೆ ಯಿಂದ ವೆಲ್ಕ್ರೋ ತಂತ್ರ, ಜೇಡರ ಬಲೆಯಲ್ಲಿನ ಅತಿ ನೇರಳೆ ಕಿರಣಗಳಿಂದ ಹಕ್ಕಿಗಳು ಬಲೆಯ ಪತ್ತೆ ಹಚ್ಚಿ ಬಲಿಯಾಗುವುದನ್ನು ತಪ್ಪಿಸಿಕೊಳ್ಳುವ ವಿಷಯದಿಂದ ಅನೇಕ ರಡಾರ್ ತಂತ್ರಜ್ಞಾನ) , ಗೆದ್ದಲು ಗೂಡಿನಲ್ಲಿ ಸದಾಕಾಲ ಏಕ ರೀತಿಯ ಉಷ್ಣಾಂಶ ಕಾಪಾಡಿ ಕೊಳ್ಳುವ ತಂತ್ರಜ್ಞಾನ (ಪರಿಸರ ಜ್ಞಾನ ಅಂದ್ರೆ ಹೆಚ್ಚು ಸೂಕ್ತವೇನೋ) ಇವೆಲ್ಲವೂ ಅವರು ಕೊಡುವ ಉದಾಹರಣೆಗಳು.

ಗೋಡೆಗೆ ಅಂಟಿಕೊಳ್ಳುವ ಹಲ್ಲಿಯ ಪಾದ, ನೀರನ್ನು ಪರ್ಯಾಯ ಇಂಧನ ವಾಗಿ ಬಳಸುವ ಸಾಧ್ಯತೆ, ಪ್ಲಾಸ್ಟಿಕ್ ಕಸ ಬಳಸಿ ಮನೆ ಕಟ್ಟುವ ಸಾಧ್ಯತೆ, ತಿನ್ನಬಹುದಾದ ತಿಂಡಿ ಪ್ಲೇಟ್, ಚಮಚಗಳು, ಮರಗಿಡಗಳಿಂದಲೇ ಏರ್ ಪ್ಯೂರಿಫೈಯರ್ ಕಾರ್ಯ ಪಡೆದುಕೊಳ್ಳುವ ಸಾಧ್ಯತೆಗಳು, ಪರಿಷ್ಕೃತ ಕ್ಯಾಮರಕ್ಕೆ ಹೊಸ ಫೋನನ್ನು ಕೊಳ್ಳುವ ಬದಲು ಬೇಕಾದ ಬಿಡಿಭಾಗಗಳನ್ನಷ್ಟೇ ಅಂದರೆ ಕ್ಯಾಮರವನ್ನಷ್ಟೇ ಬದಲಾಯಿಸಿಕೊಳ್ಳಬಹುದಾದ ಮಾಡ್ಯುಲರ್ ತಂತ್ರಜ್ಞಾನ, ಈಗ ಹೆಚ್ಚು ಹೆಚ್ಚಾಗಿ ಜಮೆಯಾಗುತ್ತಿರುವ ಪ್ಯಾಕಿಂಗ್ ಕಸದ ನಿವಾರಣೆ ಮುಂತಾದ

ಅಂಶಗಳನ್ನು ಮಕ್ಕಳ ಮನಹೊಗುವಂತೆ ಈ ಹೊತ್ತಿಗೆಯಲ್ಲಿ ಬಹು ಸ್ವಾರಸ್ಯಕರವಾಗಿ ಲೇಖಕರು ಮನದಟ್ಟು ಮಾಡಿಕೊಡುತ್ತಾರೆ. ಪುಟ್ಟ ಮಕ್ಕಳ ಕಣ್ಣಲ್ಲಿ ಕಾಣಿಸುವ ಈ ಪಾಠಗಳು ದೊಡ್ಡವರಿಗೂ ಅವಶ್ಯವಾಗಿವೆ ಅನಿಸಲಾರದು.

ಈ ಉಪಯುಕ್ತ ಹೊತ್ತಿಗೆಯನ್ನುಇಜ್ಞಾನ ಟ್ರಸ್ಟ್ ಹೆಚ್ಚು ಹೆಚ್ಚು ಮಕ್ಕಳನ್ನು ತಲಪುವಂತೆ ಮಾಡುವ ಯೋಜನೆಯನ್ನು ಹಮ್ಮಿಕೊಂಡಿದೆ. ಇದರಲ್ಲಿ ನಾವೆಲ್ಲರೂ ಪ್ರಾಯೋಜಕರಾಗಬಹುದು. ಶ್ರೀ ಗೋಪಾಲ್ ಅವರ ಕನ್ನಡ ಕಲಿಕೆಯ ಇಪ್ಪತ್ತಕ್ಕೂ ಹೆಚ್ಚು ಕಿರುಹೊತ್ತಿಗೆಗಳು ಈ ಯೋಜನೆಯ ಮೂಲಕ ರಾಜ್ಯದ ಸಾವಿರಾರು ಶಾಲೆಗಳನ್ನೂ, ವಿದ್ಯಾರ್ಥಿಗಳನ್ನೂ ತಲುಪಿರುವುದನ್ನು ಇಲ್ಲಿ ಸ್ಮರಿಸಬಹುದು. ಪುಸ್ತಕದ ಬೆಲೆ ಅರವತ್ತು ರೂಗಳು.

ಲೇಖನ - ಬೇಂದ್ರೆಯವರ ಮೇಲೆ ಶ್ರೀಮಾತಾ-ಶ್ರೀಅರವಿಂದರ ಪ್ರಭಾವ	**ಗುಹಾ**

ಔದುಂಬರ ಗಾಥೆಯಲ್ಲಿನ ಪ್ರಥಮ ಸಂಪುಟವೆ - ನಮನ ಸಂಪುಟ. ಇದರಲ್ಲಿನ ಮೂರನೇ ಭಾಗವೆ

'ಗುರು ನಮನ'. ಇದರಲ್ಲಿ ಒಟ್ಟು ೨೨೧ ಕವಿತೆಗಳಿವೆ. ಅದರಲ್ಲಿ ೯೮ ಕವಿತೆಗಳು ಶ್ರೀ ಮಾತಾ-ಶ್ರೀ ಅರವಿಂದರನ್ನು ಕುರಿತು ರಚಿಸಿದ್ದು. ಬೇಂದ್ರೆಯವರ ಮೇಲೆ ಅತ್ಯಧಿಕ ಪ್ರಭಾವ ಬೀರಿದ ಗುರುಗಳು ಎಂದರೆ ಶ್ರೀ ಅರವಿಂದರು. 'ಅರಳು-ಮರಳು' ಕಾವ್ಯ ಗುಚ್ಛದೊಂದಿಗೆ ಬೇಂದ್ರೆಯವರ ಮೇಲೆ ಅರವಿಂದರ ಪ್ರಭಾವ ಅಧಿಕವಾಗಿದೆ ಎನ್ನುವ ವಿಮರ್ಶಕರಿಗೆ ಒಮ್ಮೆ ಬೇಂದ್ರೆ, “ನನ್ನ 'ಗರಿ' ಕವನ ಸಂಗ್ರಹದಲ್ಲಿಯೇ ಅರವಿಂದರ ಪ್ರಭಾವ ಇದೆಯಲ್ಲ. ಅದನ್ನು 'ಗುರುಚರಣಾರವಿಂದದಲ್ಲಿ' ಅರ್ಪಿಸಿದ್ದು” ಎಂದಿದ್ದರು. ಬೇಂದ್ರೆಯವರೂ ಕಾಲೇಜಿನಲ್ಲಿದ್ದಾಗಲೇ ಶ್ರೀ ಅರವಿಂದರ “ಆರ್ಯಾ” ಪತ್ರಿಕೆಯನ್ನು ತರಿಸಿ ಓದುತ್ತಿದ್ದರು. ಆಗಲೇ ಅವರು “ಶಿಷ್ಯಾಸ್ತೇಹಂ” ಎಂದಿದ್ದರು. ಶ್ರೀ ಅರವಿಂದರ ಬಗ್ಗೆ ಬರೆದ ಮೊತ್ತಮೊದಲ ಪದ್ಯ ಹೀಗಿದೆ:

‘‘ನಿನ್ನಾ ಹುಬ್ಬಿನ ಇಬ್ಬದಿ
ಗರಿ ಚಾಚಿದೆ ಗರುಡ.
ಬಾನ್ಗಣ್ಣಾಗಿಹೆ ನೀ, ನಾ ಗುರಿಯಿಲ್ಲದ ಕುರುಡ.

ಕಣ್ಣೆವೆ ಚಾಟಿಗೆ ಕಟ್ಟಿದೆ
ಆನಂದದ ಹುಟ್ಟು.
ಒಳಗಿದೆ ಹೂವರಳಿದವೊಲು ವಿಶ್ವದ ಇಡಿಗುಟ್ಟು.

ಕೊಡು ತಂದೇ, ಇನ್ನೊಂದೇ
ಒಂದೇ ಬಾಯ್ಗುಟುಕು.
ಕೊಡು ತಾಯೇ ಇನ್ನೊಮ್ಮೆ
ಒಮ್ಮೇ ಎದೆಗುಟುಕು.’’ (ಶ್ರೀ ಅರವಿಂದರಿಗೆ - ‘‘ಹೃದಯ ಸಮುದ್ರ’’)

ಶ್ರೀಮಾತಾ-ಶ್ರೀ ಅರವಿಂದರ ಪ್ರಭಾವ ಅವರ ಕಾವ್ಯ-ವಿಚಾರ-ಜೀವನದ ಮೇಲೆ ಬಹಳ ಇತ್ತು. ಅವರು ತಮ್ಮ ಮನೆಯ ಹೆಸರನ್ನು “ಶ್ರೀ ಮಾತಾ” ಎಂದೇ ಇಟ್ಟಿದ್ದರು. ಶ್ರೀ ಮಾತಾ- ಶ್ರೀ ಅರವಿಂದರ ಪ್ರಥಮ ದರ್ಶನ ಬೇಂದ್ರೆಯವರಿಗೆ ಆದದ್ದು ೨೧ ಫೆಬ್ರುವರಿ, ೧೯೪೩ ರಂದು. ಆಗ ಅವರಿಗೆ ೪೭ ವರ್ಷ. ಪಾಂಡಿಚೆರಿ ಆಗ ಫ್ರೆಂಚ್ ವಸಾಹತು ಆಗಿದ್ದರಿಂದ ಪಾಸ್‌ಪೋರ್ಟ್ ಪಡೆದು ಹೋಗಬೇಕಾಗುತ್ತಿತ್ತು.

ಶ್ರೀ ಅರವಿಂದರ ಪೂರ್ಣಯೋಗದ ಸ್ವರೂಪವನ್ನು ತಿಳಿಸುವ ೧೪ ವಚನಗಳ ಅನುವಾದ ಮಾಡಿದ್ದಾರೆ. ಅದರಲ್ಲಿನ ಕೆಲವು ಸಾಲುಗಳನ್ನು ನೋಡೋಣ :

ನಮ್ಮ ಯೋಗವು ನಮಗಾಗಿ ಅಲ್ಲ;
ಅದು ಭಗವಂತನ ಪ್ರೀತ್ಯರ್ಥವಾಗಿ ಇದೆ.

ಭಗವತ್ ಸಂಬಂಧಗಳಲ್ಲಿ ಪ್ರವೇಶಿಸುವದು ಯೋಗ;
ಅದೇ ಪರಮ ಧ್ಯೇಯ, ಉತ್ತಮ ಉಪಾಯ.

ಸ್ವಭಾವತಃ ಎಲ್ಲ ಯೋಗವೂ ನೂತನ ಜನ್ಮವೇ.

೫ ಡಿಸೆಂಬರ್, ೧೯೫೦ ರಂದು ಶ್ರೀ ಅರವಿಂದರು ತಮ್ಮ ಪಾರ್ಥಿವ ದೇಹವನ್ನು ಬಿಟ್ಟರು. ಅವರ ಸಮಾಧಿಯ ದರ್ಶನವನ್ನು ಮಾಡಿಕೊಂಡು ಆಶ್ರಮದಿಂದ ಮರಳುವಾಗ ಬೇಂದ್ರೆಯವರ ಹೃದಯದಲ್ಲಿ ಅನುಪಮ ಪ್ರತಿಮೆಗಳ ಜಾತ್ರೆಯೇ ನೆರೆಯಿತು. ಅದುವೆ ಬೇಂದ್ರೆಯವರ ಪ್ರಸಿದ್ಧ ಕವಿತೆ "ಮಹಾಪ್ರಸ್ಥಾನ".

''ಅಗೊ ಜೀವ ಸ್ಫೋಟ ಆ ಸೋಮವಾರದಾ ಮಧ್ಯರಾತ್ರಿಯಲ್ಲಿ ಆಕಾಶಗಂಗೆ ಅಭಿಷೇಕ ಮಾಡೆ
ಕೈಲಾಸ ಜಾತ್ರೆಯಲ್ಲಿ ಮಧುವೇದವಾಣಿ, ಮಧುರಾಜರಾಣಿ ನಕ್ಷತ್ರಪುಂಜ ಕರೆಯೆ
ಓಂಕಾರದೆದೆಯ ಝೇಂಕರಿಸಿದಂತೆ ನವ ಜೀವ ರಾಶಿ ಮೊರೆಯೆ.''

(ಮಹಾಪ್ರಸ್ಥಾನ, ''ಹೃದಯ ಸಮುದ್ರ)

ಕೇಂದ್ರ ಸಾಹಿತ್ಯ ಅಕಾಡೆಮಿಯ ಬಹುಮಾನ ಗಳಿಸಿದ "ಅರಳು-ಮರಳು" ಪಂಚಕಾವ್ಯ ಗುಚ್ಛದ ಮೂರು ಸಂಗ್ರಹಗಳಾದ - ಚೈತ್ಯಾಲಯ, ಮುಕ್ತಕಂಠ, ಹೃದಯಸಮುದ್ರ ಕವನ ಸಂಗ್ರಹಗಳಲ್ಲಿ ಶ್ರೀ ಅರವಿಂದರನ್ನು ಕುರಿತ ಪದ್ಯಗಳೇ ಹೆಚ್ಚಾಗಿವೆ. 'ಹೃದಯಸಮುದ್ರ' ಪದ್ಯದಲ್ಲಿ ಬೇಂದ್ರೆಯವರು ಶ್ರೀ ಅರವಿಂದರ ಅತಿಮಾನವ ಸಾಕ್ಷಾತ್ಕಾರ ನೆನೆದು ಬರೆದ ಕವನವಿದೆ.

''ಬಂಗಾರ ನೀರ ಕಡಲಾಚೆಗೀಚೆಗಿದೆ ನೀಲ ನೀಲ ತೀರಾ
ಮಿಂಚುಬಳಗ ತೆರೆತೆರೆಗಳಾಗಿ ಅಲೆಯುವದು ಪುಟ್ಟಪೂರಾ
ಅದು ನಮ್ಮ ಊರು, ಇದು ನಿಮ್ಮ ಊರು, ತಂತಮ್ಮ ಊರೊ ಧೀರಾ
ಅದರೊಳಗೆ ನಾವು, ನಮ್ಮೊಳಗೆ ತಾವು ಅದು ಇಲ್ಲವಣ್ಣ ದೂರ.''
(ಹೃದಯ ಸಮುದ್ರ")

ಇದೇ ಪದ್ಯದಲ್ಲಿ 'ಕರೆ ಬಂದಿತಣ್ಣ, ತೆರೆ ಬಂದಿತಣ್ಣ, ನೆರೆ ಬಂದಿತಣ್ಣ ಬಳಿಗೆ' ಎನ್ನುತ್ತಾರೆ.

"ಇದು ಉಪ್ಪು ನೀರ ಕಡಲಲ್ಲೊ; ನಮ್ಮ ಒಡಲಲ್ಲಿ ಇದರ ನೆಲೆಯು.
ಕಂಡವರಿಗಲ್ಲೊ ಕಂಡವರಿಗಷ್ಟೆ ತಿಳದsದ ಇದರ ಬೆಲೆಯು.''

ಎನ್ನುವಾಗ 'ಕಂಡವರು' ಶಬ್ದ
ಪ್ರಯೋಗದ ಶ್ಲೇಷ ಗಮನಿಸಿ.

“ಸಾವಿತ್ರಿ” ಎಂಬುದು ಮಹರ್ಷಿ ಶ್ರೀ ಅರವಿಂದರು ಬರೆದ ಮಹಾಕಾವ್ಯ. ಇದಕ್ಕೆ 'ಬ್ರಹ್ಮಕಾವ್ಯ'ವೆಂದು ಬೇಂದ್ರೆ ಕರೆಯುತ್ತಾರೆ. “ಕಾಂಬನೊಬ್ಬ ಒಳಗಿಹನು” ಪದ್ಯದ ಕೆಲಸಾಲುಗಳನ್ನು ನೋಡೋಣ :

‘‘ದೇವರೆಚ್ಚರಿವ ಉದಯರಾಗ ಬ್ರಾಹೀಮುಹೂರ್ತದಲ್ಲಿ
ದಿವ್ಯ ಘಟನೆ ಘಟಿಸುವುದು ಇತ್ತು ಆ ದೇವಯಾನದಲ್ಲಿ
ತನ್ನ ಶಾಶ್ವತಿಯ ಗರ್ಭಗುಡಿಯ ನಿರ್ದೀಪ್ತ ಐಕ್ಯವಲ್ಲಿ
ಮೌನದಂಚಿನಲಿ ಮೈಯಚಾಚಿ ಮಲಗಿತ್ತು ಮಿಸುಕದಾಗಿ
ನಿಶೆಯ ಮಹಮನವು ಏನೊ ಮುಂಗಂಡು ಸ್ವಯಂಲೀನವಾಗಿ
ಅನಿರ್ಭೇದ್ಯವಿದು ಇದು ಅಪಾರ ಎನಿಸುವದಗಾಧ ಚಿಂತೆ
ಆ ಅಮೂರ್ತ ಅನಂತ್ಯದಾಳ ಪಾತಾಳಖಾತ ಬಂತೇ
ಕಣ್ಣು ಮುಚ್ಚಿದಾ ಧ್ಯಾನಗಮ್ಯ ಸಂಕೇತ ಚಿತ್ರದಂತೆ.’’

(ಸಾವಿತ್ರಿ ‘‘ಚೈತ್ಯಾಲಯ)

“ಸಾವಿತ್ರಿ” ಕಾವ್ಯದ ಉಕ್ತಿಗಳನ್ನು ಮೌಕ್ತಿಕ ಮಾಲೆಯಾಗಿ ಪೋಣಿಸಿದ್ದಾರೆ ಅವರ "ಮೈಯು ನೀನು” ಎಂಬ ಪದ್ಯದಲ್ಲಿ.

‘‘ತಾಯಿ ನಿನ್ನ ಒಡಲೊಡನೆ ಮಾತ್ರ ಈ ಜೀವ ಸಾಮ್ಯವಿರಲಿ",

‘‘ತಾಳಬೇಕು ನಾ; ಬಾಳಬೇಕು ನೀ; ಇಳಿಯಬೇಕು ಆತ.’’,

‘‘ಒಲಿದದ್ದೆ ಒಳಿತು ಎಂಬಂತೆ ಜೀವ ಕುಣಿಕುಣಿವ ಅರಿವು ಇರಲಿ’’,

‘‘ಕಲ್ಲಿಗೆಲ್ಲೆಯಿಲ್ಲ, ಕಾಲನಿಗೆ ಉಂಟು, ಸ್ಮರಣೆಯ ಇರವೆ ಸಾಕು’’,

"ನಿನಗೇನು ಬೇಕು ಅದು ನನಗೆ ಬೇಕು, ಬೇಡಾದುದೆನಗೆ ಬೇಡಾ.
ಈ ಜ್ಞಾನಪಿಂಡ ಬೆಳೆಯುತ್ತ ಬರಲಿ, ಹುಟ್ಟಾನೆ ಮಾತೃಮೂಢ’’.

“ಜೊಂಪಿಸಿತ್ತು ಮಣ್ಣು”, “ನೋವೋ ನೋವು” ಮೊದಲಾದ ಕವನಗಳು “ಸಾವಿತ್ರಿಯ ಅನುವಾದ ಮಾಡುವಾಗಿನ ನೋವನ್ನು ಕುರಿತು ಬರೆದ ಕವನಗಳು.

“ಮಂತಣದಲ್ಲಿಯು ಚಿಂತನವಿರಲಿ;

ಚಿತ್ತವು ಒಳಗನು ಚಿತ್ರಿಸಿ ಬರಲಿ.
ತಂತಿ ತಂತಿ ತಂತನದ ವಿತಾನಾ
ಹಾಸು ಹೊಕ್ಕು ಮುಂಮೌನಾ ಗಾನಾ !''

(ನೋವೋ ನೋವು, ''ಹೃದಯ ಸಮುದ್ರ'')

ಬೇಂದ್ರೆಯವರು ಶ್ರೀ ಅರವಿಂದರ ಕವನಗಳನ್ನು ಓದಿ ಸ್ಫೂರ್ತಿ ಪಡೆದು ಸ್ವತಂತ್ರ ಕವಿತೆಗಳನ್ನು ಬರೆದಿದ್ದಾರೆ. "ಬಾಯಿ ಬ್ರಹ್ಮಾ- ಮೌನ ಬ್ರಹ್ಮಾ" ಆ ಬಗೆಯ ಒಂದು ಕವಿತೆ.

''ಬ್ರಹ್ಮಾ, ಬ್ರಹ್ಮಾ ಒಳಗ ನಿದ್ದೀ ಮಾಡುತಿದ್ದಳು ಅವನ ಅಮ್ಮಾ
ಆಕೀ ಹೊಟ್ಟೀಲೆ ಬಂದ ಅಕಿ ತಮ್ಮಾ.
ಆತನ ಎದೀ ಬೆದೀಯೋಳಗ
ಭೆಟ್ಟಿಯಾಗಿತ್ತು ನಮ್ಮ ನಿಮ್ಮಾ.

ಓ ತಾಯಿ! ತಾಯಿ! ತಾಯಿ!
ಎಷ್ಟೋ ಒಡೆಸಿದೆ ತಲೆ ಕಾಯಿ
ಹೃದಯದಾಗ ಮೂಡಲಿ ನಿನ್ನ ಬಾಯಿ;
ನಿನ್ನ ಕಣ್ಣು, ತುಟಿ, ಮೊಲಿ
ನಿನ್ನ ತೊಡಿ ನಮ್ಮ ನೆಲಿ;
ನಿನ್ನ ತೋಳು ಜೋಕಾಲಿ
ಜೋ ಜೋ ಅನ್ನು, ಹೇಳು ಲಾಲೀ
ಉಳಿದ ಮಾತೆಲ್ಲಾ ಖಾಲಿ.''

ಇಂಥ ಪದ್ಯಗಳಲ್ಲಿ ಬೇಂದ್ರೆಯವರ ಸ್ವತಂತ್ರ ಅಭಿವ್ಯಕ್ತಿಯನ್ನು ಕಾಣಬಹುದು. 'ಎಷ್ಟೋ ಒಡೆಸಿದೆ ತಲೆ ಕಾಯಿ' ಇಂಥ ವಾಕ್ಯಗಳ ಶ್ಲೇಷ ಬೇಂದ್ರೆ ಕಾವ್ಯದ ಗತ್ತು, ಗಮ್ಮತ್ತು. ಒಂದೆಡೆ ತಲೆಯೇ ಕಾಯಿಯಾಗಿದೆ, ಇನ್ನೊಂದೆಡೆ 'ತಲೆ ಕಾಯಿ', ಅಂದರೆ, ರಕ್ಷಿಸು ಎಂದು ಮೊರೆಯಿಡುತ್ತಿದ್ದಾರೆ.

ಶ್ರೀ ಅರವಿಂದರ ಮಹತ್ವದ ಕವಿತೆಗಳ ಕನ್ನಡಾನುವಾದ ಮಾಡಿದ್ದಾರೆ. ಅವರ ಪ್ರಸಿದ್ಧ ಕವಿತೆ "ಸ್ವಪ್ನ ನೌಕೆ"ಯ ಅನುವಾದದ ಒಂದು ಪದ್ಯವನ್ನು ನೋಡೋಣ :

''ಓ ಸ್ವಪ್ನಾಗಿ ಸೃಷ್ಟಾ ನೌಕಾರೂಢಾಽ ಗೂಢಾ
ಯಾರವನೋ ಚಿರತರುಣಾ... ಬಂದಾ
ಹುಟ್ಟೋ, ಅನಂಗನು ಚಿತೆಯಲಿ ಮಣಿಸಿದ ಕಬ್ಬೋ
ಆಹಾ ಈ ಕಾಯಾ ಹಿರಣ್ಯಾಽಽಗರ್ಭಚ್ಛಾಯಾ ಆಕೃತಿಬಂಧಾ
ಮೌನಾ ಕರಗಿಸಿ ಎರೆದಾ, ಸೆಳಮಿಂಚಿನ ತೆರದಾ, ಸವಿನುಡಿ ಛಂದಾ -
''ಆ ಹೃದಯ ಜ್ವಲಾ ಮಾಲಾಽಲಂಕೃತಾ ಯಜ್ಞ ಸಿದ್ಧವೇನೇ?

ಕಂಕಣ ಬದ್ಧವೇನೇ?
ಬಂದೆನೇ ! ಬರುವಿಯೇನೇ?' ಎಂದಾ'' **(ಚೈತ್ಯಾಲಯ)**

ಶ್ರೀ ಅರವಿಂದರ ಪ್ರಸಿದ್ಧ ಕವಿತೆ 'The Rose of God'. ಈ ಪದ್ಯವನ್ನು ಬಹಳ ಆಕರ್ಷಕವಾಗಿ ಬೇಂದ್ರೆಯವರು ಕನ್ನಡಕ್ಕೆ ಅನುವಾದಿಸಿದ್ದಾರೆ, ಅದುವೆ "ಪೆರುಮಾಳನ ಕೆಂದಾವರೆ'.

"ಪೆರುಮಾಳನ ಕೆಂದಾವರೆ ಅರಳಿದೆ ನಸುನಕ್ಕೆ !
ಹರಿನೀಲದ ಬಾನೊಳಗಿನ ಸಿಂಧೂರದ ಚುಕ್ಕೆ.
ನವಿಲಿನ ನಲಿನವು ತಾನೇ ತಾನಾಗಿಯೆ ಬಿಚ್ಚಿ
ಏಳ್ಮಡಿ ಧಾಳಾಧೂಳಿಯ ಏಳ್ಬಣ್ಣದ ಕಿಚ್ಚೀ''
(ಚೈತ್ಯಾಲಯ)
(ಪೆರುಮಾಳ=ದೇವರು)

ಶ್ರೀ ಮಾತೆಯ ಬಗ್ಗೆ ಕೂಡ ಅನೇಕ ಕವಿತೆಗಳಿವೆ.

''ನಿನ್ನ ನೋಟವೆ ಹಾಲು
ತಾಯಿ ನೀನು.
ಕಂಗಳಿಂದಲೆ ಕುಡಿವೆ
ಕೂಸು ನಾನು.

ಕಂಗಳಿಂದಲೆ ನುಡಿವೆ
ತಾಯೆ ನೀನು.
ನನ್ನ ಕಣ್ಣೇ ಕಿವಿಯು
ಕವಿಯು ನಾನು''
(ಶ್ರೀ ಮಾತೃಶ್ರೀಗೆ, ''ಹೃದಯ ಸಮುದ್ರ'')

ಶ್ರೀ ಅರವಿಂದಾಶ್ರಮದ ಬಾಲ್ಕನಿಯಿಂದ ಶ್ರೀ ಮಾತಾ ದರ್ಶನ ಕೊಡುವದು ವಾಡಿಕೆ. ಬೇಂದ್ರೆಯವರು ದರ್ಶನಕ್ಕಾಗಿ ನಿರೀಕ್ಷಿಸುವಾಗ ಸ್ಫುರಿಸಿದ ಸಾಲುಗಳಿವು :-

''ಬರುವಳು ಬರುವಳು ಬಂದೇ ಬರುವಳು
ಕಾದಿರಿ ಹಾಗೋ ಹೀಗೋ
ನಸುಕಿನ ನಗೆಗಣ್ ಸೂಸುತ್ತ ಸುತ್ತೂ
ಈಗೋ ಇನ್ನಾವಾಗೋ.''
(ಬರುವಳು ಬರುವಳು, ''ಹೃದಯ ಸಮುದ್ರ)

"ಲೋಕಾಲೋಕೇ" ಎಂಬುದು ಪ್ರಸಿದ್ಧ ಪ್ರಾರ್ಥನೆ. ಇದರಲ್ಲಿ ಶ್ರೀ ಅರವಿಂದ ಶ್ರೀ ಮಾತೆಯ ಸ್ಮರಣೆ ಇದೆ.

"ಲೋಕಾಲೋಕೇ ಓಂ ತತ್ಸದಿತಿ ಲೋಕಾಂತರ್ಗತ ಮಾತಾ ಅದಿತಿ ದ್ವಾದಶಗತಿದಾಸೋಹಂ ವದತಿ ಭಾರತಿ ಶ್ರೀ ಮಾತೇ.
ಭಾರತಿ ಶ್ರೀ ಮಾತೇ.

ಮಘಾ-ಶ್ರವಣಗಳ ಸಾತ್ವಿಕ ಕಂದಾ ಅಭಿಜಿತ್ ಅಭಿಜಿತ್ ಅಭಿಜಿತ್ ಅಂದಾ
ಅಧ್ರುವವಲ್ಲಾ ಧ್ರುವಗತಿಯಂದಾ ಉಧೋ ಉಧೋ ಮಾತೇ. ಉಧೋ ಉಧೋ ಮಾತೇ.

ಗೋಗಳ ಮಧ್ಯೆ ನಿಜ ಗೋವಿಂದಾ ಕೊಳಲಿನಲುಲಿಯೇ ಭಾವದ ಛಂದಾ
ಸಹಸ್ರಾರದಲಿ ಶ್ರೀ ಅರವಿಂದಾ ಉದ್ಭವಿಸೌ ಮಾತೇ.
ಉದ್ಭವಿಸೌ ಮಾತೇ.

ಈ ಪದ್ಯದ ಕೊನೆಯ ನುಡಿ ಹೀಗಿದೆ.

"ನಮೇ-ಚಮೇಗಳ ನಮಕ ಚಮಕಾ ಯಮಕವಲ್ಲವೋ ಮಾತೆಯ ಗಮಕಾ
ನವಕ ಯುವಕಗತಿ ಹೃದಯಾಕ್ರಮಕಾ
ಮೂರ್ತಿಸು ಶ್ರೀ ಮಾತೇ. ಮೂರ್ತಿಸು ಶ್ರೀ ಮಾತೇ."

(ಲೋಕಾಲೋಕೇ, "ಮುಗಿಲ ಮಲ್ಲಿಗೆ")

೨೯ ಫೆಬ್ರುವರಿ, ೧೯೫೬ ರಲ್ಲಿ Supramental Manifestation ಆದಾಗ ಅರವಿಂದಾಶ್ರಮದ ಹೊರಗೆ ಇಬ್ಬರಿಗೆ ಅದರ ಅನುಭೂತಿಯಾಯ್ತು. ಅವರಲ್ಲಿ ಒಬ್ಬರು ಬೇಂದ್ರೆಯವರಾಗಿದ್ದರು. ಒಂದು ದಿನ ಮೊದಲೇ ಅದನ್ನು ಬೇಂದ್ರೆ ಯಲಹಂಕಾ ನಿಲ್ದಾಣದಲ್ಲಿದ್ದಾಗ ಅನುಭವಿಸಿದರು. ಆಗ ಬರೆದ ಕವಿತೆ "ಸಹಸ್ರತಂತ್ರೀ ನಿಃಸ್ವನದಂತೆ". ಅದರ ಒಂದು ಪದ್ಯವನ್ನು ನೋಡೋಣ :

"ಸಹಸ್ರತಂ ನಿಃಸ್ವನದಂತೆ ಮಾತರಿಶ್ವನಾ ಘನಮನದಂತೆ ಗುಡುಗಾಡುತ್ತಿದೆ ಗಗನದ ತುಂಬ ಪ್ರಣವ ಪ್ರವೀಣನ ನಾದಸ್ತಂಭ.'

(ಸಹಸ್ರತಂತ್ರೀ, "ಹೃದಯ ಸಮುದ್ರ")

ಈ ಪದ್ಯವನ್ನು ಗೋಕಾಕರು ಇಂಗ್ಲೀಷಿಗೆ ಅನುವಾದಿಸಿ "ಮದರ್ ಇಂಡಿಯಾ" ಎಂಬ ಅರವಿಂದ ಆಶ್ರಮದ ಪತ್ರಿಕೆಯಲ್ಲಿ ಪ್ರಕಟಿಸಿದ್ದರು.

ಕವನ - ಪರೀಕ್ಷೆ	ಮಹಾಬಲ ಕೆ.ಎನ್

ಇಷ್ಟು ದಿನ ಆಲಿಸಿದಿರಿ ಜತನದಿ ಈ ನನ್ನ ಪ್ರವಚನ
ಭಕ್ತಬಂಧುಗಳ ಸಹನೆ,ಆಸಕ್ತಿಗಳಿಗೆ ನಾನು ಧನ್ಯ,ಧನ್ಯ
ನನಗೀಗ ಪ್ರವಚನದ ಪರಿಣಾಮ ಅರಿವ ಕುತೂಹಲ
ಅದಕೆಂದೇ ಉದ್ಭವಿಸಿದೆ ಈ ಪ್ರಶ್ನೆ ಕೇಳುವ ಚಪಲ

ಇಲ್ಲುಂಟು ರಾಮನ ಮೂರ್ತಿ ಜತೆಗೇ ರಾವಣನದು
ಈ ಎರಡರಲಿ ನಿಮ್ಮ ಆಯ್ಕೆ ಯಾವುದು ಇರಬಹುದು?
ಭಲೆ !ಭಲೆ! ಎಂಥ ಸಂತಸ. ನಿಮ್ಮೆಲ್ಲರ ಆಯ್ಕೆ ರಾಮ
ಯಾರಿಗೂ ಬೇಡ ರಾವಣ.ಸಾರ್ಥಕವಾಯಿತು ನನ್ನ ಶ್ರಮ.

ಅದೇ ಪ್ರಶ್ನೆಯಲಿ ತರಬಯಸುವೆ ಒಂದು ಬದಲಾವಣೆಯನ್ನ
ರಾಮನದು ಮರದ ಮೂರ್ತಿ,ರಾವಣನದೋ ಅಪ್ಪಟ ಚಿನ್ನ.
ಗೊಂದಲವೇ? ಆಸಕ್ತಿ,ವಿರಕ್ತಿಗಳ ಬಲೆಯಲಿ ಮನ ಸಿಕ್ಕಿತೇ ಹೇಗೆ?
ಆಧ್ಯಾತ್ಮಿಕ ಪರಿಪೂರ್ಣತೆಯ ಗುರಿ ತಲುಪುವವರೆಗೂ ಹೀಗೇ.

ನಿಮ್ಮ ಜಾಗದಲಿ ನಾನಿದ್ದರೂ ಹೊಂದುತ್ತಿದ್ದೆ ಇದೇ ಬಗೆಯ ಭಾವನೆ
ಕಾತುರದಲಿ ಎದುರು ನೋಡುತ್ತಿರುವೆ ನನಗೆ ಬರಬೇಕಾದ ಸಂಭಾವನೆ

ಲೇಖನ - ತಮಿಳು ಕಾಮಾಚ್ಚಿಯ ಕನ್ನಡ ಪರಸಂಗಗಳು	ಶ್ರೀಮತಿ ಶ್ರವಣಕುಮಾರಿ ಟಿ.ಎಸ್

ನಮ್ಮ ಕಾಮಾಕ್ಷಿ ಕಂಚಿಯಿಂದ ಬೆಂಗಳೂರಿಗೆ ಬಂದು ಮೂವತ್ತೈದು ವರ್ಷವಾದರೂ ನೆಟ್ಟಗೆ ಕನ್ನಡದಲ್ಲಿ ಮಾತಾಡಲು ಕಲಿಯದಿದ್ದುದು, ಕಲಿಸಲಾಗದ ನಮ್ಮ ಅಸಫಲತೆಯೆ? ಅವಳ ತಮಿಳು ಭಾಷಾ ಪ್ರೇಮವೆ? ಇಲ್ಲವೇ ಕನ್ನಡಮ್ಮನ ದೌರ್ಭಾಗ್ಯವೆ? ನನಗಂತೂ ನಿರ್ಧರಿಸಲು ಸಾಧ್ಯವಾಗಿಲ್ಲ. ಅವಳು ಬರೆಯುವಾಗ ತನ್ನ ಹೆಸರನ್ನು ಕಾಮಾಕ್ಷಿಯೆಂದು ಬರೆದರೂ, ಹೇಳುವುದು ಮಾತ್ರಾ ಕಾಮಾಚ್ಚಿಯೆಂದೇ. ಅವಳಿಗೆ ಕನ್ನಡವನ್ನು ಕಲಿಸಲು ಹೋದವರೆಲ್ಲಾ ಸೋತು ತಾವೇ ತಮಿಳನ್ನು ಕಲಿತು ಮಾತಾಡುವಂತೆ ಮಾಡಿದ ಅವಳ ಸಾಧನೆ ಕಮ್ಮಿಯದಲ್ಲ! ಕಲಿಯದಿರಲು ಕಾರಣ ಅವಳ ಭಾಷೆ ಕಲಿಯಲಾಗದ ಸಾಮರ್ಥ್ಯವೋ ಇಲ್ಲವೇ ‘ಎಲ್ಲಿದ್ದರೇನ್, ತಮಿಳು ಭಾಷೆಯನ್ ಬಿಡೆನ್’ ಎನ್ನುವ ತನ್ನ ಮಾತೃಭಾಷೆಯ ಬಗ್ಗೆ ಅವಳಿಗಿರುವ ಏಕನಿಷ್ಠೆಯೋ ಎನ್ನುವ ಗೊಂದಲ ನನ್ನನ್ನು ಹಲವಾರು ಬಾರಿ ಕಾಡಿದೆಯಾದರೂ, ಪ್ರೊ. ಬಿ.ಜಿ.ಎಲ್. ಸ್ವಾಮಿಯವರ ‘ತಮಿಳು ತಲೆಗಳ ನಡುವೆ’ ಓದಿದ ಮೇಲೆ ಅದು ತಮಿಳರ ಸ್ವಭಾವ ಸಹಜವಾದ ನಡತೆ ಎಂದು ಅರ್ಥಮಾಡಿಕೊಂಡಿದ್ದೇನೆ. ಹಾಗಾಗಿ ಅವಳೆಷ್ಟೇ ಅಧ್ವಾನವಾಗಿ ಕನ್ನಡ ಮಾತಾಡಿದರೂ, ನನ್ನ ಕಣ್ಣೆದುರೇ ಮಾತೃಭಾಷೆಯ ಕಗ್ಗೊಲೆಯಾಗುತ್ತಿದ್ದರೂ ತಾಯಿಯ ಕ್ಷಮೆ ಬೇಡಿ ಆ ನೋವನ್ನಾದರೂ ಸಹಿಸಿಕೊಂಡೇನು; ಆದರೆ ತಮಿಳನ್ನು ಮಾತ್ರಾ ಕಲಿಯಲೊಲ್ಲೆ ಎನ್ನುವ ಭೀಷ್ಮ ಪ್ರತಿಜ್ಞೆಯನ್ನೂ (ಅವಳಿಗೆ ಹೇಳದೆ) ನನ್ನಲ್ಲೇ ಮಾಡಿಕೊಂಡಿದ್ದೇನೆ; ಅವಳೊಂದಿಗೆ ಅಚ್ಚಗನ್ನಡದಲ್ಲೇ ಮಾತಾಡುತ್ತೇನೆ.

ಬ್ಯಾಂಕಿಗೆ ಬಂದ ಗ್ರಾಹಕರನ್ನು, ಅವರು ಯಾವುದೇ ಭಾಷೆಯಲ್ಲಿ ಮಾತನಾಡಿಸಿದರೂ ಇವಳು ಉತ್ತರಿಸುವುದು ಮಾತ್ರಾ ಮೊತ್ತಮೊದಲಿಗೆ ತಮಿಳಿನಲ್ಲಿ. ಅವರ ಮುಖಭಾವದಿಂದ ಅವರಿಗೆ ಅರ್ಥವಾಗಲಿಲ್ಲವೆನ್ನುವುದು ತಿಳಿದಾಗ (‘ಬೆಂಗಳೂರಿನಲ್ಲಿ ಯಾರಿಗೆ ತಮಿಳು ಅರ್ಥವಾಗುವುದಿಲ್ಲ?!’ ಎನ್ನುವುದು ಅವಳ ಧೋರಣೆಯೇನೋ. ಆದರೆ ನನ್ನಂತವರೂ ಇದ್ದಾರಲ್ಲ) ಅದು ಅವಳದ್ದೇ ಕಾಪಿರೈಟಿನ ತಮಿಳ್ಗನ್ನಡಕ್ಕೆ ತಿರುಗುತ್ತಿತ್ತು. ಇಂಗ್ಲೀಷ್ ಬರುತ್ತಿತ್ತಾದರೂ ಅವಳು ಇಂಗ್ಲೀಷಿನಲ್ಲಿ ಮಾತನಾಡಿದ್ದನ್ನು ನಾನಂತೂ ಕಂಡಿಲ್ಲ. ಪ್ರಾಯಶಃ ಮಾತಾಡಿದರೆ ಅದನ್ನೂ ತಮಿಳಿಂಗ್ಲಿಷ್ ಮಾಡಿಬಿಡುತ್ತಾಳೆನ್ನುವ ನಂಬಿಕೆ ನನಗಿದೆ. ಯೆಸ್, ನೋ, ಆಲ್‌ರೈಟ್, ಸಾರಿ, ಪ್ಲೀಸ್‌ಗಳಂತರ ಸಣ್ಣ ಪುಟ್ಟ ಪದಗಳಿಂದ ಹೇಗೋ ನಿಭಾಯಿಸುತ್ತಿದ್ದಳೇ ಹೊರತು ಏನೇನೋ ಮಾತನಾಡಿ ಆಪತ್ತು ತಂದುಕೊಳ್ಳುವ ಸಾಹಸಕ್ಕಂತೂ ಕೈಹಾಕುತ್ತಿದ್ದಿಲ್ಲ. ಹೀಗೆಯೇ ಮೂವತ್ತೈದು ವರ್ಷಗಳ ತನ್ನ ಇಡೀ ವೃತ್ತಿಜೀವನವನ್ನು ಬೆಂಗಳೂರಿನಲ್ಲಿ ಕಳೆದಳು ಎಂದರದು ಬೆಂಗಳೂರಿನಲ್ಲಿ ಕನ್ನಡಕ್ಕಿರುವ ಸ್ಥಾನಮಾನವನ್ನು, ಪರಭಾಷಾ ಪ್ರೇಮವನ್ನು ಎತ್ತಿತೋರುವ ದೃಷ್ಟಾಂತ ರೂಪಕವಾದೀತೇನೋ?!

ಆದರೆ ಬಲು ಅಪರೂಪವಾಗಿ ಜನರಲ್ಲಿ ಕಾಣುವ ಹಲವು ಸದ್ಗುಣಗಳು ಅವಳಲ್ಲಿತ್ತು. ಎಷ್ಟು ಕೆಲಸ ಅವಳ ಮುಂಗಟ್ಟೆಗೆ ಬಂದು ಬಿದ್ದರೂ ಒಮ್ಮೆಯೂ ಸಿಡುಕಿದ್ದಿಲ್ಲ, ಬೇರೆ ಮುಂಗಟ್ಟೆಗೆ ಹೋಗಿ ಅಂದದ್ದಿಲ್ಲ, ಇದು ತನ್ನ ಕೆಲಸವಲ್ಲ ಅಂದದ್ದಿಲ್ಲ. ಬೇರೆಯವರ ಕೆಲಸ ಬಂದು ಇವಳ ಮುಂಗಟ್ಟೆಗೆ ಬೀಳುತ್ತಿದ್ದರೂ, ಗಾಣಕ್ಕೆ ಕಟ್ಟಿದ ಎತ್ತಿನಂತೆ ತನ್ನ ಕುರ್ಚಿಗೆ ಅಂಟಿಕೊಂಡು ಕೂತು ಹೊತ್ತು ಗೊತ್ತಿಲ್ಲದೆ ಕತ್ತೆ ಕೆಲಸ ಮಾಡುತ್ತಿದ್ದವಳನ್ನು ಮೆಚ್ಚದಿರಲು ಸಾಧ್ಯವೇ? ಯಾವುದೇ ಗುಸುಗುಸುವಿನಲ್ಲಿ ಭಾಗಿಯಾಗದೆ ಎಲ್ಲರಲ್ಲೂ ನಗುನಗುತ್ತಾ ಬೆರೆಯುತ್ತಿದ್ದವಳನ್ನು ಇಷ್ಟಪಡದಿರುವುದು ಹೇಗೆ?! ಇದೆಲ್ಲಕ್ಕಿಂತ ಅಮಾಯಕತೆ ಅವಳ ಸಹಜ ಸ್ವಭಾವವಾಗಿತ್ತು. ಸುಲಭವಾಗಿ ಜನರನ್ನು ನಂಬುತ್ತಿದ್ದಳು. ಹೀಗೆ ಭಾಷೆಯ ಒಂದು ವಿಷಯ ಬಿಟ್ಟರೆ ನಮ್ಮ ಕಾಮಾಕ್ಷಿ ಅಪರಂಜಿ.

ಪಾಪ! ಅವಳಿಗೆ ಕನ್ನಡ ಸರಿಯಾಗಿ ಬರುವುದಿಲ್ಲ ಎನ್ನುವ ಕಾರಣಕ್ಕೆ ಅವಳಿಗೆ ಹಲಕೆಲವು ರಿಯಾಯಿತಿಗಳೂ ದೊರಕುತ್ತಿದ್ದವು. ಅವಳಿಗೆ ಬಲು ಗೊಂದಲವಾಗುತ್ತಿದ್ದುದು ‘ಏಕವಚನ’ ‘ಬಹುವಚನ’ದಲ್ಲಿ. ಮೊದಮೊದಲಿಗೆ ‘ನೀನು’ ಅಥವಾ ‘ನೀವು’ ಯಾರಿಗೆ, ಎಲ್ಲಿ ಬಳಸಬೇಕೆಂಬ ಸಂದಿಗ್ಧದಲ್ಲಿ ತೊಳಲಾಡಿಬಿಟ್ಟಳು. ಮೇಲಧಿಕಾರಿಗೆ ‘ನೀನು’, ‘ಬಾ’ ‘ಹೋಗು’ ಎಂದೆಲ್ಲಾ ಹೇಳಿ ಕಸಗುಡಿಸುವ ನಿಂಗಮ್ಮನಿಗೆ ಬಲು ಮರ್ಯಾದೆಯಿಂದ ‘ನೀವು’, ‘ಬನ್ನಿ’, ‘ಹೋಗಿ’ ಎನ್ನುತ್ತಾ ಅವಳಿಗೆ ಧಿಗ್ಭ್ರಾಂತಿ ತರಿಸಿ, ಕಡೆಗೆ ಎರಡನ್ನೂ ಒಟ್ಟೊಟ್ಟಿಗೆ ಬಳಸುತ್ತಾ ಕಲಸು ಮೇಲೋಗರವಾಗಿ ಹೋಯಿತು. ಕಡೆಗೆ ಇಂಗ್ಲಿಷ್ ಭಾಷಾ ನೀತಿಯನ್ನನುಸರಿವಂತೆ. ಸರ್ವರಿಗೂ ಏಕವಚನವನ್ನೇ ತನಗೆ ತಾನೇ ಖಾಯಂ ಮಾಡಿಕೊಂಡು ಒಂದು ರೀತಿಯಲ್ಲಿ ನಿಶ್ಚಿಂತೆಯಿಂದ ಮಾತಾಡತೊಡಗಿದಳು. ಆರಂಭದಲ್ಲಿ ಕಿರಿಕಿರಿಯಾದ ಮೇಲಧಿಕಾರಿಗಳಿಗೂ ‘ಇವಳನ್ನು ತಿದ್ದಲು ಸಾಧ್ಯವೇ ಇಲ್ಲ’ ಎನ್ನುವುದು ತೀರ್ಮಾನವಾದ ಮೇಲೆ ತಾವೇ ಅವಳ ಭಾಷೆಗೆ ಹೊಂದಿಕೊಂಡು ತೆಪ್ಪಗಾದರೆಂದು ಬೇರೆ ಹೇಳಬೇಕಿಲ್ಲ.

ಗ್ರಾಹಕರೊಂದಿಗಾದರೂ ಅಷ್ಟೇ. “ನನಕು ಕನ್ನಡ ಬರುದಿಲ್ಲೆಪ್ಪ. ನಾನು ಇಪ್ಪಡಿಯೇ ಮಾತಾಡುದು” ಎಂದು ಮುಗ್ಧವಾಗಿ ಮೊದಲೇ ಹೇಳಿ ಅವರ ಕೆಲಸವನ್ನು ಮಾತ್ರಾ ಅಚ್ಚುಕಟ್ಟಾಗಿ ಮಾಡಿಕೊಟ್ಟಾಗ ಅವರಾದರೂ ‘ನೀನೋ, ನೀವೋ… ಹೇಗಾದರೂ ಮಾತಾಡು ತಾಯಿ, ಭಾಷೆಯಲ್ಲಿ ತಪ್ಪಿದ್ದರೂ ಭಾವದಲ್ಲಿ ತಪ್ಪಿಲ್ಲವಲ್ಲ. ಗೊಣಗದೆ ನನ್ನ ಕೆಲಸವನ್ನು ಬೇಗ ಮಾಡಿಕೊಟ್ಟರೆ ಸಾಕು’ ಎಂದುಕೊಳ್ಳುವುದಿಲ್ಲವೆ? ದಿನವೂ ವ್ಯವಹಾರದ ಸಮಯ ಮೀರಿ ಬರುವ ಗ್ರಾಹಕರಿಗಂತೂ ಅವಳೊಂದು ದೇವತೆಯೇ! “ಎನ್ನಪ್ಪಾ ಇದು. ನೀನು ದಿನವೂ ಲೇಟಾಗೇ ಬಂದು ನನಕು ಇಪ್ಪಡಿ ಕಷ್ಟ ಕುಡುವೆ. ನಾಳಿಕ್ಕು ಇಪ್ಪಡಿಯೇ ಬಂದರೆ ನಾನು ಚುಮ್ಮನಿರಲ್ಲ. ನೀನು ವಾಪಸ್ಸು ಪೋರುದೇ. ನಾನು ಡೈಲಿ ಒರು ಕಾಕಿ ಮಾದರಿ ಕಾ..ಕಾ.. ಎಂದು ಚೊಲ್ಲುವೆ , ನೀನೋ ಒರು ಕೂಚೆ ಮಾದರಿ ಅಪ್ಪಡಿಯೇ ವಂದುಡುವೆ” ಎಂದು ಕ್ಲಾಸ್ ಹಾಕಿ ಅವರ ಮುಖ ನೋಡಿದರೆ, ಅವರೋ ಅವಳ ಈ ಭಾಷಾ ವಿನೋದದಿಂದ ಸಂತೋಷಚಿತ್ತರಾಗಿ “ಇನ್ನೊಂದ್ಸಲ ಹಂಗೇ ಬೈಯ್ರಿ ಮೇಡಂ. ಚೆನ್ನಾಗಿ ಬೈತೀರಾ. ಖುಷಿಯಾಗತ್ತೆ” ಎಂದು ನಗುತ್ತಾ ಚಲನನ್ನೂ, ದುಡ್ಡನ್ನೂ ಅವಳಿಗೆ ಕೊಟ್ಟರೆ “ಶೆರಿ ಶೆರಿ, ನಿನಕು ಚೊಲ್ಲುಕು ನನಕೆ

ಬುದ್ಧಿಯಿಲ್ಲ. ನಾನೊರು ಕೂಬೆ" ಎಂದು ತನ್ನನ್ನೇ ಬೈದುಕೊಂಡು ಅವರ ಕೆಲಸವನ್ನು ಮುಗಿಸಿಕೊಡುತ್ತಿದ್ದಳು. ಮರುದಿನ ಮತ್ತದೇ…

ಈ ಕಾಮಾಕ್ಷಿಯ ಅಮಾಯಕತೆ ಎಷ್ಟಿತ್ತೆಂದರೆ, ಯಾರೋ, ಯಾರ ಬಗ್ಗೆಯೋ ಏನೋ ಹೇಳಿದರೆ ಅದನ್ನು ಆರಾಮಾಗಿ ಆ 'ಯಾರ' ಜೊತೆಗೆ ಮಿಕ್ಕೆಲ್ಲರ ಬಳಿಯೂ ಹೇಳಿಕೊಂಡು ಬಂದುಬಿಡುತ್ತಿದ್ದಳು. ಆ ಮಾತುಗಳು ಹಲವು ಬಾರಿ ಮೂಲದೇವರಿಗೇ ತಲುಪಿ ಬಲು ಮುಜುಗರವಾಗುವಂತ ಸನ್ನಿವೇಶಗಳು ಸೃಷ್ಟಿಯಾಗಿಬಿಡುತ್ತಿದ್ದವು. ಹೀಗೇ ಒಮ್ಮೆ ಇವಳ ಹೇಳಿಕೆಯಿಂದಾಗಿ ಬಹಳ ಸ್ನೇಹಿತರೆಂದುಕೊಂಡ ಇಬ್ಬರ ನಡುವೆ ಮೌನ ಕಲಹ ಸೃಷ್ಟಿಯಾಗೇಬಿಟ್ಟಿತು. ನಾನು ಸುಮ್ಮನಿರಲಾರದೆ ಅವಳನ್ನು ಕರೆದು "ಕಾಮಾಕ್ಷಿ ನೀನ್ಯಾಕೆ 'ಎ' 'ಬಿ'ಯ ಬಗ್ಗೆ ಹೇಳಿದ್ದನ್ನು ಎಲ್ಲರ ಹತ್ರ ಹೇಳ್ತಾ ಹೋದೆ. ಈಗ ನೋಡು ಅದು 'ಬಿ'ಗೆ ತಿಳಿದು ಅಷ್ಟು ಸ್ನೇಹಿತರಾಗಿದ್ದ ಅವರಿಬ್ಬರ ನಡುವೆ ಮಾತು ನಿಂತುಹೋಗಿದೆ" ಎಂದೆ. "ನನಕೆ 'ಎ' ಹೇಳಿತಳು 'ಬಿ' ಇಪ್ಪಡಿ ಹೇಳಿತಳು, ನನಕು ರೊಂಬ ಬೇಚಾರಾಯ್ತು ಅಪ್ಪಡಿ… 'ಎ' ರೊಂಬ ಪಾಪಾಮ್ಮ. ಅತಕೆ ನನಕು ಬೇಚಾರಾಗಿ ಊಟ ಮಾಡುವಾಗ 'ಸಿ', 'ಡಿ' ಕೂಟೆ 'ಎ' ಇಪ್ಪಡಿ ಹೇಳಿದ್ದು ಅಂತ ಚೊಲ್ಲಿಟೆ. ಇನ್ಯಾರ ಕೂಟೇನೂ ಚೊಲ್ಲಿಲ್ಲ" ಎಂದಳು. "ಅಲ್ಲಿಗಾಯ್ತಲ್ಲ. ನಿನಗೇನಾದ್ರೂ ಹೇಳಿದ್ರೆ ಕಹಳೆ ಬಾಯಿಗೆ ಮುತ್ತುಕೊಟ್ಟ ಹಾಗೆ" ಎಂದೆ. "ಅಂದರೆ ಎನ್ನಮ್ಮಾ?" ಎಂದು ಮರುಪ್ರಶ್ನೆ ಮಾಡಿದಳು. ಸರಿ, ಅವಳಿಗೆ ಆ ಗಾದೆಯ ಅರ್ಥ ಮಾಡಿಸುವಷ್ಟರಲ್ಲಿ ನನಗೆ ಸಾಕು ಸಾಕಾಗಿ ಯಾಕಾದರೂ ಇವಳೆದುರು ಆ ಗಾದೆ ಹೇಳಿದೆನೋ ಎನ್ನುವಂತಾಗಿ ತಲೆಚಚ್ಚಿಕೊಂಡೆ.

ಇಷ್ಟೇ ಆದರೆ ಅದರಲ್ಲೇನು ಸ್ವಾರಸ್ಯ. ಮರುದಿನ ಅವಳು ನನ್ನಿಂದ ನಾಲ್ಕು ಮುಂಗಟ್ಟೆಗಳ ದೂರದಲ್ಲಿ ನಿಂತು 'ಎ'ಯೊಂದಿಗೆ ಮಾತಾಡುತ್ತಿದ್ದಳು. ನಡೆದ ಘಟನೆಗೆ ಸಮರ್ಥನೆ ನೀಡುತ್ತಿದ್ದಳೇನೋ. ವ್ಯವಹಾರದ ಅವಧಿ ಮುಗಿದಿದ್ದರೂ ಇನ್ನೂ ಕೆಲವು ಗ್ರಾಹಕರು ತಮ್ಮ ಕೆಲಸ ಮುಗಿಯಲು ಕಾಯುತ್ತಾ ಕುಳಿತಿದ್ದರು. ಇದ್ದಕ್ಕಿದ್ದಂತೆ ನಮ್ಮ ಕಾಮಾಚ್ಚಿ ಅವಳು ನಿಂತಿದ್ದಲ್ಲಿಂದಲೇ ನನ್ನನ್ನು ಜೋರಾಗಿ ಕರೆದು "ಏ ನೆನ್ನೆ ನೀನು ಯಾರ ಬಾಯಿಕಮ್ಮ ಮುತ್ತು ಕೊಟ್ಟಿದ್ದು?" ಎಂದು ಇಡೀ ಹಾಲಿಗೇ ಕೇಳುವಂತೆ ಒದರಿದಳು. ಎಂಥಾ ಅವಮಾನ… ನನಗೆ ಝುಲ್ಲೆಂದುಹೋಯಿತು! ಅಳಿದುಳಿದಿದ್ದ ಗ್ರಾಹಕರು, ಮಿಕ್ಕೆಲ್ಲಾ ಸಹೋದ್ಯೋಗಿಗಳು ನನ್ನ ಮುಖವನ್ನೇ ನೋಡಿ ಬಿದ್ದು ಬಿದ್ದು ನಗತೊಡಗಿದರು. ಚಚ್ಚಿಬಿಡುವಷ್ಟು ಕೋಪ ಬಂತು. ಅವಡುಗಚ್ಚಿ 'ಬಾಯಿಲ್ಲಿ' ಎಂದು ಅವಳನ್ನು ಹತ್ತಿರ ಕರೆದು "ನೀನು ಹೇಳಿದ ಮಾತಿನ ಅರ್ಥ ಏನೂಂತ ನಿನಗೆ ಗೊತ್ತಾ?" ಎಂದು ದಬಾಯಿಸಿದರೆ ಅವಳು ಒಂದಿಷ್ಟೂ ಕೇರೇ ಮಾಡದೆ, ಒಂದಿಷ್ಟಾದರೂ ದನಿಯನ್ನೂ ತಗ್ಗಿಸದೆ "ನೀನೇ ಅಲ್ವಾಮ್ಮ ನಿನ್ನೆಕು ಯಾರಿಕೋ ಮುತ್ತು ಕೊಟ್ಟಿದ್ದು ಹೇಳಿದ್ದು. 'ಎ' ಕೂಟೆ ಚೊಲ್ಲುವಾಗ ಒರು ವರ್ಡ್ ಮರೆತುಟೆ. ನನಕೆ ಎಕ್ಸ್‌ಪ್ಲೇನ್ ಪಣ್ಣಕು ವಂದಿಲ್ಲೆ. ಅತಕೇ ನಿನ್ನೇ ಕೇಳಿದೆ" ಅಂದಳು. ನಾನಿನ್ನೇನು ಹೇಳಲು ಸಾಧ್ಯ? ಅಕ್ಷರ ಬರದವಳಿಗೆ ವ್ಯಾಕರಣ ಹೇಳಿದ್ದು ನನ್ನ ತಪ್ಪು ಎಂದು ಇನ್ನೊಮ್ಮೆ ತಲೆಚಚ್ಚಿಕೊಂಡೆ.

ಇಂಥ ನಮ್ಮ ಕಾಮಾಕ್ಷಿ ಅಮೇರಿಕಾದಲ್ಲಿರುವ ಮಗಳ ಮನೆಗೂ ಎರಡೆರಡು ಬಾರಿ ಹೋಗಿಬಂದಳು. ನಮಗೇನೋ ಅಭ್ಯಾಸಬಲದಿಂದ ಅವಳ ತಮಿಳ್ಗನ್ನಡ, ತಮಿಳಿಂಗ್ಲಿಷ್ ಎಲ್ಲವನ್ನೂ ಅರ್ಥಮಾಡಿಕೊಳ್ಳುವ ತಾಕತ್ತಿದೆ. ಅಲ್ಲಿನವರಿಗೆ ನೆಟ್ಟಗೆ ಮಾತಾಡುವ ನಮ್ಮ ಇಂಗ್ಲೀಷನ್ನು ಅರ್ಥೈಸಿಕೊಳ್ಳಲೇ ಎಷ್ಟೋ ಕಷ್ಟ. ಅಂತಹುದರಲ್ಲಿ ಇವಳ ತಂಗ್ಲೀಷನ್ನು ಹೇಗೆ ಅರ್ಥಮಾಡಿಕೊಂಡರು? ಎಂತೆಂತಹ ಘಟನೆಗಳು ಜರುಗಿದವು ಎನ್ನುವ ಕುತೂಹಲ ನನಗೆ. ಬ್ಯಾಂಕ್ ಬಿಟ್ಟ ನಂತರ ಸಿಕ್ಕಿಲ್ಲ. ಸಿಕ್ಕಾಗ ಅಲ್ಲಿನ ಸ್ವಾರಸ್ಯಕರ ತಂಗ್ಲೀಷಿನ ಪರಸಂಗಗಳನ್ನು ತಿಳಿದುಕೊಳ್ಳಬೇಕಿದೆ.

ಅಧ್ಯಕ್ಷರ ಭಾಷಣ

ಇಂದಿನ ಈ 186ನೇ ದಾಸೋಹ 2021ನೇ ಇಸವಿಯ ಮೊದಲ ಸಾಹಿತ್ಯ ದಾಸೋಹ. ವರ್ಷದ ಆರಂಭದಲ್ಲೇ ಅಧ್ಯಕ್ಷ ಸ್ಥಾನವನ್ನು ವಹಿಸುವಂತಹ ಒಂದು ದೊಡ್ಡ ಜವಾಬ್ದಾರಿಯನ್ನು, ಗೌರವವನ್ನು ವೇದಿಕೆ ನನಗೆ ನೀಡಿರುವುದು ಒಂದು ಸೌಭಾಗ್ಯವೆಂದುಕೊಳ್ಳುತ್ತೇನೆ. ಅನೇಕ ಉದ್ದಾಮ ಪಂಡಿತರಿರುವ ಈ ವೇದಿಕೆಯ ಕಾರ್ಯಕ್ರಮಕ್ಕೆ ಅಧ್ಯಕ್ಷರಾಗುವ ಅವಕಾಶ ನನಗೆ ತುಂಬಾ ಹಿರಿದಾದದ್ದು ಎನ್ನಿಸಿದರೂ, ಸಹೃದಯರೇ ತುಂಬಿರುವಲ್ಲಿ ಹೂವಿನಿಂದ ನಾರು ಸ್ವರ್ಗಕ್ಕೆ ಅನ್ನುವ ಹಾಗೆ ನಾನು ಇಂದು ಇಲ್ಲಿ ಕುಳಿತಿದ್ದೇನೆ. ಒಂದು ಕೃತಿಯನ್ನು ವಿಮರ್ಶೆ ಮಾಡುವಾಗ ಹಲವು ಬಾರಿ ಒಂದು ಓದಿಗೆ ಆ ಪ್ರಸ್ತುತಿಯ ಸಾರವಾಗಲೀ, ಉದ್ದೇಶವಾಗಲೀ, ನೋಟವಾಗಲೀ ದಕ್ಕುತ್ತದೆ ಎಂದು ನನಗನ್ನಿಸುವುದಿಲ್ಲ. ಆದರೆ ಇಂತಹ ಕಾಲಮಿತಿಯಿರುವ ಸಂದರ್ಭದಲ್ಲಿ ಆ ತಕ್ಷಣಕ್ಕೆ ಏನು ನಮ್ಮ ಗ್ರಹಿಕೆಗೆ ಬರುತ್ತದೋ ಅಷ್ಟನ್ನು ಮಾತ್ರಾ ಹೇಳಲು ಸಾಧ್ಯ. ಹಾಗಾಗಿ ಈಗ ನಾನು ಹೇಳುತ್ತಿರುವ ನನ್ನ ಅನಿಸಿಕೆಗಳೇ ಅಂತಿಮವಲ್ಲ. ಅವು ಈ ಕ್ಷಣದ ಗ್ರಹಿಕೆ ಮಾತ್ರಾ. ಈ ಎಲ್ಲ ಪ್ರಸ್ತುತಿಗಳೂ ಮತ್ತೆ ವೇದಿಕೆಯಲ್ಲಿ ಪ್ರಕಟವಾಗುವುದರಿಂದ ಎಲ್ಲ ಕೃತಿಗಳಿಗೂ ತಕ್ಕ ಮೆಚ್ಚುಗೆ ಮತ್ತು ವಿಮರ್ಶೆ ವೇದಿಕೆಯ ಎಲ್ಲ ಘಟಾನುಗಟಿ ಹಿರಿಯರಿಂದ ದೊರಕುತ್ತದೆ ಎನ್ನುವ ಆಶ್ವಾಸನೆಯನ್ನೂ ಕೊಡುತ್ತಿದ್ದೇನೆ.

ಆದಷ್ಟೂ ಸಂಕ್ಷಿಪ್ತವಾಗಿ ನನ್ನ ಅನಿಸಿಕೆಗಳು ಹೀಗಿವೆ –

1.ಮೊದಲು ಪ್ರಸ್ತುತಿ ಶ್ರೀಯುತ ಬೆಂ.ಶ್ರೀ ರವೀಂದ್ರ ಅವರ "ತಂತ್ರಕ್ಕೆ ತಂತ್ರ" ಕವಿತೆ. ವೇದಿಕೆಯ ನಾಯಕರಾಗಿರುವ ರವೀಂದ್ರ ಅವರು ಅತ್ಯಂತ ಸೃಜನಶೀಲ ಕವಿ. ಅವರ ಕವಿತೆಗಳು ಹೆಚ್ಚಾಗಿ ರಾಜಕೀಯ ಸಾಮಾಜಿಕ ಹಾಗೂ ದಮನಿತರ ವಿಪ್ಲವಗಳನ್ನು ಕುರಿತಾಗಿರುತ್ತದೆ. ಇಂದು ಅವರು ಪ್ರಸ್ತುತ ಪಡಿಸಿದ ಕವಿತೆಯೂ ಈಗ ಕಾಣುತ್ತಿರುವ ಜಾತೀಯತೆಯ ವಿವಾದಗಳು,

ಸ್ಥಿತ್ಯಂತರಗಳು, ವಿಗ್ರಹ ಭಂಜನ ಅರಸೊತ್ತಿಗೆ ಹಿಡಿಯಲು ಮಾಡುವ ಹುನ್ನಾರಗಳು, ಇಂತಹ ಅನೇಕ ತಂತ್ರಗಳನ್ನು ಬಿಂಬಿಸುವ ಪ್ರಯತ್ನವಾಗಿದೆ. ಕವಿತೆ ಸಶಕ್ತವಾಗಿ ಮೂಡಿಬಂದಿದೆ.

2. ನಂತರದ ಪ್ರಸ್ತುತಿ ಶ್ರೀಮತಿ ಗೌರಿ ಭಟ್ಟ ಅವರದ್ದು. ಅವರು ಇಂದು ಪ್ರಸ್ತುತ ಪಡಿಸಿದ ಕವಿತೆ "ರಜಾ-ಸಜಾ". ದಿನನಿತ್ಯದ ಘಟನೆಗಳನ್ನು ಕವಿತೆಗಳಲ್ಲಿ ಲವಲವಿಕೆಯಾಗಿ ಕಟ್ಟಿಕೊಡುವ ಗೌರಿ ಭಟ್ ಅವರು ತಮ್ಮ ಪ್ರಥಮ ಕವಿತಾ ಸಂಕಲನವನ್ನು ಎಚ್ಚೆಸ್ಕೆ ಜನ್ಮ ಶತಾಬ್ದಿಯ ಅಕ್ಷರನಮನದಂದು ಬಿಡುಗಡೆ ಮಾಡಿದ್ದಾರೆ. ಇಂದಿನ ಕವಿತೆ ರಜೆಯನ್ನು ಮಜವಾಗಿ ಅನುಭವಿಸಬೇಕೆಂಬ ಒಬ್ಬ ಉದ್ಯೋಗಸ್ತ ಮಹಿಳೆಯ ಸ್ಥಿತಿ ಸಜಾ ಆಗಿದ್ದನ್ನು ವಿನೋದವಾಗಿ, ಲವಲವಿಕೆಯಿಂದ ಚೆನ್ನಾಗಿ ಚಿತ್ರಿಸಿದ್ದಾರೆ.

3. ಮುಂದಿನ ಪ್ರಸ್ತುತಿ ಶ್ರೀ ಶಂಕರ ರಾವ್ ಅವರ "ಜಲಪಾತ" ಎನ್ನುವ ಕವಿತೆ. ಸಹೃದಯ ಓದುಗರು, ಬರಹಗಾರರೂ ಆಗಿರುವ ಶಂಕರ ರಾವ್ ಅವರು ಪ್ರಕೃತಿ, ಒಲವು, ದೇವರು ಇಂತಹ ಸಕಾರಾತ್ಮಕ ವಿಷಯಗಳನ್ನು ಆಯ್ದುಕೊಂಡು ತಮ್ಮ ಕೃತಿಗಳನ್ನು ರಚಿಸುತ್ತಾರೆ. ಹಲವು ಪತ್ರಿಕೆಗಳಲ್ಲಿ ಇವರ ಕವಿತೆಗಳು ಪ್ರಕಟವಾಗಿವೆ. ಕಿರುಸಿನಿಮಾ ನಿರ್ಮಾಣದಲ್ಲೂ ಆಸಕ್ತರು. ಇಂದಿನ ಕವಿತೆ ಜಲಪಾತ ನಿಸರ್ಗದ ಚೆಲುವನ್ನು ಬಣ್ಣಿಸುವ ಒಂದು ಉತ್ತಮ ಕವಿತೆಯಾಗಿದೆ.

4. ಇವರ ನಂತರ ತಮ್ಮ ಸುಶ್ರಾವ್ಯವಾದ ಗಾಯನವನ್ನು ಪ್ರಸ್ತುತ ಪಡಿಸಿದ್ದು ಶ್ರೀಮತಿ ಮಂಗಳಾ ನಾಡಿಗ್ ಅವರು. ನಮ್ಮ ವೇದಿಕೆಯ ಹಲವು ಕವಿಗಳ ಕವಿತೆಗಳಿಗೆ ಇವರು ದನಿಯಾಗಿದ್ದಾರೆ. ಇಂದು ಅವರು ಹಾಡಿದ "ಶಂಭೋ ಮಹಾದೇವ" ಭಕ್ತಿರಸಪೂರ್ಣವಾಗಿತ್ತು. ತುಂಬು ತನ್ಮಯತೆಯಿಂದ ಪ್ರಸ್ತುತ ಪಡಿಸಿದರು.

5. ಮುಂದಿನ ಪ್ರಸ್ತುತಿಕಾರರು ಶ್ರೀ ಪ್ರಾಣೇಶ ರಾವ್ ಅವರು. ಹಾಸ್ಯ ಬರಹಗಳಲ್ಲಿ ಪಳಗಿದ ಕೈ ಇವರದ್ದು. ಆಗೊಂದಿಷ್ಟು, ಈಗೊಂದಿಷ್ಟು, ಮತ್ತೊಂದಿಷ್ಟು ಎಂದು ಹಲವು ಪುಸ್ತಕಗಳನ್ನು ಪ್ರಕಟಿಸಿದ್ದಾರೆ. ಹಲವು ಪತ್ರಿಕೆಗಳಲ್ಲಿ ಇವರ ಬರಹಗಳು ಪ್ರಕಟವಾಗಿವೆ. ಇಂದು ಇವರು ಶ್ರೀ. ವೈ. ಎನ್. ಗುಂಡೂರಾವ್ ಅವರು ತಮ್ಮ ಎಪ್ಪತ್ತೈದನೇ ವರ್ಷದ ಸವಿನೆನಪಿಗಾಗಿ ಬರೆದಿರುವ "ನೆನಪಿನ ಚಿತ್ತಾರ" ಎನ್ನುವ ಪ್ರಬಂಧ ಸಂಕಲನದ ಸಮಗ್ರ ಪರಿಚಯವನ್ನು ಮಾಡಿಕೊಟ್ಟು, ಅದನ್ನು ಓದುವ ಕುತೂಹಲ ಹುಟ್ಟಿಸಿದ್ದಾರೆ.

6. ನಂತರ ತಮ್ಮ "ಸೌಹಾರ್ದ ಸಮಾನ ಹಳಿಯ ಬದುಕು" ಎನ್ನುವ ಕವಿತೆಯನ್ನು ಪ್ರಸ್ತುತಿ ಪಡಿಸಿದವರು ಶ್ರೀಮತಿ ರಾಧಿಕಾ ಗುಜ್ಜಾರ್ ಅವರು. ಇತ್ತೀಚೆಗೆ ವೇದಿಕೆ ಸೇರಿ ಅತಿಶೀಘ್ರದಲ್ಲಿ ಓದುಗರನ್ನು ಸೆಳೆದುಕೊಂಡಿರುವ ಲೇಖಕಿ ಕವಯಿತ್ರಿ ಮತ್ತು ಗಾಯಕಿ. ವಿಶಿಷ್ಟವಾಗಿ ಬರೆಯಬಲ್ಲವರು. ಇಂದಿನ ಪ್ರಸ್ತುತಿಯಲ್ಲಿ ರೈಲು ಪ್ರಯಾಣದಲ್ಲಿ ಸಹಪ್ರಯಾಣಿಕರೊಂದಿಗೆ ಸಮಾನ ಸ್ತರದಲ್ಲೇ ಪಯಣಿಸುವ ಬಗೆಗೆ ತಮ್ಮ ಅನಿಸಿಕೆಗಳನ್ನು ಅತ್ಯಂತ ಹೃದ್ಯವಾಗಿ ಬರೆದಿದ್ದಾರೆ.

7. ಮುಂದೆ ಪ್ರಸ್ತುತ ಪಡಿಸಿದ ವಿಠಲ್ ಇಜೇರಿಯವರು ವೇದಿಕೆಯ ಎಲ್ಲ ಸದಸ್ಯರಿಗೂ ಚಿರಪರಿಚಿತರು. ಎಲ್ಲರ ಕೃತಿಗಳನ್ನೂ ಓದಿ ವಿಮರ್ಶಿಸುವ ಸಹೃದಯರು. ಇಂದು ಅವರು ನಮ್ಮ ದೇಶದಲ್ಲಿರುವ ಕತೆ ಓದುವ, ಕತೆ ಹೇಳುವ, ಹಾಡಿನ ಮೂಲಕ ಕತೆ ಹೇಳುವ ಸಂಸ್ಕೃತಿ, ಕತೆ ಬೆಳೆಸುವಲ್ಲಿ ಸೂತ್ರದಾರನ ಪಾತ್ರ ಇಂತಹ ಹಲವು ವಿಷಯಗಳ ಬಗ್ಗೆ ಉತ್ತಮವಾಗಿ ತಮ್ಮ ಲೇಖನವನ್ನು ಪ್ರಸ್ತುತ ಪಡಿಸಿದರು. ಜಾನಪದ ಕತೆಯೊಂದನ್ನು ಹೇಳುತ್ತಾ ಪ್ರಾತ್ಯಕ್ಷಿಕೆಯನ್ನೂ ನೀಡಿದರು.

8. ಗೋಪೀನಾಥ್ ಅವರು ನಮ್ಮ ಸಸಕಸ ವೇದಿಕೆಯ ಹಾಸ್ಯ ಬ್ರಹ್ಮರೆಂದೇ ಹೇಳಬಹುದು. ಅವರ ಲೇಖನಿಗೆ ಸಿಗದ ವಸ್ತುವಿಲ್ಲ. ನಮ್ಮ ಗುಂಪಿನಲ್ಲಿ ಈಗ ತಮ್ಮ ನಾಲ್ಕನೆಯ “ತೀರ ಸೇರಿತು” ಎನ್ನುವ ಧಾರಾವಾಹಿಯನ್ನು ಪ್ರಸ್ತುತ ಪಡಿಸುತ್ತಿದ್ದಾರೆ. ಇಂದು ಅವರು ಪ್ರಸ್ತುತ ಪಡಿಸಿದ ಏನೀಮೂನ್ ಪ್ರಸಂಗವನ್ನು ಗುಂಪಿನಲ್ಲಿ ಕೂಡಾ ಹಂಚಿಕೊಂಡಿದ್ದರು. ಎಂದಿನಂತೆ ಅವರ ಲೇಖನ ಎಲ್ಲ ಕೇಳುಗರನ್ನೂ ರಂಜಿಸಿತು.

9. ಇವರಾದ ನಂತರ ಶ್ರೀಮತಿ ನಾಗರತ್ನ ಚಂದ್ರಶೇಖರ್ ಅವರು ತಮ್ಮ “ಧರೆಗಿಳಿದ ದೇವಿಯರು” ಎನ್ನುವ ಹಾಸ್ಯ ಲೇಖನವನ್ನು ಪ್ರಸ್ತುತ ಪಡಿಸಿದರು. ಲೇಖಕಿಯರ ಸಂಘದ ಕಾರ್ಯದರ್ಶಿಯಾಗಿರುವ ಇವರ ಹಲವು ಲೇಖನಗಳು, ಕತೆ, ಕವಿತೆಗಳು ನಾಡಿನ ಹಲವು ಪ್ರಸಿದ್ಧ ಪತ್ರಿಕೆಗಳಲ್ಲಿ ಪ್ರಕಟವಾಗಿವೆ. ಇಂದಿನ ಪ್ರಸ್ತುತಿ ಈಗಿನ ಕೊರೋನಾ ಕಾಲದಲ್ಲಿ ಲಕ್ಷ್ಮಿ, ಸರಸ್ವತಿ, ಪಾರ್ವತಿ ಗಣೇಶರ ಪಾಡನ್ನು ಹಾಸ್ಯದ ಲೇಖನಿಯಲ್ಲಿ ಚಿತ್ರಿಸಿದ್ದು ಎಲ್ಲರನ್ನೂ ರಂಜಿಸಿತು.

10. ಮುಂದೆ ತಮ್ಮ ಹಾಸ್ಯ ಲೇಖನವನ್ನು ಪ್ರಸ್ತುತಿ ಪಡಿಸಿದವರು ಶ್ರೀಮತಿ ಜಿ. ವಿ. ನಿರ್ಮಲಾ ಅವರು. “ವಿಜ್ಞಾನ ಕಲೆ ಮೇಳವಿಸೆ ಜಸವು ಜನಜೀವನಕೆ” ಎಂಬಂತೆ ವೃತ್ತಿಯಲ್ಲಿ ವಿಜ್ಞಾನಿ, ಪ್ರವೃತ್ತಿಯಲ್ಲಿ ಲೇಖಕಿ. ನಮ್ಮ ವೇದಿಕೆಯ ಪ್ರಬುದ್ಧ ಲೇಖಕರಲ್ಲೊಬ್ಬರು. ಕೊರೋನಾ ಕಾಲದಲ್ಲಿ ಯಮ ಮತ್ತು ಚಿತ್ರಗುಪ್ತರ ಪರಿಪಾಟಲು, ಕಡೆಗೆ ಹೋಗಿ ಅವರಿಬ್ಬರು ತ್ರಿಮೂರ್ತಿಗಳನ್ನು ಬೇಡಿಕೊಳ್ಳುವ ಪರಿಕಲ್ಪನೆಯ ಚಿತ್ರಣ ಸೊಗಸಾಗಿತ್ತು.

11. ನಂತರ ಶ್ರೀ ಕೆ. ಆರ್. ವೆಂಕಟೇಶ್ (ಮನೋಹಂಸ) ಅವರು ತಮ್ಮ ಸಂಕ್ರಾಂತಿಯ ಬಗೆಗಿನ ಕವಿತೆಯನ್ನು ಪ್ರಸ್ತುತಿ ಮಾಡಿದರು. ಇವರು ಗಾಯನದಲ್ಲಿ ತಮ್ಮನ್ನು ತೀವ್ರವಾಗಿ ತೊಡಗಿಸಿಕೊಂಡಿದ್ದರೂ ಕವಿತೆಗಳನ್ನು ಕೂಡಾ ರಚಿಸುತ್ತಾರೆ. ಒಂದೆರಡು ತಲೆಮಾರುಗಳ ಹಿಂದಿನ ಸಂಕ್ರಾಂತಿ ಹಬ್ಬ, ಇಂದಿನ ದಿನಗಳಲ್ಲಿ ನಡೆಯುತ್ತಿರುವ ಸಂಕ್ರಾಂತಿ ಎರಡನ್ನೂ ಹೋಲಿಕೆ ಮಾಡಿದ ಉತ್ತಮ ಕವಿತೆಯನ್ನು ಪ್ರಸ್ತುತ ಪಡಿಸಿದರು.

12. ಮುಂದೆ ಶ್ರೀಮತಿ ರತ್ನಾಮೂರ್ತಿಯವರು ತಮ್ಮ “ಆ ಕ್ಷಣವನ್ನು ದಾಟಿಸಬೇಕಿತ್ತು” ಎನ್ನುವ ಲೇಖನವನ್ನು ಪ್ರಸ್ತುತ ಪಡಿಸಿದರು. ವಿದುಷಿ, ಕತೆಗಾರ್ತಿ, ವಚನಕಾರ್ತಿ, ಮುಂಡಿಗೆಗಳ ರಚಕರು, ಗಮಕ ವ್ಯಾಖ್ಯಾನಕಾರ್ತಿ ಹೀಗೆ ಹಲವು ಮಗ್ಗಲುಗಳ ಪಂಡಿತರು. ಉತ್ತಮ ಶಿಕ್ಷಕಿಯಾದ

ಅನುಭವವಿರುವ ರತ್ನಾ ಅವರು ತಮ್ಮ ಅನುಭವಗಳ ನೆನಪಿನ ಗಣಿಯಿಂದ ಒಳ್ಳೊಳ್ಳೆಯ ಪ್ರಸಂಗಗಳನ್ನು ಹೆಕ್ಕಿ ತೆಗೆದು ವೇದಿಕೆಯಲ್ಲಿ ಹಂಚಿಕೊಳ್ಳುತ್ತಾರೆ. ಇಂದಿನ ಪ್ರಸಂಗದಲ್ಲಿ ಅವರಿಂದ ಉಪಕೃತಳಾದವಳು ಮುಂದೊಮ್ಮೆ ಎದುರಿಗೇ ಬಂದರೂ ಗುರುತಿಸದೇ ಹೋಗುವ ಬದುಕಿನ ವ್ಯಂಗ್ಯವನ್ನು ತೋರಿದ ಘಟನೆ ಕೇಳುಗರ ಮನವನ್ನು ಕಲುಕಿತು.

13. ಗೋನವಾರ ಕಿಶನ್ ರಾವ್ ಅವರು "ಹೀಗೊಂದು ಚಿಂತನೆ" ಎನ್ನುವ ಒಂದು ಪ್ರಬುದ್ಧವಾದ ಲೇಖನವನ್ನು ಪ್ರಸ್ತುತ ಪಡಿಸಿದರು. ಶ್ರೀಯುತರು ಉತ್ತಮ ಬರಹಗಾರರು, ಕನ್ನಡ ಪರ ಚಿಂತಕರು, ಕವಿಗಳು. ಒಂದು ಉತ್ತಮ ಸಾಹಿತ್ಯ ಕೃತಿ ಹೇಗೆ ಸಮಾಜದಲ್ಲಿ ಸದಾ ಪ್ರಸ್ತುತವಾಗಿರುತ್ತದೆ ಎನ್ನುವ ಬಗ್ಗೆ ತಮ್ಮ ವಿಚಾರಗಳನ್ನು ಲೇಖನದಲ್ಲಿ ಹಂಚಿಕೊಂಡರು, ರಾಮಾಯಣ, ಮಹಾಭಾರತ, ಬೇಂದ್ರೆಯವರ ಕಾವ್ಯ, ಡಿವಿಜಿಯವರ ಕಗ್ಗ ಎಲ್ಲವನ್ನು ಸೋದಾಹರಣವಾಗಿ ಉಲ್ಲೇಖಿಸಿದರು.

14. ಮುಂದಿನ ಶ್ರೀ ಹುವಾಶ್ರೀ ಪ್ರಕಾಶರ ಆಯ್ದಕ್ಕಿ ಮಾರಯ್ಯನ ಕುರಿತಾದ ಲೇಖನ ಬಹು ಮೌಲಿಕವಾದದ್ದು. ಹುವಾಶ್ರೀಯವರೊಬ್ಬ ಸದ್ದಿಲ್ಲದ ಸಾದಕ. ಕವಿಮನ ಅಂಕಣವನ್ನು, ಎಲ್ಲ ನೋಡಿಯೋ ಕಾರ್ಯಕ್ರಮಗಳ ವರದಿಯನ್ನು ಸಮರ್ಥವಾಗಿ ನಿಭಾಯಿಸುತ್ತಿದ್ದಾರೆ. ಅಷ್ಟೊಂದು ಪ್ರಸಿದ್ದಿಗೆ ಬರದ ಆಯ್ದಕ್ಕಿ ಮಾರಯ್ಯ ದಂಪತಿಗಳ ಜೀವನ ಚಿತ್ರಣ "ಕಾಯಕವೇ ಕೈಲಾಸ" ಎಂಬ ಹಿರಿದಾದ ಅರ್ಥ ಹೊಂದಿದ ಅವರ ವಚನ, ಎಲ್ಲದರ ಬಗ್ಗೆ ಲೇಖನ ಪ್ರಸ್ತಾಪಿಸುತ್ತಾ ಆಸಕ್ತಿದಾಯಕವಾಗಿತ್ತು.

15. ನಂತರ ಚಾಕಣಾಚಾರಿ ಬಾಲಸುಬ್ರಹ್ಮಣ್ಯಂ ಅವರ ತಂಗಿ "ಶಿವ ಪ್ರಿಯೆ" ಎಂಬ ಕಾವ್ಯನಾಮದಿಂದ ಬರೆಯುತ್ತಿರುವ ಶ್ರೀಮತಿ ರಾಜೇಶ್ವರಿ ಚಿಂತಾಮಣಿಯವರು ಪ್ರಥಮ ಬಾರಿಗೆ ನಮ್ಮ ದಾಸೋಹದಲ್ಲಿ ಭಾಗವಹಿಸಿ "ತಾಪದಲ್ಲೆ ಅರಳಬೇಕು ಸ್ವಚ್ಛ ಮಲ್ಲಿಗೆ ನೋವಿನಲ್ಲೆ ಅರಳಬೇಕು ಜೀವ ಮೆಲ್ಲಗೆ" ಎನ್ನುವ ಜೀವನದಲ್ಲಿ ಪ್ರತಿಯೊಂದನ್ನೂ ಕಷ್ಟಪಟ್ಟು ಸಾಧಿಸಿ ಪಡೆಯಬೇಕು ಎನ್ನುವ ಆಶಯವಿರುವ ಕವಿತೆಯನ್ನು ಸುಂದರವಾಗಿ ಪ್ರಸ್ತುತಪಡಿಸಿದರು.

16 ಇವರ ನಂತರ ಬಾಲಕೃಷ್ಣನ ಲೀಲೆಯನ್ನು ತಮ್ಮ ಕವಿತೆಯಲ್ಲಿ ನಮ್ಮ ಕಣ್ಣಿಗೆ ಕಟ್ಟಿಸಿದವರು ಶ್ರೀ. ಜಿ. ವಿ. ಹೆಗಡೆಯವರು. ಇವರು ಬಹುಶ್ರುತರು - ತಾಳ ಮದ್ದಳೆಯ ಅರ್ಥಧಾರಿಗಳು, ಕವಿಗಳು, ಕತೆಗಾರರು, ಕಾದಂಬರಿಕಾರರು. ವೇದಿಕೆಯಲ್ಲಿ ಪುರಾಣ ಪ್ರಸಿದ್ಧರ ಕತೆಗಳನ್ನು ಬಲು ಸುಂದರವಾಗಿ ನಿರೂಪಿಸುತ್ತಿದ್ದಾರೆ. ಇಂದಿನ ಇವರ ಪ್ರಸ್ತುತಿಯೂ ಕೃಷ್ಣನ ಬಾಲಲೀಲೆಗಳ ಗುಣಗಾನವಾಗಿದ್ದು ಅತ್ಯಂತ ರಂಜನೀಯವಾಗಿತ್ತು.

17. ಇಂದಿನ ದಾಸೋಹದ ಒಂದು ಪ್ರಮುಖವಾದ ವಿಚಾರಪೂರ್ಣ ಲೇಖನವನ್ನು ಪ್ರಸ್ತುತ ಪಡಿಸಿದವರು ಡಾ. ಶ್ರೀಲಕ್ಷ್ಮಿಯವರು. ವೈದ್ಯಕೀಯಕ್ಕೆ ಸಂಬಂಧಿಸಿದ ಹಲವು ಮಹತ್ವಪೂರ್ಣ ಲೇಖನಗಳನ್ನು ಬರೆದಿದ್ದಾರೆ. ಇಂದಿನ ಲೇಖನ ಬದಲಾಗುತ್ತಿರುವ ವೈದ್ಯ ಮತ್ತು ರೋಗಿಯ ಸಂಬಂಧ, ವೈದ್ಯಕೀಯ ರಂಗದಲ್ಲಿ ಆಗುತ್ತಿರುವ ಬದಲಾವಣೆಗಳು, ಮಾಹಿತಿಗಳು

ದೊರಕುತ್ತಿರುವ ಸಾಧನಗಳು, ಹೆಚ್ಚುತ್ತಿರುವ ಕೊಳ್ಳುವ ಸಾಮರ್ಥ್ಯ, ಆರೋಗ್ಯ ವಿಮೆ, ಪೂರಕ ಸಾಧನಗಳು, ಶುಶ್ರೂಷ ವೃತ್ತಿ, ರೋಗ ನಿರ್ಣಾಯಕಗಳು ಪುರಾವೆ ಆಧಾರಿತ ಚಿಕಿತ್ಸೆ. ಹೊಸ ಚಿಕಿತ್ಸೆಗಳು, ಪರೀಕ್ಷೆಗಳು ಎಲ್ಲದರ ಬಗ್ಗೆ ಸರಳವಾದ ಭಾಷೆಯಲ್ಲಿ ಮಾಹಿತಿ ನೀಡಿ ಇನ್ನಷ್ಟು ಹೆಚ್ಚಾಗಿ ತಿಳಿದುಕೊಳ್ಳಬೇಕೆನ್ನುವ ಆಸಕ್ತಿಯನ್ನು ಹುಟ್ಟಿಸಿತು.

18. ನಂತರ ಶ್ರೀಮತಿ ಶೀಲಾ ಅರಕಲಗೂಡು ಅವರು ತಮ್ಮ ಎರಡು ಕವಿತೆಗಳನ್ನು ಪ್ರಕಟಪಡಿಸಿದರು. ಇವರು ಕವಿತೆ, ಲೇಖನ, ನಟನೆ ಎಲ್ಲದರಲ್ಲೂ ಪರಿಣಿತರು. ಕವಿತೆಗಳು ೧. ನಿವೇಶನ ತುಂಬಾ ಅರ್ಥಪೂರ್ಣವಾಗಿತ್ತು. ಹಲವು ಬಾರಿ ಮನದಲ್ಲಿ ಕಟ್ಟುತ್ತಲೇ, ಕೆಡವುತ್ತಲೇ ಇರುವ ಕಟ್ಟಡಗಳ ಬಗ್ಗೆ ಹೇಳುತ್ತಾ ಕವಿತೆಗೆ ಬೇರೆಯದೇ ಆಯಾಮವನ್ನು ನೀಡಿದರು. ೨.ನೋವೆಂದರೇನೆಂದು ಗೊತ್ತಾಗದಂತೆ - ಹಿಂದಿನ ತಲೆಮಾರಿನ ತಂದೆ ತಾಯಿಯರು ಮಕ್ಕಳನ್ನು ಸಾಕಿದ ಪರಿಯನ್ನು ಬಿಂಬಿಸಿದ ಕವಿತೆ. ಎರಡೂ ಅರ್ಥಪೂರ್ಣವಾಗಿದ್ದವು.

19. ಇವರಾದ ನಂತರ ಶ್ರೀ ರಂಗನ್ ಅವರ “ಮಹಾ ಸಂಪರ್ಕ” ಎನ್ನುವ ಗ್ರಂಥವನ್ನು ಪರಿಚಯಿಸಿದರು. ಜಯಂತಿಯವರು ಹಿರಿಯ ವಿದ್ವಾಂಸರು, ಸಂಸ್ಕೃತದಲ್ಲಿ ಆಧ್ಯಾತ್ಮ ವಿಷಯದಲ್ಲಿ ಅಗಾಧ ಪಾಂಡಿತ್ಯವುಳ್ಳವರು, ಬಹುಶ್ರುತರು. ರಾಮಾಯಣದ ಬಗ್ಗೆ ಅತ್ಯಂತ ವಿಚಾರಪೂರ್ಣ ಲೇಖನಗಳನ್ನು ಬರೆದಿದ್ದಾರೆ. ಮಹಾಸಂಪರ್ಕ ಪುಸ್ತಕದಲ್ಲಿನ ರಂಗನ್ ಅವರ ಸಾಧ್ಯ ಮತ್ತು ತರ್ಕದ ಚಿಂತನೆ. ಅನ್ಯಗ್ರಹ ಜೀವಿಗಳ ಬಗೆಗಿನ ವಿಚಾರಗಳು ಕುತೂಹಲ ಹುಟ್ಟಿಸಿದವು. ದೇವರು ಭೂಮಿಗೆ ಅನ್ಯಗ್ರಹಗಳಿಂದ ಬಂದವರು ಎನ್ನುವ ಕಲ್ಪನೆ ಹೊಸತಾಗಿತ್ತು.

20. ವೇದಿಕೆಯಲ್ಲಿ ಗುರುರಾಜ ಶಾಸ್ತ್ರಿಯವರ ಪರಿಚಯವಿಲ್ಲದವರೇ ಇಲ್ಲ ಎಂದರೆ ಅತಿಶಯೋಕ್ತಿಯೇನಲ್ಲ. ಎಲ್ಲಾ ನೋಡಿಯೋ ಕಾರ್ಯಕ್ರಮಗಳ ಮೆದುಳು - ತಾಂತ್ರಿಕ ನಿರ್ವಾಹಕರು. ನಾಟಕಗಳ ರಚಕರು, ಚಾರಣದಲ್ಲಿ ಆಸಕ್ತಿ ಹೊಂದಿದವರು. ಪಕ್ಷಿ ವೀಕ್ಷಕರು, ಉತ್ತಮ ಛಾಯಾಚಿತ್ರಕಾರರು. ಇಂದು ಅವರು ಜನವರಿ 5ನೇ ತಾರೀಖಿನಿಂದ 7ನೇ ತಾರೀಖಿನವರೆಗೆ ಬಿಳಿಗಿರಿರಂಗನ ಬೆಟ್ಟದಲ್ಲಿ ನಡೆದ ಹಕ್ಕಿಹಬ್ಬದ ಕುರಿತಾಗಿ ಅತ್ಯಂತ ಆಸಕ್ತಿದಾಯಕವಾಗಿ ತಮ್ಮ ಲೇಖನವನ್ನು ಮಂಡಿಸಿದರು.

21. ಇವರ ನಂತರ “ಒಂದು ನಿಮಿಷ ಬಂದೆ” ಎನ್ನುವ ಲಘುಬರಹವನ್ನು ಮಂಡಿಸಿದವರು ಶ್ರೀಮತಿ ಅನ್ನಪೂರ್ಣ ಸೀತಾರಾಮು ಅವರು. ಅನ್ನಪೂರ್ಣ ಅವರು ಒಳ್ಳೆಯ ಗಾಯಕಿ, ಪ್ರವಾಸ ಕಥನಗಳನ್ನು, ಹಲವು ಕತೆಗಳನ್ನು, ಅನುಭವ ಕಥನಗಳನ್ನು ಬರೆದಿದ್ದಾರೆ. ಎಲ್ಲರೂ ಸಾಮಾನ್ಯವಾಗಿ ಆಡುವ “ಒಂದ್ನಿಮಿಷ ಬಂದೆ” ಎನ್ನುವ ಪದ ಪುಂಜ ಸೃಷ್ಟಿಸುವ ನಗೆ ಸನ್ನಿವೇಶಗಳನ್ನು, ಅವಾಂತರಗಳನ್ನೂ ಕುರಿತು ಬರೆದ ಇಂದಿನ ಲೇಖನ ಚೆನ್ನಾಗಿತ್ತು.

22. ಶ್ರೀ ಎಂ. ಜಿ. ವೆಂಕಟೇಶ ಮೂರ್ತಿಯವರು ಲಘು ಹಾಸ್ಯ ಲೇಖನಗಳು, ಚುಟುಕಗಳು, ಕವಿತೆಗಳು ಇಂಥವನ್ನು ಸೊಗಸಾಗಿ ಬರೆಯುತ್ತಾರೆ. ಇವರ “ಲಲಿತ ವನ” ಎನ್ನುವ ಪ್ರಬಂಧ

ಮತ್ತು ಕವಿತೆಗಳ ಸಂಕಲನ ಪ್ರಕಟವಾಗಿದೆ. ಶ್ರೀಯುತರು ಇಂದು “ಹರ್ಷ ತಾರದ ವರ್ಷ” ಎಂದು ಕೊರೋನಾ ದುರಿತ ಕಾಲದ ದುರಂತಗಳ ದರ್ಶನವನ್ನು ಮಾಡಿಸಿದರು. ಆದರೆ ಮುಂಬರುವ ವರ್ಷ ಹರ್ಷದಾಯಕವಾಗಿರಲಿ ಎನ್ನುವ ಆಶಾಭಾವನೆಯನ್ನೂ ವ್ಯಕ್ತಪಡಿಸಿದರು.

23. ಶ್ರೀ ಶ್ರೀಧರ ಬಾಣಾವರ ಅವರು ನುರಿತ ಬರಹಗಾರರು. ಅನೇಕ ಮಾಹಿತಿಪೂರ್ಣ ಲೇಖನಗಳನ್ನು, ಹಣಕಾಸು ಸಂಬಂಧಿತ ಲೇಖನಗಳನ್ನು ಪತ್ರಿಕೆಗಳಲ್ಲಿ ಬರೆಯುತ್ತಿರುತ್ತಾರೆ. ಇಂದು ಅವರು ಟಿ. ಜಿ. ಶ್ರೀನಿಧಿಯವರು ಬರೆದ ಪುಟ್ಟ “ಪುಟ್ಟಿಯ ಪರಿಸರ ಪಾಠಗಳು” ಎನ್ನುವ ಪುಸ್ತಕದ ಪರಿಚಯವನ್ನು ಮಾಡಿಕೊಟ್ಟರು. ಪರಿಸರ ಸಂಬಂಧಿಯಾದ ವಿಷಯಗಳನ್ನು ಮಕ್ಕಳ ಸಂವಾದದಿಂದಲೇ ಕಟ್ಟಿಕೊಟ್ಟಿರುವ ವಿಶೇಷತೆಯಿರುವ ಪುಸ್ತಕದ ಪರಿಚಯ ಎಲ್ಲರಿಗೂ ಆಸಕ್ತಿಯನ್ನೂ ಹುಟ್ಟಿಸಿತು.

24. ಶ್ರೀ ಹೆಚ್. ಎಲ್. ಗುರುಪ್ರಸಾದ್ ಅವರು ನಮ್ಮ ನೋಡಿಯೋ ಸಾಹಿತ್ಯ ಕಾರ್ಯಕ್ರಮಗಳ ಬೆನ್ನೆಲುಬು ಮತ್ತು ಹೆಮ್ಮೆಯ ರೂವಾರಿ. ಪ್ರಾಚಾರ್ಯ ಎಚ್ಚೆಸ್ಕೆಯವರ ಸಮಗ್ರ ಪರಿಚಯವನ್ನು ವೇದಿಕೆಯಲ್ಲಿ ಮಾಡಿಕೊಟ್ಟಿದ್ದಾರೆ. ಈಗ ಬೇಂದ್ರೆಯವರ ಕಾವ್ಯಗಳ ಪರಿಚಯವನ್ನು ಮಾಡಿಕೊಡುತ್ತಿದ್ದಾರೆ. ಇಂದಿನ ಲೇಖನ ಬೇಂದ್ರೆಯವರ ಮೇಲೆ ಶ್ರೀಮಾತಾ ಶ್ರೀ ಅರವಿಂದರ ಪ್ರಭಾವವನ್ನು ಕುರಿತಾದದ್ದು. ಹಲವು ಕವಿತೆಗಳ ಮೂಲಕ ಸೋದಾಹರಣವಾಗಿ ತಮ್ಮ ಲೇಖನವನ್ನು ಮಂಡಿಸಿದರು. ಬೇಂದ್ರೆಯವರ ಬಗ್ಗೆ ಅಧ್ಯಯನ ಮಾಡಲಿಚ್ಛಿಸುವವರಿಗೆ ಸಂಗ್ರಹಯೋಗ್ಯ ಲೇಖನವಿದು.

25. ಶ್ರೀ. ಕೆ. ಎನ್. ಮಹಾಬಲ ಅವರು ಉತ್ತಮ ಕವಿ, ಕತೆಗಾರರು ಮತ್ತು ಹಾಸ್ಯ ಬರಹಗಾರರು. ಇವರ ಎರಡು ಹಾಸ್ಯ ಸಂಕಲನಗಳು ಈಗಾಗಲೇ ಪ್ರಕಟವಾಗಿವೆ. ಸಾನೆಟ್‌ಗಳ ಸಂಕಲನ ಹೊರಬರುವುದರಲ್ಲಿದೆ. ಇಂಗ್ಲಿಷ್ ಕವಿತೆಗಳ ಅನುವಾದವನ್ನು ಸಹಾ ಕೈಗೆತ್ತಿಕೊಂಡಿದ್ದಾರೆ. ಸಾನೆಟ್‌ಗಳು ಇವರ ಪ್ರಿಯವಾದ ಕಾವ್ಯ ಬಂದ. ಇಂದು ಪ್ರಸ್ತುತ ಪಡಿಸಿದ ಸಾನೆಟ್ ಈಗಾಗಲೇ ವೇದಿಕೆಯಲ್ಲಿ ಪ್ರಸ್ತುತವಾಗಿತ್ತು. ಎಂತಹ ಪಂಡಿತನೇ ಆದರೂ, ಏನೇ ಧರ್ಮಬೋಧನೆಯನ್ನು ಮಾಡಿದರೂ ದಕ್ಷಿಣೆಯ ವ್ಯಾಮೋಹದಿಂದ ಹೊರಬರಲಾಗಲಿಲ್ಲ ಎನ್ನುವುದನ್ನು ವ್ಯಂಗ್ಯದ ದಾಟಿಯಲ್ಲಿ ನಿರೂಪಿಸಿದ ಕವಿತೆ. ಸೊಗಸಾಗಿತ್ತು.

ಈದಿನ ಸುಮಾರು ಎರಡೂವರೆ ಗಂಟೆಗಳ ಕಾಲ ಪ್ರಸ್ತುತ ಪಡಿಸಿದ ಇಪ್ಪತ್ತೈದು ಜನರ ಪ್ರಸ್ತುತಿಯನ್ನೂ ಕೇಳಿ ನನಗೆ ಅರ್ಥವಾದಷ್ಟು ಮಟ್ಟಿಗೆ ನಿಮ್ಮೊಂದಿಗೆ ಇಷ್ಟು ಹೊತ್ತೂ ಅಭಿಪ್ರಾಯಗಳನ್ನು ಹಂಚಿಕೊಂಡಿದ್ದೇನೆ. ನನಗೆ ಅಧ್ಯಕ್ಷ ಸ್ಥಾನದ ಅವಕಾಶವನ್ನು, ಹಿರಿಮೆಯನ್ನು ಕೊಟ್ಟ ದಾಸೋಹದ ಸಂಚಾಲಕರಿಗೆ ನನ್ನ ಹೃತ್ಪೂರ್ವಕ ನಮನಗಳು.

ಟಿ. ಎಸ್. ಶ್ರವಣ ಕುಮಾರಿ.

ಕುಮಾರವ್ಯಾಸ ಭಾರತದ ರಸಘಟ್ಟಗಳು - ಕಾರ್ಯಕ್ರಮದ ವರದಿ

೨೬-೦೧-೨೦೨೧, ಸಂಜೆ ೦೫.೦೦ ಗಂಟೆಗೆ ಸರಿಯಾಗಿ ಕಾರ್ಯಕ್ರಮ ಆರಂಭವಾಯ್ತು. ಆರಂಭದಲ್ಲಿ ಸ್ವಾಗತ ಭಾಷಣ ಮಾಡಿದ ಶ್ರೀ ಗಣಪತಿ ಹೆಗಡೆಯವರು ಇಬ್ಬರೂ ವಿದುಷಿಯರ ಸಂಕ್ಷಿಪ್ತ ಪರಿಚಯವನ್ನು ಮಾಡಿಕೊಟ್ಟರು.

ವಿದುಷಿ ಸುಜಾತ ಗೋಪಿನಾಥ್ ರವರು ಖ್ಯಾತ ಗಮಕಿ ಶ್ರೀಮತಿ ಗಂಗಮ್ಮ ಕೇಶವಮೂರ್ತಿಯವರ ಶಿಷ್ಯೆಯಾಗಿದ್ದು ಗಮಕ ಕೇಸರಿ ಬಿರುದಾಂಕಿತರಾಗಿದ್ದಾರೆ.ಅನೇಕ ವಿದ್ಯಾರ್ಥಿಗಳಿಗೆ ಸಂಗೀತ ತರಬೇತಿ ನೀಡುತ್ತಿರುವ ಇವರು ಹರಿಹರದಲ್ಲಿ ಮುಖ್ಯೋಪಾಧ್ಯಾಯಿನಿಯಾಗಿ ಕಾರ್ಯ ನಿರ್ವಹಿಸುತ್ತಿದ್ದಾರೆ ಎಂದರು.
ಶ್ರೀಮತಿ ಶಾಂತಾ ನಾಗಮಂಗಲರವರು ಅಪಾರ ವಿದ್ವತ್ ಹೊಂದಿದವರಾಗಿದ್ದು ತ್ರಿಭಾಷಾ ಎಂ.ಎ ಜೊತೆಗೆ ಹಿಂದಿಯಲ್ಲಿ ಎಂ.ಫಿಲ್ ಮಾಡಿದ್ದಾರೆ.ಕುಮಾರವ್ಯಾಸ ಭಾರತವೆಂಬ ಸಾಗರದ ಮೇಲೆ ಮೇಲೆ ತೇಲಾಡಿದರೆ ಕೇವಲ ನೊರೆ ಮತ್ತು ಉಪ್ಪು ಸಿಗಬಹುದು.ಇವರು ಆಳಕ್ಕಿಳಿದು ಮುತ್ತುರತ್ನಗಳನ್ನಾಯ್ದು ನಮಗೆ ನೀಡುತ್ತಿದ್ದಾರೆ ಎಂದು ಹೇಳಿ ಎಲ್ಲರಿಗೂ ಕಾರ್ಯಕ್ರಮಕ್ಕೆ ಆತ್ಮೀಯ ಸ್ವಾಗತ ಬಯಸಿದರು.

ಪ್ರಧಾನ ಸಂಚಾಲಕರಾದ ಶ್ರೀ ಬೆಂ.ಶ್ರೀ ರವೀಂದ್ರರವರು ಮಾತನಾಡಿ ಕುಮಾರವ್ಯಾಸ ಭಾರತದ ರಸಘಟ್ಟವೆಂಬ ಸರಣಿಲೇಖನ ವೇದಿಕೆಯಲ್ಲಿ ಪ್ರಸ್ತುತವಾಗಿ ಎಲ್ಲರ ಮನಸೂರೆಗೊಂಡಿತ್ತು.ಅವರ ಬಾಯಿಂದಲೇ ಈ ಚಿತ್ರಣವನ್ನು ಕೇಳಬೇಕೆಂಬ ಅಪೇಕ್ಷೆ ವ್ಯಕ್ತಪಡಿಸಿದಾಗ ಒಪ್ಪಿದ್ದರಿಂದ ಮತ್ತೆ ಕುಮಾರವ್ಯಾಸ ವೇದಿಕೆಗೆ ಬರುವಂತಾಗಿದೆ ಎಂದರು.ನಾಳೆಯ ದಿನವೇ ಕುಮಾರವ್ಯಾಸನ ಜಯಂತಿಯಾಗಿರುವುದರಿಂದ ಇಂದಿನ ಕಾರ್ಯಕ್ರಮ ಹೆಚ್ಚು ಅರ್ಥಪೂರ್ಣಮತ್ತು ಅಪರೂಪದ ಸನ್ನಿವೇಶ ಎಂದರು.

ಇದೇ ವೇದಿಕೆಯಿಂದ ಜನವರಿ 31 ರಂದು ಶ್ರೀ ದ ರಾ ಬೇಂದ್ರೆಯವರ ೧೨೫ ನೇ ಜನ್ಮದಿನದ ಸ್ಮರಣಾರ್ಥ ಶುಭಶ್ರೀ ಪ್ರಸಾದ್ ಮತ್ತು ವೇದಿಕೆಯ ೨೦ ಗಾಯಕರಿಂದ ಕವಿದಿನ ವಿಶೇಷ ಕಾರ್ಯಕ್ರಮ ನಡೆಯಲಿದೆ.
ಫೆಬ್ರವರಿ ೭ ರಂದು ಶ್ರೀಮತಿ ಜಯಶ್ರೀ ಅರವಿಂದ್ ರವರಿಂದ ಸುಗಮಸಂಗೀತದ ಬಗ್ಗೆ ಕಾರ್ಯಕ್ರಮವಿದ್ದು , ಎರಡನೇ ಶನಿವಾರ ೧೮೭ ನೇ ಸಾಹಿತ್ಯ ದಾಸೋಹ ಕಾರ್ಯಕ್ರಮ ನಡೆಯಲಿದೆ ಎಂದರು. ಗಣರಾಜ್ಯೋತ್ಸವದ ಶುಭಾಶಯಗಳನ್ನು ಹೇಳಿ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು.

ವೇದಿಕೆಯ ಸಂಚಾಲಕರ ಉತ್ಸಾಹ, ಸಾಹಿತ್ಯಪ್ರೀತಿ, ನುಡಿಯ ಮೇಲಿನ ಪ್ರೇಮವನ್ನು ಮೆಚ್ಚಿ ಮಾತನಾಡಿದ ಶ್ರೀಮತಿ ಶಾಂತಾರವರು ಹೆಚ್ಚುಜನ ಬ್ಯಾಂಕಿನವರೇ ಇರುವ (ಭಾವನೆಗಳ ಲೆಕ್ಕಾಚಾರ!)
ಈ ವೇದಿಕೆಗೆ ತಮ್ಮನ್ನು ಪರಿಚಯಿಸಿದ ಶ್ರೀಮತಿ ರತ್ನಾ ಮೂರ್ತಿಯವರಿಗೆ ಮೊದಲು ಧನ್ಯವಾದಗಳನ್ನು ಹೇಳಿದರು.

ಈ ಹಿಂದೆ ಶ್ರೀ ಜಿ.ಎನ್ ನರಸಿಂಹ ಮೂರ್ತಿಯವರಿಂದ ಗಣಕದ ಕಣ್ಣಿನಲ್ಲಿ ಕುಮಾರವ್ಯಾಸ ಕಾರ್ಯಕ್ರಮ ವೇದಿಕೆಯಲ್ಲಿ ನಡೆದಿದ್ದು ,ಇಂದಿನ ಕಾರ್ಯಕ್ರಮ ಅದರ ಮುಂದುವರೆದ ಭಾಗವೆಂದು ಭಾವಿಸಬಹುದು ಎಂದ ಅವರು ಕುಮಾರವ್ಯಾಸನ ಬಗ್ಗೆ ಮಾಹಿತಿಯನ್ನು ಕೊಡಲು ಹೋಗದೇ ಇಂದಿನ ಕಾರ್ಯಕ್ರದಲ್ಲಿ ನೇರವಾಗಿ ಪ್ರವೇಶಿಸುವುದಾಗಿ ಹೇಳಿದರು.
ಶ್ರೀ ಬೆಂ.ಶ್ರೀ ರವೀಂದ್ರ ರು ಇಂದಿನ ಕಾರ್ಯಕ್ರಮಕ್ಕೆ ವೇದಿಕೆಯಲ್ಲಿ ಪ್ರಸ್ತುತಪಡಿಸಿದ ಸ್ವಾಗತಗೀತೆಯನ್ನು ಶ್ಲಾಘಿಸಿ ಅದರಲ್ಲಿ ಬರುವ ಘಟ್ಟ ಎಂಬ ಪದ ಸಂಸ್ಕೃತ ವೂ ಆಗಿದ್ದು ಅದಕ್ಕೆ ನದಿ,ತೊರೆಯನ್ನು ಪ್ರವೇಶಿಸಲು ಇರುವ ದಾರಿ ಎಂಬ ಅರ್ಥವಿದೆ.ಅಂತೆಯೇ ಕುಮಾರವ್ಯಾಸನ ಕಾವ್ಯದ ರಸದ ಮಡುವನ್ನು ಪ್ರವೇಶಿಸಲು ಇರುವ ಹಲವಾರು ದ್ವಾರಗಳಲ್ಲಿ ವಿರಾಟ ಪರ್ವವೂ ಒಂದು ಎಂದರು.
ಚಿಕ್ಕ ಆಕರ್ಷಕ ಪರ್ವ ಇದಾಗಿದ್ದು,ಆತಂಕದಿಂದ ಆರಂಭಗೊಂಡ ಅಜ್ಞಾತವಾಸ ವಿವಾಹ ಮಂಗಲದಲ್ಲಿ ಮುಗಿದು ದೊಡ್ಡ ಮಟ್ಟದಲ್ಲಿ ಪ್ರಕಾಶಮಾನವಾಗಿ ಪ್ರಕಟಗೊಳ್ಳುವ ಈ ಸ್ವತಂತ್ರ ಕಥಾನಕ ,ದ್ರೌಪದಿ ಸ್ವಯಂವರದ ಮುಂದಿನ ಭಾಗವಾಗಿದೆ ಎಂದು ಹೇಳಿ ಪೀಠಿಕೆಯ ವಿವರ ನೀಡಿದರು.

ಅರಮನೆಯ ರಾಜಕೀಯ,ಕೆಲಸಗಾರರ ಮೇಲಿನ ಲೈಂಗಿಕ ದೌರ್ಜನ್ಯ, ಸೈರಂಧ್ರಿ ಎಂಬ ವೃತ್ತಿನಾಮ ಹೊಂದಿದ ದ್ರೌಪದಿ ಅನುಭವಿಸಿದ ಯಾತನೆ ಇವೆಲ್ಲ ಇಂದಿಗೂ ಪ್ರಸ್ತುತವಾಗಿದ್ದು ಉದ್ಯೋಗ ಕ್ಷೇತ್ರದಲ್ಲಿ ಮಹಿಳೆಯರು ಇಂತಹ ಸಂಕಟ ಅನುಭವಿಸುತ್ತಿದ್ದಾರೆ ಎಂದರು.

ಕೀಚಕನ ವಧೆಯ ಪೂರ್ವ ರಂಗಸಿದ್ಧತೆಯ ಪದ್ಯ ವಾಚನ ಮತ್ತು ವ್ಯಾಖ್ಯಾನವನ್ನು ಇಬ್ಬರೂ ವಿದುಷಿಯರು ಸುಮಾರು ಒಂದೂವರೆ ಗಂಟೆಯ ಕಾಲ ಅಮೋಘವಾಗಿ ,ಬಹಳ ರಸವತ್ತಾಗಿ ಪ್ರಸ್ತುತಪಡಿಸಿದರು.

ಮುದುಕನಾಗಿದ್ದ ವಿರಾಟರಾಜನ ಎಳೆಯ ಹೆಂಡತಿ ಸುದೇಷ್ಣೆಯ ತಮ್ಮ ,ಅತುಳ ಭುಜಬಲದವನೂ,ವಿರಾಟನಗರದ ಸೇನಾಧಿಪತಿಯಾಗಿ ರಾಜ್ಯದ ಉಸ್ತುವಾರಿ ನೋಡಿಕೊಳ್ಳುತ್ತಿದ್ದವನೂ ಆದ ಲಂಪಟ ಕೀಚಕನ ಪ್ರವೇಶದೊಂದಿಗೆ ಕಥೆ ಆರಂಭವಾಯ್ತು.

ರಾಜಸೂಯಯಾಗ ಮಾಡಿದ ಚಕ್ರವರ್ತಿಯ ಮಡದಿಯಾದ ಅಪ್ರತಿಮ ಸುಂದರಿ ದ್ರೌಪದಿ ಇದೀಗ ಸಣ್ಣ ಪಾಳೆಗಾರನ ಮಡದಿಗೆ ದಾಸಿಯಾಗಿದ್ದು ,ಇತರ ದಾಸಿಯರ ನಡುವೆ ಇದ್ದ ಅವಳ ಮೇಲೆ ಕೀಚಕನ ಕಣ್ಣು ಬೀಳುತ್ತದೆ." ಸೂರೆಹೋಯಿತು ಚಿತ್ತ .ಕಂಗಳು ಮಾರುಹೋದವು" ಆಕೆಯ ಅತಿಶಯ ಚೆಲುವನ್ನು ನೋಡಿ ಕೀಚಕನ ಪಂಚೇಂದ್ರಿಯಗಳೇ ಸೋತು ಹೋಗುತ್ತವೆ.ಮನಸ್ಸು ಮನ್ಮಥನ ಬಾಣಕ್ಕೆ ಸಿಕ್ಕು ಕಾಮ ಬಾಧೆ ಹೆಚ್ಚುವುದು

ಇಲ್ಲಿ ಸೈರಂಧ್ರಿಯ ಸೌಂದರ್ಯ ವರ್ಣನೆಯನ್ನು ಕೀಚಕನ ಸ್ವಭಾವವನ್ನೂ ಬಹಳ ಸೊಗಸಾಗಿ ವರ್ಣಿಸಿದರು.

ಮರುದಿನ ಜೊತೆಯಲ್ಲಿದ್ದ ಹಡಪದವರನ್ನು ಆಚೆಕಳಿಸಿದ ಕೀಚಕ ,ಸೈರಂಧ್ರಿ ಯ ಬಳಿ ತೆರಳಿ ಕಾಮತಾಪತಣಿಸುವಂತೆ ಬೇಡಿಕೊಳ್ಳುತ್ತಾನೆ. ಆಕೆ ಹೇಳುವ ಬುದ್ಧಿಮಾತು ಕೇಳುವುದಿಲ್ಲ. ಮನದ ವಿಕಾರದಿಂದ ಮಾರಿಯ ಜೊತೆ ಸರಸ ಬಯಸಿದರೆ ನಿನಗೆ ಸಾವು ನಿಶ್ಚಯವೆಂದು ಆಕೆ ಎಚ್ಚರಿಸಿದಾಗ,ನೀನು ಒಪ್ಪದಿದ್ದರೆ ಕಾಮಜ್ವರದಿಂದಲೇ ನಾನು ಸಾಯುತ್ತೇನೆ.ನನ್ನ ಜೀವ ಉಳಿಸು.ಉಳಿದ ನನ್ನೆಲ್ಲ ಅರಸಿಯರನ್ನೂ ನಿನ್ನ ದಾಸಿಯರನ್ನಾಗಿ ಮಾಡುವೆ ಎಂದು ಬೇಡಿಕೊಳ್ಳುತ್ತಾನೆ.

ಅಕ್ಕನ ಶೌಚಗಾತಿಯಲ್ಲಿ ಮಹಾಬಾಹು ಕೀಚಕ ಬೇಡಿಕೊಳ್ಳುವ ಸನ್ನಿವೇಶವನ್ನು,ಕುಮಾರವ್ಯಾಸ ನ ಶಬ್ದ ಪ್ರಯೋಗವನ್ನು(ಕಡಿದು ಹರವುವರು)ಅಲ್ಲಲ್ಲಿ ಸಾಕಷ್ಟು ವಿವರಣೆಗಳೊಂದಿಗೆ ಕಣ್ಣಿಗೆ ಕಟ್ಟುವಂತೆ ವಿವರಿಸಿದರು.

ಬೇಡಿಕೆ ಫಲಿಸದಿದ್ದಾಗ ಅಕ್ಕ ಸುದೇಷ್ಣೆಯ ಮುಂದೆ ತನ್ನ ಬಯಕೆ ತಿಳಿಸಿ ರೋಧಿಸುತ್ತಾನೆ.

ಕೊನೆಗೆ ಅಳುವ ತಮ್ಮನ ಬಗ್ಗೆ ಮೋಹದಿಂದ ಸುದೇಷ್ಣೆ,ಸೈರಂಧ್ರಿಯನ್ನು ಒತ್ತಾಯಿಸಿ ಕೀಚಕನಲ್ಲಿಗೆ.. ಕಳಿಸುತ್ತಾಳೆ. ಕೀಚಕ ನೀಡುವ ತೊಂದರೆಯನ್ನು ರಾಜಸಭೆಗೆ ಹೋಗಿ ಹೇಳಿದರೂ ಪ್ರಯೋಜನವಾಗುವುದಿಲ್ಲ.

ವಸ್ತ್ರಾಪಹರಣದ ಅವಮಾನ,ಜಯದ್ರಥನಿಂದ ಅಪಹರಣಕ್ಕೊಳಗಾದ ಅವಮಾನ ಮತ್ತೀಗ ಕೀಚಕನಿಂದಾದ ಅವಮಾನದಿಂದ ಬೆಂದ ದ್ರುಪದೆ ವಿಷವನ್ನು ಕುಡಿಯಲು ತೀರ್ಮಾನಿಸಿ ," ಎಲ್ಲರೊಳು ಕಲಿಭೀಮನೇ ಮಿಡುಕುಳ್ಳ ಗಂಡಸು" ಎಂದು ಕೊನೆಯ ಪ್ರಯತ್ನವಾಗಿ ರಾತ್ರಿ ಅವನ ಬಳಿಗೆ ಹೋಗುತ್ತಾಳೆ.

ಅರಮನೆಯ ಅಡುಗೆಮನೆಯ ವರ್ಣನೆ ,ಮಾರನೆಯ ದಿನದ ಅಡುಗೆಗೆ ತಯಾರಿ ಮಾಡಿಟ್ಟ ಮಂಸದ ಖಾದ್ಯಗಳ ವಿವರಣೆ ಎಲ್ಲವೂ ಕುಮಾರವ್ಯಾಸನ ಪದ್ಯಗಳಲ್ಲಿ ಮೂಡಿಬಂದಿರುವ ಪರಿಯನ್ನು ವಿವರಿಸಿದರು.

ಇಷ್ಟೆಲ್ಲಾ ಅಡಿಗೆಮಾಡುವುದನ್ನು ಎಲ್ಲಿ ಕಲಿತ ಎಂಬ ಪ್ರಶ್ನೆ ಮೂಡುವುದರ ಜೊತೆಗೇ ವಿಧಿ ಮುನಿದರೆ ಹೇಗೆಲ್ಲ ಮಾಡಿಸುತ್ತದೆ ಎಂದು ಸಂಕಟ ಪಡುತ್ತಾ ಮಲಗಿದ್ದ ಭೀಮನ ಬಳಿ ತೆರಳುವುದು,ನಂತರ ಅವರ ನಡುವಿನ ಸಂವಾದ,ಅಸಹಾಯಕತೆವ್ಯಕ್ತಪಡಿಸುವ ಭೀಮ,ಕೊನೆಗೆ ಸಾಯುವೆನೆಂದಾಗ ಸಂತೈಸಿ "ಕೀಚಕನ ಕೌರವೇಂದ್ರನ ಹರಣಕೆ ಇದಿಕೋ ಕಂಚಗಾರವ" ಎಂದು ಆಕೆಗೆ ಆಶ್ವಾಸನೆ ನೀಡಿ ಕಳಿಸುತ್ತಾನೆ

ನವರಸಭರಿತವಾದ ಪ್ರಸಂಗ ಕೇಳುಗರ ಮನೆಸೂರೆಗೊಂಡಿತ್ತು.
ಸಂಧರ್ಭೋಚಿತವಾಗಿ ರಾಮಾಯಣ ಹಾಗೂ ವ್ಯಾಸಭಾರತದ ಪ್ರಸಂಗಗಳನ್ನೂ ಉದಹರಿಸಿ ಕುಮಾರ ವ್ಯಾಸ ಭಾರತದ ಶಬ್ಧ ಪ್ರಯೋಗ, ಪ್ರಬಂಧ ಸೂತ್ರತೆ,ಛಂದಸ್ಸು, ಬಳಸುವ ಉಪಮೆಗಳು,ಕೊಡುವ ವಿವರಗಳ ಬಗ್ಗೆ ತಿಳಿಸುತ್ತಾ ಗದುಗಿನಲ್ಲಿದ್ದ ಕುಮಾರವ್ಯಾಸನ ಅಪಾರ ಜ್ಞಾನ,ಪ್ರಾಪಂಚಿಕ ತಿಳುವಳಿಕೆ ಎಲ್ಲವೂ ಬೆರಗು ಹುಟ್ಟಿಸುವಂತಹದು ಎಂದರು.

ವಂದನಾರ್ಪಣೆ ಮಾಡಿದ ಶ್ರೀ ಎಂ ಮಲ್ಲಿಕಾರ್ಜುನರವರು ತಮ್ಮ ತಾಯಿಯ ತಂದೆ ಚನ್ನಪ್ಪ, ಚಿಕ್ಕಬಳ್ಳಾಪುರದ ಮಾಯಣ್ಣ ಎಂಬುವವರ ಗಮಕಕ್ಕೆ ವ್ಯಾಖ್ಯಾನ ಮಾಡುತ್ತಿದ್ದರೆಂಬುದನ್ನು ಸ್ಮರಿಸಿದರು.ಕುಮಾರವ್ಯಾಸ ಭಾರತದ ಆರಂಭದ ಕೆಲವು ಪದ್ಯಗಳನ್ನು ಮಾತ್ರಾ ಗುನುಗುತ್ತಿದ್ದ ನಮಗೆ ಅದ್ಭುತ ಗಮಕವಾಚನ ಮತ್ತು ವ್ಯಾಖ್ಯಾನ ಕೇಳಿ ಬಹಳ ಸಂತೋಷವಾಯ್ತು ಎಂದರು.
ವಿದುಷಿಯರಿಗೆ, ಸ್ವಾಗತ ಕೋರಿದ ಗಣಪತಿ ಹೆಗಡೆಯವರಿಗೆ, ರೂವಾರಿ ರವೀಂದ್ರರಿಗೆ, ತಾಂತ್ರಿಕ

ನಿರ್ವಹಣೆ ಮಾಡಿದ ಶ್ರೀ ಕೆ.ಎನ್ ಜಯರಾಮ್ ರವರಿಗೆ ಹಾಗೂ ಗುರುಪ್ರಸಾದ್, ಗುರುರಾಜ ಶಾಸ್ತ್ರಿಯವರಿಗೆ ಮತ್ತು ಕಾರ್ಯಕ್ರಮದಲ್ಲಿ ಭಾಗವಹಿಸಿದ ಎಲ್ಲ 50 ಜನರಿಗೂ ವಂದನೆ ಸಲ್ಲಿಸಿದರು.

ಒಂದು ಕೊಂಡಿಯಲ್ಲಿ/ ಮನೆಯಲ್ಲಿ ಎರಡು ಮೂರು ಜನ ಕಾರ್ಯಕ್ರಮ ನೋಡುತ್ತಿರುವುದರಿಂದ ಭಾಗವಹಿಸಿದವರ ಸಂಖ್ಯೆ ಕೇವಲ ಐವತ್ತಾಗಿರದೆ ಇನ್ನೂ ಬಹಳಷ್ಟು ಹೆಚ್ಚಿರುತ್ತದೆ ಎಂದರು.
ಸಮಯ ಮೀರಿದ್ದರಿಂದ ಸಂವಾದ ಕಾರ್ಯಕ್ರಮ ರದ್ದು ಮಾಡಲಾಯಿತು. ಕಾರ್ಯಕ್ರಮ ಯೂಟ್ಯೂಬ್ನಲ್ಲಿ ಲಭ್ಯವಿದ್ದು ಆಸಕ್ತರು ವೀಕ್ಷಿಸಬಹುದು

ವರದಿ: ಹುವಾಶ್ರೀ
ಸಂಚಾಲಕರ ಪರವಾಗಿ

ಬೇಂದ್ರೆ ನಮನ - ಬೇಂದ್ರೆ ಗೀತ ಗಾಯನ ಕಾರ್ಯಕ್ರಮದ ವರದಿ

ಸಮನ್ವಯ ಸಮಿತಿ ಕನ್ನಡವೇ ಸತ್ಯ - ನೋಡಿಯೋ ಸಾಹಿತ್ಯ ದಾಸೋಹ ವೇದಿಕೆ ೩೦-೦೧-೨೦೨೧, ಶನಿವಾರ, ಸಂಜೆ ೦೫.೦೦ ಗಂಟೆಗೆ ಸರಿಯಾಗಿ ಕಾರ್ಯಕ್ರಮ ಆರಂಭವಾಯ್ತು.

ಶ್ರೀ ರಮೇಶ್ ಪೋಲೇನಹಳ್ಳಿಯವರು ಎಲ್ಲ ಸಾಹಿತ್ಯಾಸಕ್ತರಿಗೆ, ಬೇಂದ್ರೆ ಪ್ರಿಯರಿಗೆ ಸ್ವಾಗತ ಬಯಸಿ ಇಂದಿನ ಕವಿದಿನ ಸಂಭ್ರಮದಲ್ಲಿ ವಿಶೇಷ ಉಪನ್ಯಾಸ ನೀಡಲಿರುವ, ವೇದಿಕೆಯ

ಸದಸ್ಯರಾಗಿದ್ದು ಎಲ್ಲರ ಪರಿಚಿತರೇ ಆಗಿರುವ ಡಾ ಶುಭಶ್ರೀ ಪ್ರಸಾದ್ ರವರನ್ನು ವೇದಿಕೆಗೆ ಔಪಚಾರಿಕವಾಗಿ ಪರಿಚಯಿಸಿದರು.

ಕನ್ನಡದಲ್ಲಿ ಎಂ.ಎ ಜೊತೆಗೆ ಪಿಎಚ್ ಡಿ .ಸಕ್ಕರೆ ಊರು ಮಂಡ್ಯದ ಬಾರತೀಯ ಸ್ಟೇಟ್ ಬ್ಯಾಂಕಿನಲ್ಲಿ ಉದ್ಯೋಗಿಯಾಗಿರುವ ಶುಭಶ್ರೀಯವರು ಸಾಹಿತ್ಯ, ಚಿತ್ರಗ್ರಹಣ,ವಾರ್ತಾವಾಚನ,ಕಾರ್ಯಕ್ರಮ ನಿರೂಪಣೆ ಇತ್ಯಾದಿ ಹಲವು ಚಟುವಟಿಕೆಗಳಲ್ಲಿ ತೊಡಗಿಕೊಂಡಿದ್ದು ಹಲವಾರು ಪ್ರಶಸ್ತಿಗಳನ್ನು ಪಡೆದಿದ್ದಾರೆ ಎಂದು ಕೆಲವನ್ನು ಹೆಸರಿಸಿ ಸ್ವಾಗತ ಕೋರಿದರು.

ಬೇಂದ್ರೆ ಅಜ್ಜನಿಗೆ ಭಾವ ನಮನ ಎಂಬ ಪಿ ಡಿ ಎಫ್ ಸಂಕಲನ ಪ್ರತಿ ಹೊರ ತರುತ್ತಿರುವ ಗುರುಪ್ರಸಾದ್ ಹಾಲ್ಕುರಿಕೆಯವರಿಗೆ ಸ್ವಾಗತ ಕೋರಿದರು. ಭಾರತೀಯ ಸ್ಟೇಟ್ ಬ್ಯಾಂಕಿನ ನಿವೃತ್ತ ಮುಖ್ಯ ವ್ಯವಸ್ಥಾಪಕರು, ಸಾಹಿತ್ಯ ಆಧ್ಯಾತ್ಮ ,ಅನುವಾದದಲ್ಲಿ ಆಸಕ್ತರಾಗಿರುವ ಇವರು ರಚಿಸಿರುವ ಅನುವಾದಿತ ಕೃತಿ ಮಹಾತಪಸ್ವಿ ನಾಳೆ ಬಿಡುಗಡೆಯಾಗಲಿದೆ ಎಂದು ಹೇಳಿ ಅವರಿಗೂ, ಗೀತ ಗಾಯನ ಕಾರ್ಯಕ್ರಮದಲ್ಲಿ ಹಾಡಲಿರುವ ಎಲ್ಲ ಗಾಯಕರಿಗೂ ಸ್ವಾಗತ ಕೋರಿದರು.

ಪ್ರಧಾನ ಸಂಚಾಲಕರಾದ ಶ್ರೀ ಬೆಂ.ಶ್ರೀ ರವೀಂದ್ರರವರ ಪ್ರಾಸ್ತಾವಿಕ ನುಡಿಗಳನ್ನು ಪ್ರಸಾರಮಾಡಲಾಯ್ತು.

ಬೇಂದ್ರೆ ನಮನ ಕಾರ್ಯಕ್ರಮ ಮಾಡಬೇಕೆಂಬ ಹಲವರ ಬೇಡಿಕೆಯ ಮೇರೆಗೆ ವೇದಿಕೆ ಈ ಬೇಂದ್ರೆ ಗೀತ ಗಾಯನ ಕಾರ್ಯಕ್ರಮ ಹಮ್ಮಿಕೊಂಡಿತು.

ಬೇಂದ್ರೆ ಅಂದರೆ ಕನ್ನಡದ ಜನ ಜೀವನ,ಕನ್ನಡ ಜಾನಪದ ಸತ್ವ,ಆಧ್ಯಾತ್ಮಿಕ ಅನುಭೂತಿ. ಇಂದು ವೇದಿಕೆಯ ಸದಸ್ಯರ ಗಾಯನ ಕಾರ್ಯಕ್ರಮ ವೇದಿಕೆ ಕವಿಗೆ ಸಲ್ಲಿಸುತ್ತಿರುವ ಗೌರವ.ಕನ್ನಡದ ಜನ ಕನ್ನಡದ ಅತ್ಯುತ್ಕೃಷ್ಟ ಕವಿಗೆ, ಕನ್ನಡವೇ ಆದ ಕವಿಗೆ ಸಲ್ಲಿಸುತ್ತಿರುವ ನಮಸ್ಕಾರ ಎಂಬ ಸಂದೇಶವನ್ನು ರವೀಂದ್ರರವರು ನೀಡಿದರು.

ಡಾ ಶುಭಶ್ರೀಪ್ರಸಾದ್ ರವರು ವರಕವಿ ದ ರಾ ಬೇಂದ್ರೆಯವರ ೧೨೬ ನೇ ಜನ್ಮ ದಿನದ ಶುಭಾಶಯಗಳನ್ನು ತಿಳಿಸಿ ಮಾತು ಆರಂಭಿಸಿದರು.

ಕವಿಯ ಆಶಯಗಳನ್ನು ಅರ್ಥ ಮಾಡಿಕೊಂಡರೆ ಜನ್ಮೋತ್ಸವ ಸಾರ್ಥಕ ಎಂದ ಅವರು ಬೇಂದ್ರೆಯವರ ಜೀವನ ಚಿತ್ರವನ್ನು ಕೆಲವೇ ಮಾತುಗಳಲ್ಲಿ ಸುಂದರವಾಗಿ ಕಟ್ಟಿಕೊಟ್ಟರು.

ಸಾಧನಕೇರಿಯ ಬೇಂದ್ರೆ ಅಂಬಿಕಾತನಯದತ್ತ ಆದ ಬಗೆಯನ್ನು ತಿಳಿಸಿದರು.

ಕನ್ನಡದ ರತ್ನತ್ರಯರಲ್ಲಿ ಒಬ್ಬರಾದ ಅವರು ಪ್ರಕೃತಿ ಪ್ರೀತಿಯ ಜೊತೆಗೆ ಆಧ್ಯಾತ್ಮಿಕ ನೆಲೆಗೆ ಕಾವ್ಯವನ್ನು ಏರಿಸಿದವರು. ಬರೆದದ್ದೆಲ್ಲ ನಾದವಾಯಿತು.

ನಾವೆಲ್ಲ ಪ್ರೀತಿಯಿಂದ ಬೇಂದ್ರೆ ಅಜ್ಜ ಎನ್ನುತ್ತೇವೆ ಎಂದ ಅವರು ಬೇಂದ್ರೆಯವರ ಹಲವು ಕವನದ ಸುಂದರ ಸಾಲುಗಳನ್ನು ಉದಹರಿಸಿ ಆ ಸಾಲುಗಳ ಸ್ವಾರಸ್ಯ ವನ್ನು ಬಣ್ಣಿಸಿದರು.

ಬೇಂದ್ರೆಯವರ ಕಾವ್ಯಗಳು ಕಾಲ ದೇಶ ಭಾಷೆಗಳನ್ನು ಮೀರಿರುವ ಶಕ್ತಿ ಧ್ವನಿ ಯಿಂದ ಕೂಡಿವೆ. ಪ್ರಕೃತಿಯ ಇಂಚಿಚಿಗೂ ಜೀವ ಕೊಡುವ ದಾರ್ಶನಿಕ ಕವಿ ಬೇಂದ್ರೆಯವರು. ಅವರ ಕವನಗಳಲ್ಲಿಬದುಕೇ ಪವಾಡಸದೃಶವಾಗಿ ಕಾವ್ಯವಾಗುತ್ತಾ ಹೋಗುವ ಶಕ್ತಿ ಗೋಚರವಾಗುವುದು. ಬದುಕು ಮತ್ತು ಕಾವ್ಯ ಎರಡನ್ನೂ ಒಂದಾಗಿಸಿಕೊಂಡ ಕವಿ ಕನ್ನಡವವನ್ನು ಬಳಸಿ ಬೆಳೆಸಿದರು ಕನ್ನಡವನ್ನೇ ಉಸಿರಾಡಿದರು. ಭೋಗ ಜೀವಿಗಳಾದ ನಾವು ಬಳಸುವುದಷ್ಟೇ ಅಲ್ಲದೆ ಬೆಳೆಸಿದರೆ ಬೇಂದ್ರೆಯವರ ಸ್ಮರಣೆಗೆ ಅರ್ಥ ಮೂಡುವುದು ಎಂದು ಹೇಳಿದರು.

ಬೇಂದ್ರೆ ಅಜ್ಜನಿಗೆ ಭಾವನಮನ"
(ಬೇಂದ್ರೆ ಲೇಖನ, ಕವನ ಮತ್ತು ಬರಹಗಳ ವಿಮರ್ಶೆಯ ಸಂಕಲನ) ಪಿಡಿಎಫ್ ಪ್ರತಿಯ ಬಿಡುಗಡೆಯನ್ನು ಮಾಡಿ ಶ್ರೀ ಗುರುಪ್ರಸಾದ್ ಹಾಲ್ಕುರಿಕೆಯವರು ಬೇಂದ್ರೆಯವರ ಬಗ್ಗೆ ಮಾತನಾಡಿ ಅವರ ಜೀವನ, ಮತ್ತು ಸಾಹಿತ್ಯದ ಬಗ್ಗೆ ಹಲವು ಮಾಹಿತಿಗಳನ್ನು, ಸಂಗ್ರಹಿಸಿದ ಬಗೆಯನ್ನು ವಿವರಿಸಿದರು. ಸಂಕಲನವವನ್ನು ಎಲ್ಲರೂ ಅಧ್ಯಯನ ಮಾಡಬೇಕೆಂದು ವಿನಂತಿಸಿದರು.

ನಂತರ ಕೆಳಕಂಡ ಗಾಯಕರು ತಮ್ಮ ಗಾಯನವನ್ನು ಭಾವಪೂರ್ಣವಾಗಿ,ಸುಶ್ರಾವ್ಯವಾಗಿ ಪ್ರಸ್ತುತಪಡಿಸಿದರು

೦೧.ಮಂಗಳಾ ನಾಡಿಗ್	ಹೃದಯಸಮುದ್ರ
೦೨. ನಾಗರತ್ನ ಚಂದ್ರಶೇಖರ್	ತುಂಬಿ ಬಂದಿತ್ತು
೦೩. ಕೆ.ಆರ್.ವೆಂಕಟೇಶ್	ರಾಗರತಿ
೦೪. ರಾಧಿಕಾ ವಿ ಗುಜ್ಜರ್	ಪಾಡು
೦೫. ಮನೋರಮಾ ವಿ ಕೆ.	ಬೆಳಗು
೦೬. ಮಾಲತಿ ಶ್ರೀನಿವಾಸನ್	ಗಮಗಮಾಡಸತಾವ
೦೭. ಗೌರಿ ಭಟ್ಟ	ಅಭಂಗ ವಿಠ್ಠಲ
೦೮. ಮೀನಾಕ್ಷಿ	ಜನುಮದ ಜಾತ್ರಿ
೦೯ ಪಲ್ಲವಿ	ಬಾರೋ ಸಾಧನಕೇರಿಗೆ
೧೦. ರತ್ನಾ ಮೂರ್ತಿ	ಹುಬ್ಬಳ್ಳಿಯಾಂವ
೧೧. ಸಂಮ್ಮೋದ ವಾಡಪ್ಪಿ	ಬಿದಿಗೆ ಚಂದ್ರ ಬಂದ ನೋಡು
೧೨ ಧೀರೇಂದ್ರ ಮತ್ತು ಪದ್ಮ ಧೀರೇಂದ್ರ	ಗಂಗಾವತರಣ
೧೩. ವಿಜಯಕುಮಾರಿ	ಯುಗಾದಿ
೧೪. ಜಿ.ವಿ.ನಿರ್ಮಲಾ	ಕೊನೆಯ ಹಾಡು
೧೫. ಮಂಜುಳಾ ಮರಾಠೆ	ತಾಯಿ - ಕೂಸು
೧೬. ಕಲ್ಪನಾ ನಾಗನಾಥ್	ಮಾಯಾ ಕಿನ್ನರಿ
೧೭. ರೇವತಿ ರಾಮಚಂದ್ರ	ಕರಡಿ ಕುಣಿತ

೧೮. ಲಕ್ಷ್ಮೀ ವಿಠಲ್ ಅನಂತ ಪ್ರಣಯ
೧೯. ಸುಜಾತಾ ಗೋಪಿನಾಥ್ ನೃಸಿಂಹ ಸ್ತೋತ್ರ

ಕೊನೆಯಲ್ಲಿ ಶ್ರೀಮತಿ ಶೀಲಾ ಭಂಡಾರ್ಕರ್ ರವರು ಕವಿದಿನದ ವಿಶೇಷ ಉಪನ್ಯಾಸಕರಾಗಿ ಬೇಂದ್ರೆ ಅಜ್ಜನನ್ನು ಇನ್ನಷ್ಟು ಪ್ರೀತಿಸುವಂತೆ ಪರಿಚಯಿಸಿದ ಶುಭಶ್ರಿ ಪ್ರಸಾದ್ ರವರಿಗೆ, ಸ್ವಾಗತ ಕೋರಿದ ಶ್ರೀ ರಮೇಶ್ ಪೋಲೇನಹಳ್ಳಿಯವರಿಗೆ, ಪಿಡಿಎಫ್ ಬಿಡುಗಡೆ ಮಾಡಿದ ಶ್ರೀ ಗುರುಪ್ರಸಾದ್ ಹಾಲ್ಕುರಿಕೆಯವರಿಗೆ, ಹೃದಯಸ್ಪರ್ಶಿಯಾಗಿ ಭಾವಪೂರ್ಣವಾಗಿ ಹಾಡಿದ ಎಲ್ಲ ಗಾಯಕರಿಗೆ, ತಾಂತ್ರಿಕ ನಿರ್ವಹಣೆ ಮಾಡಿದ ಶ್ರೀ ಕೆ ಎನ್ ಜಯರಾಮ್ ಹಾಗೂ ಗುರುದ್ವಯರಿಗೆ, ನಿರ್ವಹಣೆಮಾಡಿದ ಶ್ರೀ ಹು.ವಾ.ಶ್ರೀ ಪ್ರಕಾಶ್ ರವರಿಗೆ,
ಶ್ರೀ ಬೆಂಶ್ರೀ ರವೀಂದ್ರರಿಗೆ ಮತ್ತು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದ ಎಲ್ಲರಿಗೂ ವಂದನಾರ್ಪಣೆ ಸಲ್ಲಿಸಿದರು.
ಕಾರ್ಯಕ್ರಮದ ನಿರೂಪಣೆಯನ್ನು ಶ್ರೀ ಹು ವಾ ಶ್ರೀಪ್ರಕಾಶ್ ರವರು ಮಾಡಿದರು

ವರದಿ: ಹುವಾಶ್ರೀ